## BUDGET ESTIMATES FOR 1975-76 DEMANDS FOR GRANTS DEMANDS NO. 25 AND 26

SRI H. SIDDAVEERAPPA (Minister for Health): Madam Speaker, on the recommendation of the the Governor, I deg to move:

"That a sum not exceeding Rs. 30, 25, 85, 000 be granted to the Government to defray the charges which will come in course of payment during the financial year ending 31st day of Mrach 1976 in respect of Demands No. 25 "Medical Services and Family Planning."

"That a sum not exceeding Rs 5, 61, 90, 000 be granted to the Government to defray the charges which will come in course of payment during the financial year ending 31st day of March 1976 in respect of Demanads No. 26 'Public Health and Sanitation"."

MADAM SPEKER.—Motion moved.

"That a sum not exceeding Rs 30, 25, 85, 000 be granted to the Government to defray the charges which will come in course of payment during the financial year ending 31st day of March 1976 in respect of Demands No. 25 "Medical Services and Family Planning";

"That a sum not exceeding Rs. 5, 61, 90, 000 be granted to the Government to defray the charges which will come in course of payment during the financial year ending 31st day of March 1976 in respect of Demands No. 26 "Public Health and Sanitation"."

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದ ಆರೋಗ್ಯ ಇಲಾಖೆ ಹೆಚ್ಚು ಕಡಿಮೆ ದಿನಕಳೆದಂತೆ ಕ್ಷೀಣವಾಗುತ್ತಿದೆ. ಶ್ರೀಮಾನ್ ಸಿದ್ಧವೀರಪ್ಪನವರಿಗೆ ಬಂದಿರುವ ಅನಾರೋಗ್ಯ ಈ ಇಲಾಖೆಗೂ ಬಂದಿದೆ ಎಂಬ ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಇಂದು ೩೦-೩೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಇವರ ಕೈಗೆ ಕೊಡುತ್ತಿದ್ದೇವೆ. ಆದರೂ ಸಹ ಈ ರಾಜ್ಯದಲ್ಲಿ ಆರೋಗ್ಯಸೇವೆಗಳು ಜನರಿಗೆ ಜಾಸ್ತಿಯಾಗುತ್ತಿಲ್ಲ; ದಿನಕಳೆದಂತೆ ಈ ಆರೋಗ್ಯ ಇಲಾಖೆಯಿಂದ ಸಾಕಷ್ಟು ಸೇವೆ ಸಾಮಾನ್ಯ ಜನರಿಗೆ ಸಿಗುತ್ತಿಲ್ಲ; ದಿನಕಳೆದಂತೆ ಅದು ಕಡಿಮೆಯಾಗುತ್ತಿದೆ. ನಮಗೆ ಶಾಲೆಯಲ್ಲಿ ಪ್ರಾರಂಭದಲ್ಲಿಯೇ ಆರೋಗ್ಯವೇ ಭಾಗ್ಯ ಎಂದು ಹೇಳಿಕೊಡುತ್ತಾರೆ. ಆದರೆ ಈ ದೇಶದಲ್ಲಿ ಬಹುಜನರಿಗೆ ಆರೋಗ್ಯಸೇವೆ ಸಿಕ್ಕುವುದು ದೌರ್ಭಾಗ್ಯವಾಗಿದೆ. ಈಗ ನಮ್ಮ ಜನರಿಗೆ ಒಂದು ಕಡೆ ಅನ್ನದ ಕೊರತೆ ಇದ್ದರೆ ಮತ್ತೊಂದು ಕಡೆಯಲ್ಲಿ ಅನ್ನಾಂಗಗಳ ಕೊರತೆ ಇರುತ್ತದೆ. ಇದರಿಂದ ನಮ್ಮ ಬಡ ದೇಶದಲ್ಲಿ ರೋಗಗಳಿಗೆ ಏನೂ ಕೊರತೆ ಇಲ್ಲ. ಯಾವ ಮನುಷ್ಯನಿಗೆ ಉತ್ತಮವಾದ ಆಹಾರ ಪಡೆಯುವುದಕ್ಕೆ ಆಗುವುದಿಲ್ಲ ಮತ್ತು ಸಾಕಷ್ಟು ಪೌಷ್ಟಿಕಾಂಶಗಳು ಸಿಗುವುದಿಲ್ಲ, ಅಂತಹವರಿಗೆ ರೋಗ ಬರುವುದು ಜಾಸ್ತಿ. ಇಂದು ನಮ್ಮ ದೇಶದಲ್ಲಿ ಶೇಕಡ ೫೦ ರಷ್ಟು ಜನರು ಬಡತನದ ರೇಖೆಯಲ್ಲಿದ್ದಾರೆ. ಒಪ್ಪತ್ತು ಊಟ ಇದ್ದರೆ ಒಪ್ಪತ್ತು ಊಟ ಇರುವುದಿಲ್ಲ; ಹರಿಜನರು, ಗುಡ್ಡಗಾಡುಗಳಲ್ಲಿ ವಾಸ ಮಾಡುವ ಜನರು ಮತ್ತು ನಗರ ಪ್ರದೇಶಗಳಲ್ಲಿರುವ ಸ್ಲಮ್‌ಗಳಲ್ಲಿ ವಾಸ ಮಾಡುವ ಜನರು ಒಪ್ಪತ್ತು ಊಟ ಮಾಡಿದರೆ, ಒಪ್ಪತ್ತು ಊಟ ಮಾಡುವುದಿಲ್ಲ; ಇಂತಹ ಜನರಿಗೆ ಆಸ್ಪತ್ರೆಗಳಲ್ಲಿ ಕನಿಷ್ಠ ಪ್ರಮಾಣದ ಚಿಕಿತ್ಸೆಯೂ ಸಹ ದೊರಕುತ್ತಿಲ್ಲ; ಈ ಆರೋಗ್ಯ ಇಲಾಖೆ ಉತ್ತಮವಾದಂಥ ತಳಹದಿಯ ಮೇಲೆ ನಿಂತು ಚೆನ್ನಾಗಿ ಕೆಲಸ ಮಾಡಬೇಕಾದರೆ ಅದರ ಒಂದು ಕ್ಷೇತ್ರವನ್ನು ಶುದ್ಧಿಯಾಗಿ ಇಟ್ಟುಕೊಳ್ಳಬೇಕು. ಆದರೆ ಇವೊತ್ತು ಮಾನ್ಯ ಆರೋಗ್ಯ ಸಚಿವರು ಹೊಸದಾಗಿ ಒಂದು ಅಡಿಷನಲ್ ಡೈರಕ್ಟರ್ ಪೋಸ್ಟನ್ನು ನಿರ್ಮಾಣ ಮಾಡಿದ್ದಾರೆ. ಈ ಕಾರಣದಿಂದ ಇಂದು ಆಸ್ಪತ್ರೆಗಳದ್ದೇ ಒಂದು ಕಥೆಯಾಗಿದ್ದರೆ, ಈ ಇಲಾಖೆಯದ್ದೇ ಒಂದು ಕಥೆಯಾಗಿಬಿಟ್ಟಿದೆ. ಎಲ್ಲ ಕಡೆಗಳಲ್ಲಿಯೂ ಡೈರಕ್ಟರ್ ಮತ್ತು ಜಾಯಿಂಟ್ ಡೈರಕ್ಟರ್ ಎಂದು ಇರುತ್ತಾರೆ; ಆದರೆ ಇಲ್ಲಿ ಅಡಿಷನಲ್ ಡೈರಕ್ಟರ್ ಎಂದು ಒಂದು ಹೊಸ

ಹುದ್ದೆಯನ್ನು ನಿರ್ಮಾಣ ಮಾಡಿದ್ದಾರೆ. ಈ ಪೋಸ್ಟ್ ಬೇರೆ ರಾಜ್ಯಗಳಲ್ಲಿ ಇದೆಯೋ ಅಥವಾ ಇಲ್ಲವೋ ಗೊತ್ತಿಲ್ಲ ; ಯಾವ ಕಾರಣಕ್ಕೆ ಇದನ್ನು ಸೃಷ್ಟಿ ಮಾಡಿದರೋ ಗೊತ್ತಿಲ್ಲ ; ಇದರಿಂದ ಈ ಇಲಾಖೆಯ ಆಡಳಿತ ಸಂಪೂರ್ಣವಾಗಿ ಹದಗೆಟ್ಟಿದೆ. ಇವರು ಏನು ಕೆಲಸ ಮಾಡಿದ್ದಾರೆಂದರೆ, ಶನಿವಾರ ಆರ್ಡರ್ ಪಾಸ್ ಮಾಡಿ, ಅದೇ ದಿನ ೫ ಗಂಟೆಗೆ ಚಾರ್ಜ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದ ಈ ಇಲಾಖೆಯಲ್ಲಿ ವಿರಸ ಬೆಳೆಯುವುದಕ್ಕೆ ಕಾರಣವಾಗಿದೆ ; ಮಾನ್ಯ ಮಂತ್ರಿಗಳು ಎಷ್ಟು ಆಸ್ಪತ್ರೆಗಳಿಗೆ ಹೋಗಿ ನೋಡಿದ್ದಾರೋ ನನಗೆ ಗೊತ್ತಿಲ್ಲ ; ಒಬ್ಬರಿಗಿಂತ ಜಾಸ್ತಿ ಡಾಕ್ಟರ್‌ಗಳು ಇರುವ ಕಡೆಗಳಲ್ಲಿ ಜನರು ಹೋದಾಗ ಅವರಿಗೆ ಔಷಧ ಕೊಡದಿದ್ದರೆ ಬೇಡ, ಬಂದಂಥ ರೋಗಿಗಳನ್ನು ವಿಚಾರಣೆ ಮಾಡಿ ಅವರಿಗೆ ಕನಿಕರ ತೋರಿಸ ತಕ್ಕಂಥ ಒಂದು ಪದ್ಧತಿ ಜಾರಿಗೆ ಬಂದರೆ ಸಾಕು ; ಈಗ ವಿಕ್ಟೋರಿಯಾ ಆಸ್ಪತ್ರೆಯನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ, ಅಲ್ಲಿ ಈ ಪದ್ಧತಿ ಇಲ್ಲ ;

ಒಬ್ಬರಿಗಿಂತ ಹೆಚ್ಚು ಜನ ಡಾಕ್ಟರುಗಳು ಅಲ್ಲಿ ಇದ್ದರೆ, ಒಬ್ಬ ನೋಡತಕ್ಕ ರೋಗಿಗಳನ್ನು ಇನ್ನೊಬ್ಬರು ನೋಡುವುದಿಲ್ಲ. ಪ್ರತಿಯೊಂದು ಆಸ್ಪತ್ರೆಯಲ್ಲೂ ಒಂದೊಂದು ಡಿವಿಜನ್ ಎಂದು ಮಾಡಿಕೊಂಡಿದ್ದಾರೆ ; ಅವರವರೇ ಒಂದು ಪಾರ್ಟಿ ; ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇದನ್ನು ನಾನು ನೋಡಿದ್ದೇನೆ. ಇವತ್ತು ಒಬ್ಬ ಡಾಕ್ಟರ್ ಬರದಿದ್ದರೆ, ಆ ಡಾಕ್ಟರ್ ನೋಡುವ ರೋಗಿ ಸರಳಂತ್ತಾ ಬಿದ್ದಿದ್ದರೂ ಅವನನ್ನು ಬದುಕಿಸುವುದಕ್ಕೆ ಬೇರೆ ಒಬ್ಬ ಡಾಕ್ಟರ್ ಹೋಗುವುದಿಲ್ಲ ; ಅವನನ್ನು ಮುಟ್ಟು ವುದೇ ಇಲ್ಲ. ಇದೇನು ಕೆಲವೇ ಆಸ್ಪತ್ರೆಗಳಿಗೆ ಸೀಮಿತವಲ್ಲ ; ತಾಲ್ಲೂಕು, ಮಟ್ಟದ, ರಾಜ್ಯ ಮಟ್ಟದ ಇತರ ಎಲ್ಲಾ ಆಸ್ಪತ್ರೆಗಳಲ್ಲೂ ವೈದ್ಯಾಧಿಕಾರಿಗಳಲ್ಲಿ ಒಂದು ಗುಂಪುಗುಳಿತನ ಬೆಳೆದು, ಅವರು ಜನರನ್ನು ನೋಡತಕ್ಕ ಸ್ವಭಾವ ಇವತ್ತಿನ ದಿವಸ ಹೊರಟು ಹೋಗಿದೆ. ಅವರು ಸ್ವಾರ್ಥಸಾಧಕರಾಗಿ, ಲಾಭಗಳಿಸ ತಕ್ಕ ಕೆಲಸದಲ್ಲಿ ಇಂದು ಅವರು ತೊಡಗಿದ್ದಾರೆ. ಬೇಕಾದರೆ, ತಾವು ಯಾವುದಾದರೂ ಒಬ್ಬ ಡಾಕ್ಟರನ್ನು ಕೇಳಿ. ಎಲ್ಲಿ ಆತನಿಗೆ ಗಿಂಬಳ ಸಿಕ್ಕುವುದಿಲ್ಲ, ಅಂತಹ ಕಡೆಗೆ ಅವನು ಹೋಗುವುದಕ್ಕೆ ತಯಾರಾಗಿರುವುದು ಅಂತಹ ಕಡೆ ಏತಕ್ಕೆ ಹೋಗುವುದಿಲ್ಲ; ಇಲ್ಲೇನು ಸಂಬಳ ಜಾಸ್ತಿ ಕೊಡುತ್ತಾರೇನು ಎಲ್ಲಿಹೋದರೂ ಒಂದೇ ಸಮ ಅಲ್ಲವೇ ಸಂಬಳ ಕೊಡುವುದು ಅವನು ಅಲ್ಲಿಗೇ ಏತಕ್ಕೆ ಹೋಗಬೇಕೆನ್ನುವ ವಿಶೇಷವಾದ ಕಾರಣವೇ ನೆಂದರೆ, ಗಿಂಬಳ ಸಿಗುವುದು ! ಈಗ ಒಬ್ಬ ಯೋಗ್ಯ ಡಾಕ್ಟರನ್ನು ಸೃಷ್ಟಿ ಮಾಡಬೇಕಾದರೆ ರಾಜ್ಯದ ಭಂಡಾರದಿಂದ ಒಂದು ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಇವರೆಲ್ಲಾ ಸಾರ್ವಜನಿಕ ಸೇವೆ ಮಾಡುವ ಬದಲಾಗಿ ಇವತ್ತು ಆಸ್ಪತ್ರೆಗಳಲ್ಲಿ ದುಡ್ಡು ಕೊಡದೇ ಹೋದರೆ ಯಾರನ್ನೂ ಸಿಗಾ ಇಟ್ಟು ನೋಡುವುದೇ ಇಲ್ಲ. ಸೂಕ್ಷ್ಮವಾಗಿ ನೋಡಿದರೆ, ಯಾರು ದುಡ್ಡು ಕೊಡುತ್ತಾರೆ ಅಂತಹವರನ್ನು ಒಂದು ದಿನಕ್ಕೆ ೨-೩ ಸಲ ಬಂದು ನೋಡಿ ಅವರಿಗೆ ಬೇಕಾದ ಟ್ರೀಟ್ ಮಾಡುತ್ತಾರೆ ಯಾರು ದುಡ್ಡು ಕೊಡುವುದಿಲ್ಲ ; ಅಂತಹವನನ್ನು ೨-೩ ದಿವಸ ಕಣ್ಣು ಬಿಟ್ಟು ಕೂಡ ನೋಡುವುದಿಲ್ಲ. ಕಾಯಿಲೆ ಜಾಸ್ತಿಯಾಗಿದೆ, ವಿಷಮ ಸ್ಥಿತಿಯಲ್ಲಿದೆ ಎನ್ನುವ ಸಂದರ್ಭದಲ್ಲಿ ನೋಡಬೇಕಾದ ಪ್ರಸಂಗ ಬಂದರೆ, ಸುಮ್ಮನೆ ಬಂದು ನೋಡಿ ಹೋಗುತ್ತಾರೆ. ಈ ಪರಿಸ್ಥಿತಿ ಕೆಲವೇ ಆಸ್ಪತ್ರೆಗಳಲ್ಲೇನು ಇಲ್ಲ. ಇದು ಎಲ್ಲಾ ಕಡೆಗಳಲ್ಲೂ ಹಬ್ಬಿದೆ. ಇದನ್ನು ದುರ್ನೀತಿ ಮತ್ತು ದುರ್ಘಟನೆ ಎಂದು ಹೇಳಿದರ ತಪ್ಪಾಗಲಾರದು. ಏನು ಜನಗಳು, ವಿಷಮ ಪರಿಸ್ಥಿತಿಯಲ್ಲಿ ಸಾವು ಬದುಕಿನೊಡನೆ ಹೋರಾಟ ಮಾಡುತ್ತಾ ಇರುತ್ತಾರೆ, ಚಿಂತಾಜನಕ ಪರಿಸ್ಥಿತಿಯಲ್ಲಿರು ತ್ತಾರೆ; ಅಂತಹವರಿಗೆ ಈ ರೀತಿ ತೊಂದರೆ ಕೊಡದೆ ಇದನ್ನೆಲ್ಲಾ ಸರಿಪಡಿಸುವುದಕ್ಕೆ ಈ ದಿನ ಸಾಧ್ಯವಾಗಿಲ್ಲ. ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆ ; ಆಸ್ಪತ್ರೆಗಳ ಆಡಳಿತ ದಿನೇದಿನೇ ಹದಗೆಡುತ್ತಾ ಇದೆ ; ಇದನ್ನೆಲ್ಲಾ ಸರಿಪಡಿಸುವುದಕ್ಕೆ ನಮ್ಮ ಆರೋಗ್ಯ ಸಚಿವರಿಗೆ ಆಗುತ್ತದೆಯೇ ಎಂದು ನಾನು ತಿಳಿದುಕೊಂಡಿದ್ದೆನೆ. ಅವರಿಗೆ ಅನಾರೋಗ್ಯ ಜಾಸ್ತಿಯಾಗಿದೆ ; ಇದಕ್ಕೂ ಅನಾರೋಗ್ಯ ಜಾಸ್ತಿಯಾಗುವುದಕ್ಕೆ ಪ್ರಾರಂಭವಾಗಿದೆ ಇದೇ ನಮಗೆ ಇರತಕ್ಕ ಕಷ್ಟ. ಇದನ್ನು ಸರಿಪಡಿಸದೇ ಹೋದರೆ ಸರಕಾರದವರು ಅವುಗಳಿಗೆ ನೀಡುತ್ತಿರುವ ಹಣವೆಲ್ಲಾ ವ್ಯರ್ಥವಾಗುತ್ತದೆ. ನಾನು ಯಾವ ಯಾವ ಆಸ್ಪತ್ರೆಗಳು ಎಂದು ಲಿಸ್ಟ್ ಹೇಳುವುದಕ್ಕೆ ಆಗುವುದಿಲ್ಲ. ಒಟ್ಟಿನಲ್ಲಿ ಆಸ್ಪತ್ರೆಗಳ ವ್ಯವಹಾರಗಳು ಸುಗಮವಾಗಿಲ್ಲ ; ಮತ್ತು ವೈದ್ಯಾಧಿಕಾರಿಗಳು ಜನರ ಬಗ್ಗೆ ದೃಷ್ಟಿಕೋಣವನ್ನು ಬದಲಾಯಿಸಿಲ್ಲ. ಇದರ ತ್ವರಿತಪೂಬಗ್ಗೆ ತೀವ್ರವೂ ಆದ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಔಷಧಿಗಳನ್ನು ಕೊಡತಕ್ಕುದ್ದು. ಈಗ ಔಷಧಿಗಳ ಬೆಲೆ ಜಾಸ್ತಿಯಾಗಿದೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸುಮಾರು ೧೫೦ ರಿಂದ ೨೦೦ ರಷ್ಟು ಔಷಧಿಗಳ ಬೆಲೆ ಜಾಸ್ತಿಯಾಗಿದೆ, ಸರಬ ರಾಜು ಮಾಡುವ, ಗ್ರಾಮಾಂತರ ಪ್ರದೇಶಕ್ಕೆ ಒಂದು ಆಸ್ಪತ್ರೆಗೆ ೨ ಸಾವಿರ ಮೊತ್ತದ ಔಷಧಿ ಕೊಡುತ್ತಾರೆ ಹೋಬಳಿ ಮಟ್ಟದಲ್ಲಿ ೩ ಸಾವಿರ ಮೊತ್ತದ ಔಷಧಿ ಕೊಡುತ್ತಾರೆ, ತಾಲೂಕು ಮಟ್ಟದಲ್ಲಿ ೫೦ ಸಾವಿರ

ಕೊಡುತ್ತಾರೆ, ಜಿಲ್ಲಾ ಮಟ್ಟದಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಕೊಡುತ್ತಾರೆ. ಆದರೆ, ಈ ಆಜ್ಞೆ ಹೊರಡಿಸಿದಂದಿನಿಂದ ಇವತ್ತಿನವರಿಗೂ ಔಷಧಿಬೆಲೆ ಎಷ್ಟು ಪ್ರಮಾಣದಲ್ಲಿ ಜಾಸ್ತಿಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಬೇಕು. ನಾನು ತಿಳಿದುಕೊಂಡಿದ್ದೇನೆ ೧೫೦ ರಿಂದ ೨೦೦ ರಷ್ಟು ಜಾಸ್ತಿಯಾಗಿದೆ ಎಂದು, ಆದರೆ, ನೀವು ಕೊಡತಕ್ಕ ಔಷಧಿ ಬ್ಯಾಂಡೇಜ್ ಬಟ್ಟೆಗೆ ಇದ್ದರೆ, ಗ್ಲುಕೋಸ್ ವಾಟರ್‌ಗೆ ಇರುವುದಿಲ್ಲ. ಹೆಚ್ಚು ಕಡಮೆ ಸರಿಯಾಗಿ ಹಂಚಿದರೆ ಮೂರು ತಿಂಗಳಿಗೆ ಕೊಡುವ ಔಷಧಿ ಸಿಗುವುದಿಲ್ಲ. ಅಲ್ಲಿರತಕ್ಕ ರೋಗಿಗಳಿಗೆ ಯಾವರೀತಿ ಚಿಕಿತ್ಸೆಯನ್ನು ಪರಿಸ್ಥಿತಿ ಹೀಗಿರುವಾಗ ಅವರು ಕೊಡುತ್ತಾರೆ ? ಇದಕ್ಕೆ ತಮ್ಮ ನಿರ್ದಿಷ್ಟವಾದ ಕಾರ್ಯಕ್ರಮ ಏನು? ಸಣ್ಣ ಆಸ್ಪತ್ರೆಯೇ ಇರಬಹುದು, ಅಥವಾ ದೊಡ್ಡ ಆಸ್ಪತ್ರೆಯೇ ಇರಬಹುದು ೧೦ ಜನ ದಿನನಿತ್ಯ ಆಸ್ಪತ್ರೆಗೆ ಬರತಕ್ಕ ಸಂದರ್ಭ ಇದ್ದರೆ, ಎಷ್ಟು ಪ್ರಮಾಣದ ಔಷಧಿ ಬೇಕು ? ಹಿಂದಿನ ವರ್ಷದ ಆಧಾರದಮೇಲೆ, ಮುಂದಿನ ವರ್ಷ ಜಾಸ್ತಿಯಾಗುತ್ತಾ ಹೋಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ದಡ್ಡರು ಇರುತ್ತಾರೆ. ನಗರ ಪ್ರದೇಶಗಳಲ್ಲೂ ಸ್ಲಂ ಮುಂತಾದ ಪ್ರದೇಶಗಳಲ್ಲಿ ದಡ್ಡರು ಇರುತ್ತಾರೆ ವರ್ಕಿಂಗ್ ಕ್ಲಾಸ್ ಪೀಪಲ್ಸ್ ಇರುತ್ತಾರೆ, ಅವರನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಬೇಕಾದರೆ ಹಿಂದು ಮುಂದು ನೋಡುತ್ತಾರೆ. ನಮ್ಮ ಸಾಗರ ತಾಲ್ಲೂಕಿನಲ್ಲಿ ವಿಚಿತ್ರ ಕಾಯಿಲೆ ಬಂದು ಅಲ್ಲಿನ ಜನರನ್ನು ಆಸ್ಪತ್ರೆಗೆ ಸೇರಿಸಬೇಕಾದರೆ ಎಷ್ಟು ಕಷ್ಟಪಡಬೇಕಾಯಿತು ಗೊತ್ತೆ? ಕಾಯಿಲೆಗಳು ವಾಸಿಯಾಗಲು ಅವರು ಮಾರಮ್ಮನನ್ನು, ಭೂತಪ್ಪನನ್ನು ಪೂಜೆ ಮಾಡುತ್ತಾರೆ. ಇಂತಹ ಜನರಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡುವ ರೀತಿಯಲ್ಲಿ ವಿಶ್ವಾಸವನ್ನು ಅವರಲ್ಲಿ ನಿರ್ಮಾಣ ಮಾಡಬೇಕಾದರೆ, ಅದು ಸಾಹಸದ ಕೆಲಸ, ಇವತ್ತಿನ ದಿವಸ ಹೆಚ್ಚು ಹೆಚ್ಚು ರೋಗಿಗಳು ಆಸ್ಪತ್ರೆಗಳಿಗೆ ಬರುತ್ತಾ ಇದ್ದಾರೆ, ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ, ಇದು ಹೀಗೆ ದಿನನಿತ್ಯ ಜಾಸ್ತಿಯಾಗುತ್ತಾ ಹೋಗುತ್ತದೆ, ಆಗ ಔಷಧವೂ ಜಾಸ್ತಿ ಬೇಕಾಗುತ್ತದೆ. ೧೦ ವರ್ಷದ ಹಿಂದೆ ಯಾವುದೋ ಒಂದು ಆಜ್ಞೆ ಮಾಡಿದರೆ, ಅದೇ ಮುಂದಕ್ಕೂ ಬರುತ್ತಲೇ ಇರುತ್ತದೆ. ತಾಲೂಕು ಮಟ್ಟದ ಒಂದು ಆಸ್ಪತ್ರೆಯಲ್ಲಿ ಸರಾಸರಿ ೩೦೦-೪೦೦ ಜನ ರೋದಿಗಳು ಹಾಜರಾಗುತ್ತಾರೆ, ಆದರೆ, ನಾವು ಅದೇ ಪ್ರಮಾಣದಲ್ಲಿ ಔಷಧಿ ಕೊಡುವುದಕ್ಕೆ ನಾವು ಹೋಗುವುದಿಲ್ಲ. ತಾವು ಡಾಕ್ಟರನ್ನು ಹೆಚ್ಚಿಗೆ ನೇಮಿಸುತ್ತೀರಿ, ಸಿಬ್ಬಂದಿಯನ್ನು ಹೆಚ್ಚಿಸುತ್ತೀರಿ, ಆದರೆ, ಇದರಿಂಗಿ ಏನು ಪ್ರಯೋಜನ ? ಕೆಲವು ಆಸ್ಪತ್ರೆಗಳಲ್ಲಿ ಸಾಮಾನ್ಯ ಜನರಿಗೆ ಬೇಕಾಗುವ ಸಣ್ಣ ಪುಟ್ಟ ಔಷಧಿಗಳು ದೊರೆಯುವುದಿಲ್ಲ. ಶಾಸಕರು, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕವರು ಅವರಿಂದ ಬೈಸಿಕೊಳ್ಳಬೇಕು. ಯಾವ ಒಂದು ಆಸ್ಪತ್ರೆಗೆ ಹೋದರೂ ಒಂದು ಆಸ್ಪತ್ರೆಗಳು ಇರುವುದಾದರೂ, ಏತಕ್ಕೆ ? ಕನಿಷ್ಟ ಪ್ರಮಾಣದ ಔಷಧಿಗಳು ೧೨ ತಿಂಗಳಲ್ಲೂ ಸಿಕ್ಕುವ ಹಾಗೆ ಇಡಬೇಕು. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ, ಹಿಂದೆ ಬೋಸ್ ಸಮಿತಿಯವರು ಒಂದು ಅಂದಾಜು ಮಾಡಿದ್ದರು: ಕನಿಷ್ಠ ಒಂದು ಲಕ್ಷ ಜನ ಸಂಖ್ಯೆ ಇದ್ದರೆ, ೨೪೦ ಹಾಸಿಗೆಗಳು ಇರಬೇಕು ಎಂದು. ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆ ಇರುವ ಕಡೆ ೯೭ ಹಾಸಿಗೆಗಳು ಸಿಗುತ್ತಾ ಇವೆ. ಇದರಿಂದಲೇ ಗೊತ್ತಾಗುತ್ತದೆ, ತಾವು ಎಷ್ಟು ಹಿಂದುಳಿದಿದ್ದೀರಿ ಎಂದು. ಮುಂದುವರಿದ ದೇಶಗಳಲ್ಲಿರುವ ಅರ್ಧದಷ್ಟೂ ಇಲ್ಲ. ಸಾಮಾನ್ಯವಾಗಿ ಎಲ್ಲಾ ತಾಲ್ಲೂಕುಗಳು ಒಂದು ಲಕ್ಷದ ಮೇಲ್ಪಟ್ಟು ಜನಸಂಖ್ಯೆ ಇರುತ್ತದೆ. ಕಡಿಮೆ ಎಲ್ಲೂ ಇಲ್ಲ. ಅಂತಹ ಕಡೆಗಳಲ್ಲಿ ಕನಿಷ್ಟ ೧೦೦-೧೫೦ ಹಾಸಿಗೆಗಳು ಸಿಕ್ಕತಕ್ಕ ವ್ಯವಸ್ಥೆ ಇರಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ೧೦೦ ಹಾಸಿಗೆಗಳು ಇರುವ ವ್ಯವಸ್ಥೆ ಮಾಡಬೇಕು, ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದುಹೇಳುತ್ತೇನೆ. ಏಕೆಂದರೆ. ಸರಕಾರದ ಲೆಕ್ಕ ನಮ್ಮ ರಾಜ್ಯದಲ್ಲಿ ೨೨ ಸಾವಿರ ಚಿಲ್ಲರೆ ಹಾಸಿಗೆಗಳು ಇದೆ ಎಂದು ಹೇಳಿದ್ದಾರೆ. ಅದರಲ್ಲಿ ಖಾಸಗಿಯವರನ್ನು ಸೇರಿಸಿ ೨೫ ಸಾವಿರ ಎಂದು ಹೇಳಿದ್ದೀರಿ, ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ಲೆಕ್ಕ ಸುಮಾರು ೨೩ ಸಾವಿರ ಚಿಲ್ಲರೆ ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಿಕ್ಕತಕ್ಕ ಹಾಸಿಗೆ ಪ್ರಮಾಣ ೧,೭೧೮ ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿ ಸಿಕುತ್ತದೆ ಅಂದರೆ ೨೪,೩೬೩ ಹಾಸಿಗೆಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಿಕ್ಕುವುದು ೧,೭೧೮. ಸೇಕಡಾ ೮೦ ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಇರುತ್ತಾ, ಉಳಿದ ೨೦ ರಷ್ಟು ಜನರು ನಗರಗಳಲ್ಲಿ ಇದ್ದಾರೆ. ತಾವು ಹಳ್ಳಿಯವರು ಪೇಟೆಗೆ ಬಂದು ಚಿಕಿತ್ಸೆ ಪಡೆಯುತ್ತಾರೆ ಎಂದು ಹೇಳಬಹುದು.

ಶ್ರೀ ಹೆಚ್ ಸಿದ್ದವೀರಪ್ಪ—ಬೇಕಾದಷ್ಟು ಎಕ್ವಿಪ್‌ಮೆಂಟ್ ಬೇಕು. ಈಗ ಎಕ್ವಿಪ್‌ಮೆಂಟ್ ಇರುವ ಕಡೆ ಬಂದು ಚಿಕಿತ್ಸೆ ಪಡೆಯುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ—ಕಳೆದ ಸಾರಿ ನಾನು ಹೇಳಿದ್ದೇನೆ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಹೆಲ್ತ್ ಯೂನಿಟ್ಸ್ ಇವೆ, ಅಲ್ಲಿ ಕನಿಷ್ಟ ೫ ಹಾಸಿಗೆಗಳ ಒಂದು ವಾರ್ಡ್ ಮಾಡಿ.

ಶ್ರೀ ಹೆಚ್. ಸಿದ್ದವೀರಪ್ಪ—ಈಗ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಆರು ಹಾಸಿಗೆಗಳು ಇವೆ.

ಶ್ರೀ ಕಾಗೋಡು ತಿಮ್ಮಪ್ಪ—ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಡಿಸ್‌ಪೆನ್‌ಸರಿಗಳು, ಹೆಲ್ತ್ ಯೂನಿಟ್ಸ್‌ಗಳು ಏನು ಇವೆ, ಅಲ್ಲಿ ಇರತಕ್ಕವುಗಳು ಎಷ್ಟು ಅವುಗಳನ್ನು ತಾಲ್ಲೋಕು ವೈಸ್‌ಲಿಸ್ಟ್ ಕೊಟ್ಟರೆ ಸರಿಯಾಗಿ ಗೊತ್ತಾಗುತ್ತದೆ. ಈಗ ಗ್ರಾಮಾಂತರ ಪ್ರದೇಶದಲ್ಲಿ ಬಡತನ ರೇಖೆಗಿಂತಲೂ ಜಾಸ್ತಿ ಇರುತ್ತದೆ, ಅಲ್ಲದೆ ಹರಿಜನ ಗಿರಿಜನರು ಅಲ್ಲಿ ಜಾಸ್ತಿ ಇದ್ದರೆ ಅಲ್ಲವೆ ಅಲ್ಲದೆ ಹೆಚ್ಚು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ರೋಗಗಳಿಗೆ ತುತ್ತಾಗಿರುವವರು ಜಾಸ್ತಿ ಇದ್ದಾರೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಸಿಕ್ಕಬೇಕಾದಂಥ ಸೌಕರ್ಯಗಳು ಏನು ಇವೆ ಅವುಗಳನ್ನು ಒದಗಿಸಿ ಕೊಡಬೇಕಾದ ಅಗತ್ಯ ಜಾಸ್ತಿ ಇದೆ. ಈ ದೃಷ್ಟಿಯಿಂದ ನಿಮ್ಮ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದ ಅಂತರ ನೋಡಿದರೆ ವಿಫುಲವಾಗಿ ಬೆಳೆಯುತ್ತಿದೆ. ಪ್ರಾಸ್ತವ ದೃಷ್ಟಿಯಿಂದ ಸಾಮಾನ್ಯ ಜನರಿಗೆ ನೇರವಾಗಿ ಮನೆ ಬಾಗಿಲಿಗೆ ಕನಿಷ್ಟ ಪ್ರಮಾಣದ ಸೌಕರ್ಯವಾದರೂ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಅಲ್ಲದೆ ಈಗ ಸಾಕಷ್ಟು ಹಾಸಿಗೆ ಪ್ರಮಾಣ ಕೊಡತಕ್ಕ ನಿರ್ದಿಷ್ಟ ಕ್ರಮ ನಿಮ್ಮ ಬಡ್ಜೆಟ್ಟಿನಲ್ಲಿ ನಾನು ಎಲ್ಲೂ ನೋಡಲಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ—ಹಳ್ಳಿಗಳಲ್ಲೇ ನೂರು ಆಸ್ಪತ್ರೆಗೆ ಕೊಟ್ಟಿದ್ದೇವೆ,

ಶ್ರೀ ಕಾಗೋಡು ತಿಮ್ಮಪ್ಪ.—ಹಳ್ಳಿಗಳಿಗೆ ಕೊಟ್ಟಿದ್ದೀರಿ, ಅಲ್ಲಿ ಬೇಕಾದಂಥ ಸೌಕರ್ಯ ಇಲ್ಲದೇ ಹೋದರೆ ಏನು ಪ್ರಯೋಜನ ?

ಆದುದರಿಂದ ಈ ಒಂದು ನಿರ್ದಿಷ್ಟ ಕಾರ್ಯಕ್ರಮ ಏನಾದರೂ ಇದೆಯೋ ಎಂದು ನೋಡಿದರೆ ಅದಕ್ಕೆ ಯಾವುದೇ ಒಂದು ಪೂರ್ವಭಾವಿಯಾದ ಸಿದ್ಧತೆ ಇಲ್ಲ. ಆದುದ್ದರಿಂದ ಇವೊತ್ತು ನಮ್ಮ ಬಹಳ ಜನರಿಗೆ ಏನು ಸೌಕರ್ಯ ಸಿಕ್ಕಬೇಕು ಆ ದೃಷ್ಟಿಯಿಂದ ನಾವು ಪ್ರಯತ್ನ ಮಾಡಬೇಕು, ಈಗ ಮಾನ್ಯ ಆರೋಗ್ಯ ಸಚಿವರಿಗೆ ಒಂದು ಹೆಲ್ತ್ ಯೂನಿವರ್ಸಿಟಿ ಮಾಡಬೇಕು ಎಂದು ಇದೆ. ನಮಗೆ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ ಈಗ ಜಾಗಕ್ಕೆ ಕನಿಷ್ಟ ಪ್ರಮಾಣದ ಸೌಕರ್ಯ ಕೊಡುವುದಕ್ಕೆ ಆಗುತ್ತಾ ಇಲ್ಲ ಅಂಥಾದ್ದರಲ್ಲಿ ಒಂದು ಯೂನಿವರ್ಸಿಟಿ ಮಾಡುವುದಾದರೆ ಒಂದು ವರ್ಷದಲ್ಲಿ ೬೦ ರಿಂದ ೭೦ ಲಕ್ಷ ರೂಪಾಯಿ ಖರ್ಚಾಗುತ್ತದೆ. ತಾತ್ಕಾಲಿಕವಾಗಿ ೩೦ ಲಕ್ಷ ಏರುತ್ತದೆ. ಇವೊತ್ತು ಹೆಲ್ತ್ ಯೂನಿವರ್ಸಿಟಿ ಸ್ಥಾಪನೆ ಮಾಡುವುದು ಬಹಳ ಪ್ರಾಮುಖ್ಯವಾಗಿದೆ. ಸಾಮಾನ್ಯ ಜನರಿಗೆ ಕನಿಷ್ಟ ಪ್ರಮಾಣದ ಆರೋಗ್ಯ ಸೌಲಭ್ಯ ಸಿಕ್ಕುವುದು ಪ್ರಾಮುಖ್ಯವಿದೆ, ನಿಮ್ಮ ದೃಷ್ಟಿಕೋನ ಯಾವ ಕಡೆ ಹೋಗುತ್ತದೆ.

ಶ್ರೀ ಹೆಚ್. ಸಿದ್ದವೀರಪ್ಪ.—ನೀವೇ ಒಪ್ಪಿಕೊಂಡು ಸಪೋರ್ಟ್ ಮಾಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಇವೊತ್ತು ಯೂನಿವರ್ಸಿಟಿ ಕಾಲೇಜು ಜಾಸ್ತಿ ಆದಂತೆಲ್ಲಾ ವಿದ್ಯಾವಂತರು ನಿರುದ್ಯೋಗದ ದೊಡ್ಡ ಸೈನ್ಯವನ್ನು ನಿರ್ಮಾಣ ಮಾಡುತ್ತಾರೆ. ಈಗ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಬಹಳ ಅನುಕೂಲಸ್ಥರ ಮನೆಯಿಂದ ಬಂದಿರುತ್ತಾರೆ ಇವರು ಸಿಟಿಯಲ್ಲಿ ಬೆಳೆದಿರುತ್ತಾರೆ ಇವರನ್ನು ಹಳ್ಳಿಗೆ ಹೋಗಿ ಎಂದರೆ ಹೋಗುತ್ತಾರೆಯೇ ನೌಕರಿ ಕೊಡುವವರೆಗೆ ನೌಕರಿ ಬೇಕು ಎಂದು ಹೇಳುತ್ತಾರೆ. ನೌಕರಿ ಕೊಟ್ಟಮೇಲೆ ಅವರನ್ನು ಎಲ್ಲಾ ಜಾಗಕ್ಕೂ ಹಾಕಬೇಕು. ಇದು ನಮ್ಮ ಪರಿಸ್ಥಿತಿ ಬಂದಿದೆ. ಈಗ ನಾವು ಯಾವ ಉದ್ದೇಶ ಇಟ್ಟುಕೊಂಡು ಕಾಲೇಜುಗಳನ್ನು ಸ್ಥಾಪನೆ ಮಾಡುತ್ತೇವೆ, ಸಾರ್ವಜನಿಕ ಹಣವನ್ನು ಖರ್ಚುಮಾಡಿ ಅವರಿಗೆ ವಿದ್ಯಾಭ್ಯಾಸ ಕೊಡುತ್ತೇವೆ. ಅವರು ಸಮಾಜಕ್ಕೆ ನೆರವಾಗಬೇಕೆಂದು ಆದರೆ ಅದರ ಬದಲು ಅವರು ಸಮಾಜಕ್ಕೆ ಹೊರೆಯಾಗಿ ಪರಿಣಮಿಸುತ್ತಾರೆ. ಈಗ ನೇರವಾಗಿ ಹಳ್ಳಿಗಳಿಗೆ ಹೋಗಿ ಕೆಲಸ ಮಾಡತಕ್ಕ ಜನರನ್ನು ಸೃಷ್ಟಿ ಮಾಡತಕ್ಕ ಶಿಕ್ಷಣ ವೈದ್ಯಕೀಯ ಕ್ಷೇತ್ರದಲ್ಲಿ ಬೇಕೆ ವಿನಹ ಸಫಾಸ್ಟಿಕೇಟೇಡ್ ಟೈಪ್ ಆಫ್ ಪೀಪಲ್ ಬೆಳೆಯುತ್ತಾರೆ ಇದನ್ನು ತಪ್ಪಿಸುವುದಕ್ಕೆ ನೀವು ಪ್ರಯತ್ನ ಮಾಡಬೇಕು. ಆದುದರಿಂದ ಅಧ್ಯಕ್ಷರೇ, ಈಗ ಆರೋಗ್ಯ ಇಲಾಖೆಯಲ್ಲಿ ಜನಸಾಮಾನ್ಯರಿಗೆ ಇವೊತ್ತಿನ ದಿವಸ ಸೌಲಭ್ಯಗಳು ಜಾಸ್ತಿಯಾಗಬೇಕು ಎಂಬುದು ನಮ್ಮ ಕಲ್ಪನೆ. ಜೊತೆಗೆ ಅವರು ಕುಟುಂಬ ಯೋಜನೆಗೆ ಅಗಾಧವಾಗಿ ಹಣ ಖರ್ಚು ಮಾಡುತ್ತಾರೆ ಕುಟುಂಬ ಯೋಜನೆ ಅಂಗವಾಗಿ ಹೋದಸಾರಿ ಫರ್ನಿಚರ್ ಪ್ರಕರಣ ಅವರ ಗಮನಕ್ಕೆ ತಂದಿದ್ದವು ಇವೊತ್ತು ಏನಾಗಿದೆ ಆರೋಗ್ಯ ಸಚಿವರ ಸುತ್ತಮುತ್ತ ಓಡಾಡುತ್ತಿದ್ದಾರೆ. ಈ ಅಡ್ವರ್‌ಟೈಸ್‌ಮೆಂಟ್ ಮಾಡಿಸುವುದರಿಂದ ಯಾವಾಗಲೂ ಆರೋಗ್ಯ ಸಚಿವರ ಸುತ್ತಮುತ್ತ ಈ ಜನರು ಓಡಾಡುತ್ತಾ ಇರುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ನನ್ನ ಸುತ್ತ ನೀವೇ ಓಡಾಡುವುದು.

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಲಕ್ಷಗಟ್ಟಲೆ ಹಣ ಜಾಹಿರಾತಿಗೆ ಕೊಡುತ್ತೀರಿ. ಈಗ ಸುಮಾರು ನಿಮ್ಮ ಹತ್ತಿರ ೫ ಲಕ್ಷ ರೂಪಾಯಿ ಜಾಹಿರಾತು ಸಿಕ್ಕುತ್ತದೆ ಎಂದರೆ ನಿಮ್ಮ ಹತ್ತಿರ ಸುತ್ತುತ್ತಾ ಇರುವವರು ನಿಮ್ಮ ಮನೆಯವರು ನೋಡಿಕೊಳ್ಳುವುದಕ್ಕಿಂಥ ಜಾಸ್ತಿ ಇವರೇ ನೋಡಿಕೊಳ್ಳುತ್ತಾರೆ. ಈಗ ಜಾಹಿರಾತು ಯಾವ ಯಾವ ಇಲಾಖೆಯಲ್ಲಿ ಸಿಕ್ಕುತ್ತದೆ ಅಂಥ ಕಡೆ ಇವರು ಬೆನ್ನು ಹತ್ತಿ ಹೋಗುತ್ತಾ ಇರುತ್ತಾರೆ. ಈಗ ತಾವು ಜಾಹಿರಾತಿಗೆ ಎಷ್ಟು ಖರ್ಚುಮಾಡಿದ್ದೀರಿ ? ನಿಮ್ಮ ಕುಟುಂಬ ಯೋಜನೆ ಎಷ್ಟುಮಟ್ಟಿಗೆ ಪ್ರಗತಿದಾಯಕವಾಗಿ ನಡೆಯುತ್ತಿದೆ ? ಅಂಕಿಅಂಶ ತರಿಸಿಕೊಡಬೇಕು ತಾವು ಕಳೆದ ವರ್ಷ ಇಟ್ಟ ವರದಿಯಲ್ಲಿ ತಾವು ಏನು ಹೇಳಿದ್ದೀರಿ, ನಮ್ಮ ಟಾರೆಗೆಟ್ಸ್ ಅಚೀವ್‌ಡ್ ಎಂದು ಹೇಳಿದ್ದೀರಿ, ಸ್ಟರ್‌ಲೈಜೇಷನ್ ೩೧ನೇ ಮಾರ್ಚಿ ೧೯೭೪ ೧ ಲಕ್ಷ ೨ ಸಾವಿರ ಇದ್ದರೆ ಅಚೀವ್‌ಮೆಂಟ್ ೫ ಲಕ್ಷದ ೩ ಸಾವಿರದ ೭೬೫. ಅನಂತರ ಐ ಯು.ಸಿ ಡಿ ೨೦ ಸಾವಿರ ಇದ್ದರೆ ೮೮೩೪ ಸಿ.ಸಿ. ಯೂಸ್ ೧ ಲಕ್ಷ ಇದ್ದರೆ ೩೦ ೩೧೫ ತಾವು ಎಷ್ಟು ಸಾಧನೆ ಮಾಡಿದ್ದೀರಿ, ಇದು ೧೯೭೩–೭೪ರಲ್ಲಿ ಇನ್ನು ೧೯೭೪–೭೫ ಡಿಸೆಂಬರ್ ಅಂತ್ಯದೊಳಗೆ ನೋಡಿದರೆ ಸ್ಟರಲೈಜೇಷನ್ ೯೫,೦೦೦ ಟಾರ್‌ಗೆಟ್ ಇಟ್ಟಿದ್ದರೆ ಹಿಂದಿನ ವರ್ಷಕ್ಕಿಂಥ ಕಡಿಮೆ ಇಟ್ಟಿದ್ದೀರಿ. ಸಾಧನೆ ಮಾಡಿರುವುದು ೪೩.೨೮೧ ಐ.ಯು.ಸಿ.ಡಿ ೧೯,೦೦೦ ಟಾರ್‌ಗೆಟ್ ಸಾಧನೆ ಮಾಡಿರುವುದು, ಕೇವಲ ೮,೮೨೬ ಸಿ ಸಿ.ಯೂಸ್. ೬೦ ಸಾವಿರ ಇಟ್ಟುಕೊಂಡಿದ್ದರೆ ೩೭,೦೪೩ ಸಾಧನೆ ಮಾಡಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಇತ್ತೀಚೆಗೆ ಜಾಸ್ತಿಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ವರ್ಷ ಗುರಿ ಇಟ್ಟುಕೊಂಡಿದ್ದುದಕ್ಕಿಂತ ೧೯೭೪–೭೫ರ ಸಾಲಿನಲ್ಲಿ ಮತ್ತಷ್ಟು ಕಡಿಮೆ ಮಾಡಿಕೊಂಡಿದ್ದೀರಿ.

ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಬಡ್ಜೆಟ್ಟಿನಲ್ಲಿ ಕಡಿಮೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ತಾವು ಹಣವನ್ನು ಜಾಹಿರಾತಿಗೋಸ್ಕರ ಖರ್ಚು ಮಾಡುತ್ತೀರಿ ಪೋಸ್ಟರ್ಸ್‌ಗಳನ್ನು ಮಾಡಿಸುತ್ತೀರಿ, ಎಲೆಕ್ಟ್ರಿಸಿಟಿ ಕಂಬಕ್ಕೆ ಪೋಸ್ಟರ್ ಹಾಕಿಸುವುದು, ಬೋರ್ಡ್‌ಗಳ ಮೇಲೆ ಬರೆಸುವುದು ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಇವತ್ತು ಪ್ರಚಾರ ಸಾಧನಗಳಿಗೆ ಹೆಚ್ಚು ಹಣ ಖರ್ಚುಮಾಡುತ್ತಿದ್ದೀರಿ ಇವತ್ತು ಮನೆಮನೆಗೆ ಹೋಗಿ ಚಿಕಿತ್ಸೆ ಮಾಡುವುದಕ್ಕ ಆಸಕ್ತಿ ತೋರಿಸುವುದಿಲ್ಲ. ಈ ಕೆಲಸ ಸ್ವಲ್ಪ ಹಳ್ಳಿಗಳಲ್ಲಿ ಜಾಸ್ತಿಯಾಗಿ ನಡೆಯುತ್ತಿದೆ. ಆದರೆ ಪಟ್ಟಣದಲ್ಲಿ ಸರಿಯಾಗಿ ಆಗುತ್ತಿಲ್ಲ. ಏಕೆಂದರೆ ಪಟ್ಟಣ ಪ್ರದೇಶದಲ್ಲಿ ಮನೆಮನೆಗೆ ಹೋಗಿ ಹೇಳದೇ ಹೋದರೆ ಅವರಿಗೆ ಗೊತ್ತಾಗುವುದಿಲ್ಲ, ಪಟ್ಟಣದ ಜನಗಳು ಬಂದು ನೋಡುವುದಿಲ್ಲ. ವಿದ್ಯಾವಂತರು ತಿಳಿದಿರತಕ್ಕವರು ಮತ್ತು ಇದನ್ನು ಮನಃಪೂರ್ವಕವಾಗಿ ಒಪ್ಪಿರತಕ್ಕ ಜನರು ಕುಟುಂಬ ಯೋಜನೆಯನ್ನು ಅನುಸರಿಸುತ್ತಾರೆಯೇ ಹೊರತು ಬಾಕಿಯವರು ಅನುಸರಿಸುವುದಿಲ್ಲ. ಇದರಲ್ಲಿ ಅನೇಕ ಜನ ಡಾಕ್ಟರ್ಸ್ ಕೆಲಸಮಾಡುತ್ತಿದ್ದಾರೆ. ಅವರಿಗೆ ಎಷ್ಟು ಮಕ್ಕಳು ಎಂದು ಅಂಕಿಅಂಶ ತೋರಿಸಬೇಕು ಏಕೆಂದರೆ, ಅವರು ಕೇವಲ ಬಾಯಲ್ಲಿ ಹೇಳುತ್ತಾರೆಯೇ ಹೊರತು ಕಾರ್ಯದಲ್ಲಿ ಮಾಡದೇ ಇರತಕ್ಕ ಪರಸ್ಥಿತಿ ಇದೆ. ಇವತ್ತು ಕುಟುಂಬ ಯೋಜನೆ ಸರಿಯಾಗಿ ನಡೆಯುತ್ತಾ ಇಲ್ಲ. ಇದನ್ನು ಸರಿಯಾಗಿ ಮಾಡದೇ ಹೋದರೆ ನಾವು ಏನು ಇವತ್ತು ಜನಸಂಖ್ಯೆ ಅಗಾಧವಾಗಿ ಬೆಳೆಯುತ್ತಾ ಇದೆ, ಆಹಾರದ ಕೊರತೆ ಇದೆಯೆಂದು ಹೇಳುತ್ತಿದ್ದೇವೆ, ಇದನ್ನು ತಪ್ಪಿಸಬೇಕಾದರೆ, ಕುಟುಂಬ ಯೋಜನಾ ಕೆಲಸವನ್ನು ನಿರ್ದಿಷ್ಟವಾದ ಪ್ರಮಾಣದಲ್ಲಿ ಅನುಸರಿಸಬೇಕು. ಇದಕ್ಕೆ ಸಕ್ರಿಯವಾಗಿ ಕೆಲಸಮಾಡತಕ್ಕಂಥ ಕೆಲಸಗಾರರನ್ನು ಜಾಸ್ತಿಮಾಡಿಕೊಳ್ಳಬೇಕು. ಇವತ್ತಿನವರೆಗೂ ಕೂಡ ಪಿ.ಎಸ್.ಸಿ ಯಲ್ಲಿ ಆಯ್ಕೆಯಾದ ಕೆಲಸಗಾರರನ್ನು ನೇಮಕಮಾಡಿಲ್ಲ. ಅವರು ಆಯ್ಕೆಯಾಗಿ ೬–೭ ತಿಂಗಳಾಗಿದೆ ಸುಮಾರು ೧೦೩ ಜನ ಬ್ಲಾಕ್ ಎಕ್ಸ್‌ಟೆನ್‌ಷನ್ ಎಜುಕೇಟರ್ಸ್ ಇದ್ದಾರೆ ಅವರನ್ನು ಇವತ್ತಿನವರೆಗೂ ನೇಮಕ ಮಾಡುವುದಕ್ಕೆ ಹೋಗಿಲ್ಲ. ಹಾಗಿರುವಾಗ ನೀವು ಪ್ರಚಾರಕಾರ್ಯವನ್ನು ಹೇಗೆ ಮಾಡುತ್ತಿದ್ದೀರಿ ?

3–00 P.M:

ಶ್ರೀ ಹೆಚ್. ಸಿದ್ದವೀರಪ್ಪ.—ಗವರ್ನಮೆಂಟ್ ಆಫ್ ಇಂಡಿಯಾನವರು ಸದ್ಯಕ್ಕೆ ಮಾಡಬೇಡಿ ಎಂದು ನಮಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ—ನೀವು ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಹೆಚ್. ಸಿದ್ದವೀರಪ್ಪ.—ನಮಗೆ ದುಡ್ಡು ಇಲ್ಲ.

ಶ್ರೀ ಎಸ್, ಬಂಗಾರಪ್ಪ,—ಹಾಗಿದ್ದ ಮಾತ್ರಕ್ಕೆ ಇಂಟರ್‌ವ್ಯೂ ಏಕೆ ಮಾಡಿದಿರಿ ?

ಶ್ರೀ ಹೆಚ್. ಸಿದ್ದವೀರಪ್ಪ,—ಗವರ್ನಮೆಂಟ್ ಆಫ್ ಇಂಡಿಯಾದಿಂದ ಸದ್ಯಕ್ಕೆ ಮಾಡಬೇಡಿ ಎಂದು ಬಂದಿದೆ, ಮುಂದೆ ಅಂಥಸಂದರ್ಭ ಬಂದಾಗ ಸೇರಿಸಿಕೊಳ್ಳುತ್ತೇವೆ. Some of them are getting over-aged. I have already written to the Goveroment of India that once they have been selected they should not leave it like that. ಅವರು ಇನ್ನೂ ನಮಗೆ ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಇನ್ನು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸಂಬಂಧಪಟ್ಟಹಾಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ ಮಾನ್ಯ ಸಿದ್ದವೀರಪ್ಪನವರನ್ನು ಅವರ ಕಾಲೇಜಗೆ ಅವರು ಮಿನಿಸ್ಟರ್ ಆಗುವುದಕ್ಕೆ ಮೊದಲು ಸೇರಿಸುತ್ತಾ ಇರಲಿಲ್ಲ. ಈಗ ಸಚಿವರಾದ ಮೇಲೆ ದಾವಣಗೆರೆ ಕಾಲೇಜಿಗೆ ಸೇರಿಸುತ್ತಾ ಇದ್ದಾರೆ. ಅವರಿಗೆ ಅನೇಕ ಸಾರಿ ತೊಂದರೆ ಉಂಟು ಮಾಡಿರತಕ್ಕ ಪ್ರಸಂಗಗಳು ನಮಗೆ ಗೊತ್ತಿದೆ. ಅವರು ಮೊದಲು ಹೇಳುತ್ತಾ ಇದ್ದರು, ಏನೆಂದರೆ, ಆ ಕಾಲೇಜಿನ ಮೇಲೆ ನಿಯಂತ್ರಣ ಹಾಕಬೇಕು ಎಂದು. ಮೂರು ವರ್ಷ ಆಯಿತು. ಇನ್ನೂ ಎರಡು ವರ್ಷ ಬಾಕಿ ಇದೆ, ಇನ್ನೂ ಮಾಡಿಲ್ಲ, ಏಕೆಂದರೆ ೩ ವರ್ಷದಲ್ಲಿ ದಾವಣಗೆರೆ ಕಾಲೇಜಿಗೆ ನಮ್ಮ ಕೈಲಾದ ಮಟ್ಟಿಗೆ ಸೇವೆಯನ್ನು ಮಾಡಿಸೋಣ ಎಂದು ಇದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ದಾವಣಗೆರೆಗಿಂತ ಮಣಿಪಾಲದು ಅಡಚಣೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ಮೊನ್ನೆ ಉತ್ತರ ಕೊಡುತ್ತಾ ಕರ್ನಾಟಕದವರಿಗೆ ಒಬ್ಬ ವಿದ್ಯಾರ್ಥಿ ೫೦೦೦ ರೂಪಾಯಿ ಕೊಡಬೇಕು, ಹೊರಗಿನವರಿಗೆ ಮಿತಿ ಹಾಕಿಲ್ಲ ಎಂದು ಹೇಳಿದರು ಆದರೆ ನನಗೆ ಸ್ವತಃ ಗೊತ್ತಿದೆ ಕರ್ನಾಟಕದವರಿಂದಲೇ ೩೦ ಸಾವಿರ ರೂಪಾಯಿವರೆಗೆ ತೆಗೆದು ಕೊಂಡಿರ ತಕ್ಕದು. ದಾವಣಗೆರೆ ಅಂಥ ಕಾಲೇಜಿನಲ್ಲಿ ೩೦-೩೫ ಸಾವಿರ, ಮಣಿಪಾಲ್‌ನಲ್ಲಿ ೩೫ ಸಾವಿರದಿಂದ ೧½ ಲಕ್ಷದವರೆಗೆ ಹೋಗಿದೆ ಇದರಿಂದ ೧-೧ ೧/೨ ಲಕ್ಷ ವರದಕ್ಷಣೆ ಕೇಳುತ್ತಿದ್ದಾರೆ ೧ ಲಕ್ಷ ಮಣಿಪಾಲ್ ಕಾಲೇಜಿಗೆ ಕೊಡುವುದಕ್ಕೆ ತೊಂದರೆ ಇಲ್ಲ ಏಕೆಂದರೆ ಆ ಮೇಲೆ ನಾಲ್ಕೈದು ವರ್ಷಗಳಲ್ಲಿ ಬರುತ್ತದೆ ಎನ್ನುವ ಧೈರ್ಯ ಇರುತ್ತದೆ. ಬ್ಯಾಂಕ್‌ನಲ್ಲೋ, ಎಲ್ಲೋ ೧ ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ — ಕಾಲೇಜಿಗೆ ೭೫ ಸಾವಿರದಿಂದ ೧ ಲಕ್ಷ ರೂಪಾಯಿಗಳವರೆಗೆ ಕೊಟ್ಟ ಮೇಲೆ ೧ ಲಕ್ಷ ರೂಪಾಯಿ ವರಿ ತೆಗೆದು ಕೊಳ್ಳುವುದರಲ್ಲಿ ತಪ್ಪಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಶೋಷಣೆ ನಿರಂತರ ವಾಗಿ ನಡೆಯುತ್ತಾ ಇದೆ. ತಾವು ಇದೇ ಶಾಸನ ಸಭೆಯಲ್ಲಿ ಹೇಳಿದಿರಿ ೫,೦೦೦ ಮಾತ್ರ ತೆಗೆದು ಕೊಂಡಿದ್ದಾರೆ ಎಂದು. ಕಳೆದ ೧೦ ವರ್ಷಗಲ್ಲಿ ಎಷ್ಟೆಷ್ಟು ಜನ ವಿದ್ಯಾರ್ಥಿಗಳನ್ನು ಅವರ ತಂದೆತಾಯಿಗಳು ಸೇರಿಸಿದ್ದಾರೆ, ಅವರ ಪರವಾಗಿ ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ. ಇದು ನೇರವಾಗಿ ಕಾಲೇಜಿಗೆ ಜಮಾ ಆಗಿಲ್ಲ. ಕಾಲೇಜು ನಡೆಸತಕ್ಕಂಥ ಸಂಘಕ್ಕೆ ಜಮಾ ಆಗಿದೆ. ಲೆಕ್ಕ ತೆಗೆದು ನೋಡಿದರೆ ಇವತ್ತಿಗೂ ಸಿಕ್ಕುತ್ತದೆ ಏಕೆಂದರೆ ರಿಜಿಸ್ಟರ್ಡ್ ಸೊಸೈಟೀಸ್, ಲೆಕ್ಕ ಇಡಬೇಕಾಗುತ್ತದೆ ಆದುದರಿಂದ ಈ ಸದನದ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಿ ಅವರಿಂದ ತನಿಖೆ ನಡೆಸಿ ಒಬ್ಬ ವಿದ್ಯಾರ್ಥಿಯಿಂದ ೫,೦೦೦ಕ್ಕಿಂತ ಮೇಲ್ಪಟ್ಟು ಹಣ ಸಂಗ್ರಹಣೆ ಮಾಡಿರತಕ್ಕದು ಕಂಡುಬಂದರೆ ಆ ಹಣವನ್ನು ಅವನಿಗೆ ವಾಪಸ್ ಕೊಡುತ್ತೀರಾ ಅಥವಾ ಆ ಕಾಲೇಜನ್ನು ಮುಚ್ಚಿಬಿಡುತ್ತೀರಾ ಎನ್ನುವುದನ್ನು ಹೇಳಬೇಕು. ೫,೦೦೦ ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಾರೆ ಎಂದು ತಮ್ಮ ಉತ್ತರ ದಲ್ಲಿ ಹೇಳಿದಿರಿ, ಆದರೆ ಅವರು ೨೫ ಸಾವಿರದಿಂದ ೫೦ ಸಾವಿರದವರೆಗೆ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಚ್, ಸಿದ್ದವೀರಪ್ಪ.—ಆ ರೀತಿ ೫೦೦೦ ರೂಪಾಯಿ ತೆಗೆದುಕೊಳ್ಳಬೇಕು ಎಂದು ಇದೆ ಅದನ್ನು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಆದುದರಿಂದ ಈ ಸದನದ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಿ, ಇದನ್ನು ವಿಚಾರಣೆಗೆ ಗುರಿಪಡಿಸಿ, ಖಾಸಗಿ ಮೆಡಿಕಲ್ ಕಾಲೇಜುಗಳ ಮೇಲೆ ತೀಕ್ಷ್ಣವಾದಂಥ ಕ್ರಮ ತೆಗೆದು ಕೊಳ್ಳದೇ ಹೋದರೆ ಕೇವಲ ಶೋಷಣೆಗೋಸ್ಕರ ಶ್ರೀಮಂತರು ಮಾತ್ರ ಪ್ರಯೋಜನ ಪಡೆಯುತ್ತಿದ್ದಾರೆ. ಮತ್ತು ಶ್ರೀಮಂತರೇ ವೈದ್ಯರಾಗಿ ಬರುತ್ತಿದ್ದಾರೆ. ಅವರಿಗೇ ನಿಮ್ಮ ನೌಕರಿ ಎಲ್ಲಾ ಮೀಸಲಾಗುತ್ತದೆ. ಇದರಿಂದ ಹಣವಂತರು ಮತ್ತಷ್ಟು ಹಣವಂತರಾಗುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದರೆ ತತ್‌ಕ್ಷಣ ಶ್ರೀಮಾನ್ ಸಿದ್ದವೀರಪ್ಪನವರು ನಿಯಂತ್ರಣ ಹಾಕುವುದಕ್ಕೆ ಪ್ರಯತ್ನ ನಡೆಸಬೇಕು. ಇಲ್ಲದೇ ಹೋದರೆ ಈ ಶೋಷಣೆಯಲ್ಲಿ ತಾವೂ ಕೂಡ ಸಹಭಾಗಿಗಳಾಗಿದ್ದೀರಿ ಎನ್ನುವ ಆಪಾದನೆಯನ್ನು ನೇರವಾಗಿ ಮಾಡಬೇಕಾಗುತ್ತದೆ. ಇತ್ತೀಚೆಗೆ ಮಾನ್ಯ ಆರೋಗ್ಯ ಸಚಿವರು ಮೆಡಿಕಲ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಂತೆ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಇದರ ಬಗ್ಗೆ ನಾನು ಹಿಂದೆ ಒಂದು ಸಾರಿ ಕೇಳಿದ್ದೆ.

ನಿಯಮಗಳನ್ನು ರೂಪಿಸಿಕೊಂಡು. ಆ ನಿಯಮಗಳಿಗನುಸಾರವಾಗಿ ಈ ಒಂದು ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವಾಗ, ಮಾನ್ಯ ಸಿದ್ದವೀರಪ್ಪನವರ ಸಂಬಂಧೀಕರು ಅಥವಾ ನಮ್ಮ ಕಡೆಯವರು ಯಾರಿಗಾದರೂ ಪ್ರಮೋಷನ್ ಸಿಗಬೇಕೆಂದು ಮಾಡತಕ್ಕಂಥದ್ದು ಅಲ್ಲ ಯಾರು ಹಲವಾರು ವರ್ಷಗಳಿಂದ ನಿಷ್ಟೆಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸರಿಯಾದ ಪ್ರಮೋಷನ್ ಸಿಗದೇ ಹೋದರೆ ಅವರನ್ನು ಸಮಾಜದಲ್ಲಿ ಯಾರೂ ಕೇಳುವವರೇ ಇಲ್ಲವೇ ? ತಾವು ಏನು ಸೀನಿಯಾರಿಟಿ ಪಟ್ಟಿಯನ್ನು ಮಾಡಿದ್ದೀರಿ, ಇದರಿಂದ ಅನ್ಯಾಯ ವಾಗಿರತಕ್ಕಂಥವರಿಗೆ ಸರಿಪಡಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾಡಿಲ್ಲವೆನ್ನತಕ್ಕಂಥ ಆಪಾದನೆಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ, ಆದುದರಿಂದ ನಿಯಮಗಳನ್ನು ರೂಪಿಸಿ, ನಿಯಮಗಳ ಅನುಸಾರವಾಗಿ ಮಾಡುವಾಗ ಇದೆಲ್ಲವನ್ನೂ ಪುನರ್ ಪರಿಶೀಲನೆ ಮಾಡಬೇಕು ಇಲ್ಲದೇ ಹೋದರೆ ಕೆಲವು ಜನರಿಗೆ ಅನ್ಯಾಯವಾಗುತ್ತದೆ ಎನ್ನತಕ್ಕಂಥ ವಾದವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಅಧ್ಯಕ್ಷರೇ ಇವತ್ತು ನಮ್ಮ ಬೆಂಗಳೂರಿನಲ್ಲಿರತಕ್ಕಂಥ ವಿಕ್ಟೋರಿಯಾ ಆಸ್ಪತ್ರೆಗೆ ಸಂಬಂಧಪಟ್ಟಿರತಕ್ಕಂಥ ವಿಷಯವನ್ನು ಇವತ್ತು ಹೇಳುತ್ತೇನೆ ಬ್ರಿಟೀಷರ ಕಾಲದಲ್ಲಿ ಕಟ್ಟಿರತಕ್ಕಂಥ ವಿಕ್ಟೋರಿಯಾ ಆಸ್ಪತ್ರೆ ಇವತ್ತು ಅಲ್ಲಿಯ ಒಂದು ವಾತಾವರಣ ಹೇಗಾಗಿದೆ ಎಂದರೆ ನೋಡಿದವರಿಗೇ ಗೊತ್ತು. ಒಬ್ಬೊಬ್ಬ ಆರೋಗ್ಯ ಮಂತ್ರಿಗಳು ಬಂದ ಹಾಗೆಲ್ಲಾ ಬದಲಾಗುತ್ತಾ ಹೋಗಿ ಇವತ್ತು ಅದಕ್ಕೆ ಮುಖವೂ ಇಲ್ಲ, ಯಾವ ಅಂದಚೆಂದವೂ ಇಲ್ಲ. ಇವತ್ತು ಅದನ್ನು ವಿಕಾರ ವಾಗಿ ಮಾಡಿಟ್ಟಿದ್ದಾರೆ. ಅಲ್ಲಿದ್ದಂಥ ಒಳ್ಳೆಯ ವಾತ ವರಣವನ್ನೆಲ್ಲಾ ಇವತ್ತು ಹದಗೆಡಿಸಿದ್ದಾರೆ. ಮತ್ತೆ ನಿಮ್ಮ ಕಾಲದಲ್ಲಿ ಮುಂಭಾಗದಲ್ಲಿ ಒಂದು ಬ್ಲಾಕ್‌ನ್ನು ಕಟ್ಟಿಸುವುದಕ್ಕೆ ಹೊರಟಿದ್ದೀರಿ. ಇವತ್ತು ವಿಕ್ಟೋರಿಯಾ ಆಸ್ಪತ್ರೆಯನ್ನು ಏನೊಂದು ವ್ಯವಸ್ಥಿತ ರೀತಿಯಲ್ಲಿ ಇಡಬೇಕಾಗಿತ್ತೋ ಅದನ್ನು ಮಾಡುತ್ತಾ ಇಲ್ಲ. ಇನ್ನು ಅಲ್ಲಿಯ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ, ಅಲ್ಲಿಯ ಮೇಲಾಧಿಕಾರಿಗಳು ಅಲ್ಲಿಯ ಇಡೀ ಆಸ್ಪತ್ರೆಯಲ್ಲಿ ಸಿಬ್ಬಂದಿಯ ಜೊತೆಗೆ ಸಹಕರಿಸಿ ಕೆಲಸ ಮಾಡತಕ್ಕಂಥ ಸ್ಥಿತಿಯಲ್ಲಿ ಇವತ್ತು ಇಲ್ಲ. ಅಲ್ಲಿಯ ಆಡಳಿತ ಹದಗೆಟ್ಟು ಹೋಗಿದೆ ಇಷ್ಟು ವರ್ಷದಿಂದ ಈ ಆಸ್ಪತ್ರೆಯ ಆಡಳಿತ ಹದಗೆಟ್ಟು ಕೂತಿರಬೇಕಾದರೆ ತಾವು ನೋಡಿಕೊಂಡು ಕೂತು ಬಿಟ್ಟಿದ್ದರೆ ಏನು ಮಾಡಬೇಕು ? ತಾವು ವಿಕ್ಟೋರಿಯಾ ಆಸ್ಪತ್ರೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ವಿಚಿತ್ರ ಕಾಯಿಲೆ ಬಂದಂತೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕೆಟ್ಟ ತರಹದ ಕಾಯಿಲೆ ಉಲ್ಬಣವಾಗಿದೆ. ಆ ಕಾಯಿಲೆಯನ್ನು ನೀವು ನೋಡಿಲ್ಲವೆಂದು ಕಾಣುತ್ತದೆ, ಅದನ್ನು ನೋಡಿದರೆ ಅದರ ಭಯಂಕರ ರೂಪ ಗೊತ್ತಾಗುತ್ತದೆ. ಇವತ್ತು ಆ ಕಾಯಿಲೆ ಮನುಷ್ಯರನ್ನು ಆಸ್ಪತ್ರೆ ಯಲ್ಲಿಟ್ಟು ಚಿಕಿತ್ಸೆ ಮಾಡದೇ ಹೋದರೆ ಅದರ ವ್ಯಾಧಿ ಎಲ್ಲಾ ಕಡೆಯೂ ಬೆಳೆಯುತ್ತಾ ಹೋಗುತ್ತದೆ. ಇವತ್ತು ಅವರನ್ನು ಆಸ್ಪತ್ರೆಯಲ್ಲಿ ಇಟ್ಟು ಚಿಕಿತ್ಸೆ ಮಾಡಲು ಸಾಕಷ್ಟು ಸೌಕರ್ಯಗಳು ನಮ್ಮಲ್ಲಿ ಇಲ್ಲ ಆದುದರಿಂದ ಇದರ ಕಡೆಗೆ ತಾವು ಹೆಚ್ಚಿನ ಗಮನ ಕೊಟ್ಟು ಮಾಡಬೇಕೆಂದು ಹೇಳುತ್ತೇನೆ.

ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕಂಥ ಮೆಗ್ಗಾನ್ ಆಸ್ಪತ್ರೆ ಒಂದು ಕೆಟ್ಟ ಆಡಳಿತಕ್ಕೆ ಒಳಪಟ್ಟಿದೆ. ಅಲ್ಲಿರತಕ್ಕಂಥ ಆಡಳಿತಾಧಿಕಾರಿಯನ್ನು ನೀವು ವರ್ಗ ಮಾಡಲೇಬೇಕು, ಅವರ ಮೇಲೆ ಬರತಕ್ಕಂಥ ಆಪಾದನೆಗಳ ಸ್ವರೂಪವನ್ನು ನೋಡಿದರೆ ಇಲ್ಲಿ ಹೇಳುವುದಕ್ಕೆ ಬೇಸರವಾಗುತ್ತದೆ. ಶಿವಮೊಗ್ಗದಲ್ಲಿರ ತಕ್ಕಂಥ ಮೆಗ್ಗಾನ್ ಆಸ್ಪತ್ರೆಯಲ್ಲಿರತಕ್ಕಂಥ ಡಿಸ್ಟ್ರಿಕ್ಟ್ ಸರ್ಜನ್‌ರವರನ್ನು ವರ್ಗ ಮಾಡಬೇಕೆಂದು ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನಿಮ್ಮ ಆರೋಗ್ಯ ಇಲಾಖೆ ನಾನು ಮುಂಚೆ ಹೇಳಿದಂತೆ ಇವತ್ತು ದಿನ ನಿತ್ಯ ರೋಗ ಪೀಡಿತ ಆಗುತ್ತಾ ಬರುತ್ತಿದೆ. ಆಡಳಿತ ಕ್ಷೇತ್ರದಲ್ಲಿ ಆಗುತ್ತಿದೆ ತಾವು ಹಿಡಿದು ಕೊಂಡಿರತಕ್ಕಂಥ ಸೇವಾಕ್ಷೇತ್ರದಲ್ಲಿಯೂ ಆಗುತ್ತಿದೆ ಈ ಒಂದು ರೋಗವನ್ನು ಕಡಿಮೆ ಮಾಡುವುದಕ್ಕೆ ಸ್ವಲ್ಪ ಉತ್ತಮ ಪಡಿಸುವುದಕ್ಕೆ ನೀವು ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ನೀವು ಬರೀ

ಹಣವನ್ನು ಖರ್ಚು ಮಾಡಿದರೆ ಕೆಲಸವೇನು ಆಗುತ್ತದೆ, ಆದರೆ ನೀವು ಅದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಅದರ ಬಗ್ಗೆ ನಿಗಾ ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ,

ಅಧ್ಯಕ್ಷರು.— ಈಗ ಮಾನ್ಯ ಸದಸ್ಯರುಗಳು ನಾವು ಮಾತನಾಡುತ್ತೇವೆಂದು ಹೆಸರುಗಳನ್ನು ಕಳುಹಿಸಿಕೊಟ್ಟಿದ್ದಾರೆ. ಎಷ್ಟು ಜನಕ್ಕೆ ಅವಕಾಶ ಮಾಡುವುದಕ್ಕೆ ಸಾಧ್ಯವೋ ಅಷ್ಟು ಅವಕಾಶ ಮಾಡಿ ಕೊಡುತ್ತೇನೆ. ತಾವು ಸಹಕರಿಸಬೇಕು ಆದುದರಿಂದ ೧೦ ನಿಮಿಷದಲ್ಲಿಯೇ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಆರೋಗ್ಯ ಮಂತ್ರಿಗಳು ಇಟ್ಟಿರತಕ್ಕಂಥ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ನಾನು ಕೆಲವು ವಿಚಾರಗಳನು ಈ ಸಮಯದಲ್ಲಿ ಹೇಳಬಯಸುತ್ತಿದ್ದೇನೆ ಮೊಟ್ಟಮೊದಲನೆಯದಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಒಟ್ಟು ೯ ಮೆಡಿಕಲ್ ಕಾಲೇಜುಗಳು ಇದ್ದು ಸರ್ಕಾರದ ಪರವಾಗಿಳ ಮೆಡಿಕಲ್ ಕಾಲೇಜುಗಳು ನಡೆಯುತ್ತಿವೆ ಪ್ರೈವೇಟ್ ೫ ಮೆಡಿಕಲ್ ಕಾಲೇಜ್‌ಗಳು ಇರುತ್ತವೆ ಸರ್ಕಾರದ ಪರವಾಗಿರತಕ್ಕಂಥ ಮೆಡಿಕಲ್ ಕಾಲೇಜ್‌ಗಳಲ್ಲಿ ಸೆಲೆಕ್ಷನ್ ಕಮಿಟಿ ಮೆರಿಟ್ಸ್‌ನ ಮೇಲೆ ಸರಿಯಾಗಿ ಅಡ್ಮಿಷನ್ ಮಾಡುತ್ತಿದ್ದಾರೆ. ಆದರೆ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗಳಲ್ಲಿ ತುಂಬಾ ಧನವಂತರ ಮಕ್ಕಳಿಗೆ ವಿಲ್ಲಾ ಅಡ್ಮಿಷನ್ ಸಿಕ್ಕುತ್ತಿದೆ, ಇವತ್ತು ರಾಜ್ಯದಲ್ಲಿರತಕ್ಕಂಥ ೫ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗಳಲ್ಲಿ ಕೇವಲ ಶ್ರೀಮಂತರ ಮಕ್ಕಳಿಗೆ ಅಡ್ಮಿಷನ್ ಹೋಗುತ್ತಿದೆ ಬಡವರ ಮಕ್ಕಳಿಗೆ ಎಳ್ಳಷ್ಟೂ ಪ್ರವೇಶವಿಲ್ಲ ಎನ್ನತಕ್ಕಂಥದ್ದನ್ನು ಧಾರಾಳವಾಗಿ ಹೇಳಬಯಸುತ್ತೇನೆ ಬೆಳಗಾಂನಲ್ಲಿರತಕ್ಕಂತ ಜವಾಹರಲಾಲ್ ನೆಹರೂ ಮೆಡಿಕಲ್ ಕಾಲೇಜ್‌ನಲ್ಲಿ ನಾನು ಒಬ್ಬ ಬೋರ್ಡ್ ಮ್ಯಾನೇಜ್‌ಮೆಂಟಿನಲ್ಲಿ ಸದಸ್ಯನಾಗಿದ್ದಾಗ್ಯೂ ಕೂಡ ಸರ್ಕಾರದ ಪರವಾಗಿ ಇಷ್ಟು ಅಡ್ಮಿಷನ್ ತೆಗೆದುಕೊಳ್ಳಬೇಕೆಂದು ಹೇಳಿದಾಗ್ಯೂ ಉಪಯೋಗವಾಗುತ್ತಿಲ್ಲ, ಬೆಳೆಗಾಂನಲ್ಲಿರತಕ್ಕಂಥ ಕಾಲೇಜ್‌ನಲ್ಲಿ ಪ್ರತಿ ವರ್ಷ ಒಂದು ನೂರು ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡುತ್ತಿದ್ದೆವು ಆದರೆ ಕಳೆದ ವರ್ಷ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್‌ನವರು ೨೦ ಸೀಟ್‌ಗಳನ್ನು ಕಡಿಮೆ ಮಾಡಿದ್ದಾರೆ ಅದರ ಪರಿಣಾಮವಾಗಿ, ೨೫ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ಇಲ್ಲದಂತಾಗಿದೆ. ಉಳಿದ ೭೫ ಭಾಗದಲ್ಲಿ ಕೇವಲ ಶ್ರೀಮಂತರ ಮಕ್ಕಳಿಗೆ ಎಲ್ಲಾ ಅಡ್ಮಿಷನ್ ಸಿಗುತ್ತಿದೆ. ಮತ್ತೆ ರಾಜ್ಯದ ಹೊರಗಿನಿಂದ ಬರತಕ್ಕಂಥ ಎಂದರೆ ಕೇರಳಾ, ಮದ್ರಾಸ್, ಆಂದ್ರ, ಗುಜರಾತ್ ಮುಂತಾದ ಕಡೆಗಳಿಂದ ಬರತಕ್ಕಂಥ ೨೫ ವಿದ್ಯಾರ್ಥಿಗಳು ೫೦ ಸಾವಿರ ೭೦ ಸಾವಿಗ ೧ ಲಕ್ಷದವರೆಗೂ ಹಣವನ್ನು ಕೊಟ್ಟು ಸೇರುತ್ತಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಅನುಮತಿಯ ಮೂಲಕ ಇವತ್ತಿನ ದಿವಸ ೨೫ ವಿದ್ಯಾರ್ಥಿಗಳಿಗೂ ಕೂಡ ೨೦ ಸಾವಿರ ೫೦ ಸಾವಿರ ಹೀಗೆ ಬೇಕಾದಷ್ಟು ಹಣವನ್ನು ಈ ಮೆಡಿಕಲ್ ಕಾಲೇಜ್‌ನವರು ತೆಗೆದುಕೊಂಡು ಅಲ್ಲಿ ೨೫ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಡುತ್ತಿದ್ದಾರೆ. ಅನಂತರ ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಂತಹ ವಿದ್ಯಾರ್ಥಿಗಳಿಗೆ ೫ ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀ ತೆಗೆದುಕೊಂಡು ಸೀಟ್ ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ಆ ಪ್ರಕಾರವಾಗಿ ೫ ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀಸನ್ನು ತೆಗೆದುಕೊಂಡು ಪಾವತಿ ಕೊಡುತ್ತಿದ್ದಾರೆ. ಈ ಕಾಲೇಜುಗಳಲ್ಲಿ ಏನಿದೆ ಎಂದರೆ, ಕಾಲೇಜಿಗೆ ಒಂದು ಬಡ್ಜೆಟ್. ಸಂಸ್ಥೆಗೇ ಒಂದು ಬಡ್ಜೆಟ್ ಹೀಗೆ ಬೇರೆ ಬೇರೆ ಇದೆ ಕಾಲೇಜು ಬಡ್ಜೆಟ್‌ನಲ್ಲಿ ಕೇವಲ ೫ ಸಾವಿರ ರೂಪಾಯಿಗಳಂತೆ ಹಣ ಜಮಾ ಆಗುತ್ತದೆ. ಆದರೆ ಸಂಸ್ಥೆಯ ಕಾಲೇಜ್‌ನ ಬಗ್ಗೆ ಎಷ್ಟು ಹಣ ಬಂತು ? ಎಂಬುದಕ್ಕೆ ಲೆಕ್ಕ ಇಲ್ಲ. ಸಂಸ್ಥೆಯಲ್ಲಿ ಒಂದು ಪೆಟ್ಟಿಗೆ ಇಡುತ್ತಾರೆ, ಸೀಲ್ ಮಾಡುತ್ತಾರೆ. ಹಣವನ್ನು ಕೊಡುವವರು ಯಾರಾದರೂ ಇದ್ದರೆ ಅದರಲ್ಲಿ ಹಾಕಬಹುದು. ಆದರೆ ಇದಕ್ಕೆ ಪಾವತಿ ಇಲ್ಲ. ಲೆಕ್ಕ ಇಲ್ಲ ಏನೇನೂ ಇಲ್ಲ, ಪೆಟ್ಟಿಗೆಯೊಳಗೆ ಎಷ್ಟು ಹಣ ಬರುತ್ತದೆ ಎಂಬುದು ಗೊತ್ತಾಗುವುದಿಲ್ಲ. ಕಾಲೇಜ್ ಬಡ್ಜೆಟ್‌ನಲ್ಲಿ ೧೦, ೨೦ ಲಕ್ಷ ಲಾಸ್ ತೋರಿಸುತ್ತಾರೆ ಈ ಲಾಸನ್ನು ಹೇಗೆ ತುಂಬಿಕೊಳ್ಳುತ್ತೀರಿ ಎಂದು ಕೇಳಿದರೆ ಅದನ್ನು ಸಂಸ್ಥೆಯಿಂದ ಕೊಡುವ ಡೊನೇಷನ್‌ನಲ್ಲಿ ತೆಗೆದು ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಈ ವಿಧವಾದ ಅವ್ಯವಹಾರಗಳು ನಿಲ್ಲಬೇಕು ಸರ್ಕಾರದ ಪರವಾಗಿ ಕೊಟ್ಟಂಥ, ಸೌಕರ್ಯಗಳನ್ನು ತೆಗೆದು ಕೊಳ್ಳುತ್ತಾರೆ. ಸರ್ಕಾರದ ಆದೇಶವನ್ನು ಅವರು ಪಾಲಿಸುವುದಿಲ್ಲ, ಆರ್ಡಿನೆನ್ಸ್ ಹೊರಡಿಸುತ್ತೇವೆಂದು ಮಂತ್ರಿಗಳು ಹೇಳಿದರು ಅದನ್ನೂ ಹೊರಡಿಸಿಲ್ಲ, ಕಾನೂನು ಮಾಡುತ್ತೇವೆ, ಬಿಲ್ ತರುತ್ತೇವೆ ಎಂದು ಹೇಳಿದಿರಿ. ಇನ್ನೂ ಅದೂ ಕೂಡ ಬರಲಿಲ್ಲ. ಕ್ಯಾಬಿನೆಟ್‌ನಲ್ಲಿ ಸಬ್ ಕಮಿಟಿಯು ಒಂದು ಬಿಲ್ಲು ಪರಿಶೀಲನೆಯಲ್ಲಿ ಇದೆ ಎಂದು ಹೇಳುತ್ತೀರಿ. ಆದುದರಿಂದ ನಾನು ತಮಗೆ ಹೇಳುವುದೇನೆಂದರೆ ಈಗ ಅಸೆಂಬ್ಲಿ ಹಾಗೂ ಕೌನ್ಸಿಲ್‌ಗಳು ನಡೆಯುತ್ತಿವೆ. ಈಗಲೇ ಒಂದು ಬಿಲ್ಲನ್ನು ತಂದು ಪಾಸ್ ಮಾಡಿಸುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಬಡವರ ಮಕ್ಕಳಿಗೆ, ಜನಸಾಮಾನ್ಯರಿಗೆ ಈ ಕಾಲೇಜುಗಳಲ್ಲಿ ಅಡ್ಮಿಷನ್ ಸಿಕ್ಕುವುದಿಲ್ಲ. ಸರ್ಕಾರದವರು ಕಾಲೇಜುಗಳ ಮೇಲೆ ಕಾನೂನು ಪ್ರಕಾರವಾಗಿ ನಿರ್ಬಂಧವನ್ನು

ಹಾಕಬೇಕಾದರೆ ಕಾಯಿದೆಯ ಪ್ರಕಾರ ಮಾಡಬೇಕಾಗುತ್ತದೆ. ಅದು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಸರ್ಕಾರದ ಪರವಾಗಿ ನಾವು ಈ ಕಾಲೇಜಿನ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದೇವೆ, ಅವರು ಸರ್ಕಾರದ ಆಜ್ಞೆಯನ್ನು ಪಾಲಿಸುವುದಿಲ್ಲ, ಅಲ್ಲಿ ಸರ್ಕಾರಕ್ಕೆ ಬೆಲೆ ಇಲ್ಲ ನಮಗೂ ಬೆಲೆ ಇಲ್ಲ. ನಾವು ಏನೇ ಹೇಳಿದರೂ ಕೂಡ ಅವರ ಮೇಲೆ ಪರಿಣಾಮವಾಗುವುದಿಲ್ಲ. ಇದಕ್ಕೆ ಒಂದೇ ಒಂದು ಉಪಾಯ ಎಂದರೆ ನೀವು ಒಂದು ಕಾನೂನನ್ನು ಮಾಡಿ, ಕಾನೂನು ರೀತಿಯಲ್ಲಿ ನಿರ್ಬಂಧವನ್ನು ಹಾಕಿದರೆ ಮಾತ್ರ ಅದು ಸಾಧ್ಯವಾಗುತ್ತದೆ ಇಲ್ಲದೇ ಹೋದರೆ ಅದು ಆಗುವುದಿಲ್ಲ. ಆಗ ಅವರು ಜೋರು ಮಾಡುವುದಕ್ಕಾಗುವುದಿಲ್ಲ ಈಗ ಹೇಗಿದ್ದರೂ ಅಸೆಂಬ್ಲಿ ಚಾಲೂ ಇದೆ, ಕೌನ್ಸಿಲ್ ಚಾಲೂ ಇದೆ, ಈಗ ಒಂದು ಬಿಲ್ಲನ್ನು ತರಬೇಕು. ಪಾವತಿ ಕೊಡುವಾಗ ಇಂತಿಷ್ಟು ಹಣ ಎಂದು ತೆಗೆದುಕೊಳ್ಳಬೇಕು, ಅದಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು. ಹಾಗೇನಾದರೂ ತೆಗೆದುಕೊಂಡರೆ ಶಾಸನಕ್ಕೆ ಗುರಿಯಾಗುತ್ತಾರೆ ಎಂದು ನಿರ್ಬಂಧ ಹಾಕಬೇಕು ಈಗ ಕೇವಲ ಶ್ರೀಮಂತರ ಮಕ್ಕಳಿಗೆ ಅಡ್ಮಿಷನ್ ಸಿಕ್ಕುತ್ತಿದೆ, ಜನಸಾಮಾನ್ಯರ ಮಕ್ಕಳಿಗೆ ಅಡ್ಮಿಷನ್ ಏನೇನೂ ಸಿಕ್ಕುತ್ತಿಲ್ಲ. ಸರ್ಕಾರದ ಪರವಾಗಿ ಮೆರಿಟ್ ಮೇಲೆ ೨೫ ಜನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂದು ಮೊದಲು ವ್ಯವಸ್ಥೆ ಇತ್ತು. ಈಗ ಈ ಬಿಲ್ಲನ್ನು ತರದೇ ಹೋದರೆ ಆ ವ್ಯವಸ್ಥೆ ಮತ್ತೆ ಬರುವುದಿಲ್ಲವೆಂದು ಹೇಳಬಯಸುತ್ತೇನೆ.

*Mr. Deputy Speaker in the Chair*

ಶ್ರೀ ಎಸ್. ಬಂಗಾರಪ್ಪ.—ತಾವು ಈ ಕ್ಯಾಪಿಟೇಷನ್ ಬಗ್ಗೆ ಹೇಳಿದ್ದೀರಿ. ಬೆಳಗಾಂ ಕಾಲೇಜಿನ ಉದಾಹರಣೆಯನ್ನು ಕೊಟ್ಟು ಹೇಳಿದ್ದೀರಿ. ಈ ರೀತಿ ಎಲ್ಲ ಕಾಲೇಜುಗಳಿಗೂ ಮಾಡಬೇಕು. ಕ್ಯಾಪಿಟೇಷನ್ ಫೀ ಬಗ್ಗೆ ಹೇಳುವಾಗ ಪೆಟ್ಟಿಗೆ ಇಟ್ಟಿದ್ದಾರೆ, ಸೀಲ್ ಹಾಕಿದ್ದಾರೆ, ಅದರಲ್ಲಿ ಯಾರು ಯಾರು ಎಷ್ಟೆಷ್ಟು ದುಡ್ಡು ಹಾಕುತ್ತಾರೆ ಎಂಬುದಕ್ಕೆ ಲೆಕ್ಕ ಸಿಕ್ಕುವುದಿಲ್ಲ. ರಸೀದಿ ಕೊಡುವುದಿಲ್ಲ. ಎಂದು ಆಪಾದನೆ ಮಾಡಿದ್ದೀರಿ. ಜನ ಕೊಡಬೇಕೆಂದಿರುವ ೫೦ ಸಾವಿರವಾಗಲಿ ೭೫ ಸಾವಿರವಾಗಲಿ, ಅಥವಾ ಒಂದು ಲಕ್ಷವಾಗಲಿ, ಕ್ಯಾಷ್ ಆಗಲಿ, ಅಥವಾ ಪೆಟ್ಟಿಗೆಯಲ್ಲಾಗಲಿ ಒಯ್ದು ಹಾಕುತ್ತಾರೆ ಏತಕ್ಕೆಂದರೆ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಕ್ಕುವ ಅಂತಹವರು ಅಷ್ಟು ಹಣ ಕೊಡುತ್ತಾರೆ, ಅವರ ಹೆಸರಿಗೆ ಪಾವತಿ ಸಿಕ್ಕುತ್ತದೆ.

ಶ್ರೀ ಪಿ. ಎಂ. ಬಂಗಿ.—ನಮ್ಮ ಕರ್ನಾಟಕ ರಾಜ್ಯದಲ್ಲಿ ಶ್ರೀಮಂತರ ಮಕ್ಕಳು ಕೇವಲ ಪೆಟ್ಟಿಗೆಯಲ್ಲಿ ಹಾಕುತ್ತಾರೆ. ಅವರ ಹೆಸರಿಗೆ ಪಾವತಿ ಸಹ ಇರುವುದಿಲ್ಲ. ಪ್ರೆಸಿಡೆಂಟ್ ಹೆಸರಿನಲ್ಲಿ ಲಂಪ್ಸಮ್ ಜಮಾ ಮಾಡುತ್ತಾರೆ ಎಂದು ಹೇಳುತ್ತಾರೆ ಒಟ್ಟಿನಲ್ಲಿ ನಮಗೆ ಅವರು ಏನನ್ನೂ ತೋರಿಸುವುದಿಲ್ಲ ಬೋರ್ಡ್ ಆಫ್ ಮಾನೇಜ್‌ಮೆಂಟಿನವರಿಗೆ ಸಂಸ್ಥೆಯಲ್ಲಿ ಬಂದ ಹಣದ ಲೆಕ್ಕವನ್ನು ಕೇಳಿದರೂ ಕೂಡ ಅವರು ನಮಗೆ ಲೆಕ್ಕ ತೋರಿಸುವುದಿಲ್ಲ. ಕೊನೆಗೆ ಕಾಲೇಜಿನಲ್ಲಿ ಡೆಫಿಸಿಟ್ ತೋರಿಸುತ್ತಾರೆ. ಈ ಡೆಫಿಸಿಟ್‌ನ್ನು ಹೇಗೆ ತುಂಬುತ್ತೀರಿ ಎಂದು ಕೇಳಿದರೆ ನಮ್ಮ ಮೈನ್ ಇನ್‌ಸ್ಟಿಟ್ಯೂಷನ್‌ನವರು ಕೊಡುವ ಡೊನೇಷನ್‌ನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಉತ್ತರ ಹೇಳುತ್ತಾರೆ. ಆದರೆ ಇದು ಸರಿಯಲ್ಲ ಶ್ರೀಮಂತರ ಮಕ್ಕಳು ೩೦–೪೦ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಾರೆ ಇದರಿಂದಾಗಿ ಪ್ರತಿ ವರ್ಷವೂ ೭೫ ವಿದ್ಯಾರ್ಥಿಗಳು ಶ್ರೀಮಂತರ ಮಕ್ಕಳೇ ಅಡ್ಮಿಟ್ ಆಗುತ್ತಾರೆ. ಜನಸಾಮಾನ್ಯರಿಗೆ ಅಡ್ಮಿಷನ್ ಸಿಕ್ಕುವುದಿಲ್ಲ. ಬಡವರ ಮಕ್ಕಳಿಗೆ ಯಾವರೀತಿಯಿಂದಲೂ ಪ್ರವೇಶ ಇಲ್ಲ. ಆದುದರಿಂದ ಕೂಡಲೇ ಒಂದು ಕಾಯಿದೆಯನ್ನು ಮಾಡಿ ಈ ಕಾಲೇಜುಗಳನ್ನೂ ಒಂದು ಹತೋಟಿಯೊಳಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎರಡನೇ ವಿಷಯ ಏನೆಂದರೆ ರಾಜ್ಯದಲ್ಲಿ ಇದ್ದಂಥ ಎಲ್ಲಾ ಸರ್ಕಾರಿ ಡಾಕ್ಟರ್‌ಗಳಿಗೂ ಪ್ರೈವೇಟ್ ಪ್ರಾಕ್ಟೀಸ್ ಮಾಡಲು ಪರವಾನಗಿ ಕೊಟ್ಟಿದ್ದು ಸರಿಯಲ್ಲ. ಪ್ರೈವೇಟ್ ಪ್ರಾಕ್ಟೀಸ್ ಯಾವುದೋ, ಕರಪ್ಷನ್ ಯಾವುದೋ ಯಾವರೀತಿಯಿಂದಲೂ ಡಿಫ್‌ರೆನ್ಷಿಯೇಟ್ ಮಾಡುವುದಕ್ಕೆ ಬರುವುದಿಲ್ಲ. ಸರ್ಕಾರಿ ದವಾಖಾನೆಗಳಿಗೆ ರೋಗಿಗಳು ಬಂದರೆ ಅವರ ಕಡೆಯಿಂದ ಸಾಕಷ್ಟು ಹಣವನ್ನು ತೆಗೆದುಕೊಳ್ಳುತ್ತಾರೆ. ಆದುದರಿಂದ ತಾವು ದಯಮಾಡಿ ಒಂದು ಆಜ್ಞೆಯನ್ನು ವಿಧಿಸಿ ಸರ್ಕಾರಿ ಡಾಕ್ಟರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದೆಂದು ತಿಳಿಸಬೇಕೆಂದು ಎರಡನೇ ಸಲಹೆಯನ್ನು ಮಾಡಬಯಸುತ್ತೇನೆ ಸರ್ಕಾರಿ ದವಾಖಾನೆಗಳಲ್ಲಿ ಇನ್‌ಪೇಷೆಂಟ್ಸ್‌ಗೋಸ್ಕರ ಬ್ರೆಡ್‌ಗಳನ್ನು ಮತ್ತು ಹಾಲನ್ನು ಕೊಟ್ಟರೆ ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥ ದವಾಖಾನೆಗೆ ಚೀಫ್ ಮೆಡಿಕಲ್ ಆಫೀಸರ್‌ರವರು ಕ್ರೆಡಿಟ್ ಬೇಸಿಸ್ ಮೇಲೆ ಸಾಮಾನುಗಳನ್ನು ತಂದರೆ ಅವರಿಗೆ ಹಣವನ್ನು ಕೊಡುವ ವ್ಯವಸ್ಥೆ ಇಲ್ಲ ಇನ್ನು ಮುಂದೆ ರೋಗಿಗಳಿಗೆ ಯಾವರೀತಿಯಿಂದಲೂ ಹಾಲನ್ನಾಗಲಿ, ಬ್ರೆಡ್‌ನ್ನಾಗಲಿ ಕೊಡುವ ವ್ಯವಸ್ಥೆಯನ್ನು ನಿಲ್ಲಿಸಬೇಕಾಗುತ್ತದೆ.

ದವಾಖಾನೆಗಳಿಗೆ ಕ್ರೆಡಿಟ್ ಬೇಸಿಸ್ ಮೇಲೆ ಏನು ಸಾಮಾನುಗಳನ್ನು ತಂದಿದ್ದಾರೆ ಅದಕ್ಕೆಲ್ಲಾ ಸಂಪೂರ್ಣವಾಗಿ ಹಣವನ್ನು ಕೊಡುವುದಕ್ಕೆ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ ಬೋರ್ಡ್ ಆಫ್ ವಿಜಿಟರ್ಸ್‌ನವರು ಪ್ರತಿಯೊಂದು ದವಾಖಾನೆಗಳ ಬಗ್ಗೆ ರೆಸಲ್ಯೂಷನ್ ಮಾಡುತ್ತಾರೆ. ಈ ರೆಸಲ್ಯೂಷನ್ ಕಡೆಗೆ ಗಮನಕೊಟ್ಟು ಅದನ್ನು ಕಾರ್ಯಾಚರಣೆಯಲ್ಲೇ ತರುವ ವ್ಯವಸ್ಥೆ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎನ್. ಪುಟ್ಟಸ್ವಾಮಿ (ಚಾಮರಾಜನಗರ). – ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಆರೋಗ್ಯ ಖಾತೆಗೆ ಸಂಬಂಧಪಟ್ಟಂಥ ಮತ್ತು ಜನಾರೋಗ್ಯ ಸಂಬಂಧಪಟ್ಟಂತೆ ಇಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಆರೋಗ್ಯ ಖಾತೆಯಲ್ಲಿ ರಾಜ್ಯಮಟ್ಟದಲ್ಲಿ ನಡೆಸುತ್ತಾ ಇರತಕ್ಕ ವೈದ್ಯಕೀಯ ಕಾಲೇಜುಗಳಿಗೆ ಈ ರೀತಿಯಲ್ಲಿ ದೊಡ್ಡದೊಡ್ಡ ಆಸ್ಪತ್ರೆಗಳನ್ನು ಸೃಷ್ಟಿಮಾಡಿ ಹೆಚ್ಚು ಹೆಚ್ಚು ಹಾಸಿಗೆಗಳನ್ನು ಹಾಕಿ ನಡೆಸುತ್ತ ಇರತಕ್ಕಂಥಾದ್ದನ್ನು ನಾವು ಕಾಣುತ್ತೇದ್ದೇವೆ. ನನ್ನ ದೃಷ್ಟಿಯಲ್ಲಾದರೂ ಕೂಡ ಸರ್ಕಾರ ಎಲ್ಲಿ ವೈದ್ಯಕೀಯ ಕಾಲೇಜುಗಳನ್ನು ತಾನೇ ನೇರವಾಗಿ ನಡೆಸುತ್ತಿದೆ ಎಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಿವೆ ಅದಕ್ಕೆ ಸೇರಿದಂಥ ಆಸ್ಪತ್ರೆಗಳನ್ನು ಮಂಜೂರು ಮಾಡಿಕೊಟ್ಟು ನಡೆಸುವುದಕ್ಕೆ ಏರ್ಪಾಡು ಮಾಡುತ್ತಾರೆ. ಇದರ ಬಗ್ಗೆ ಸ್ಥೂಲವಾದ ಒಂದು ನೀತಿಯನ್ನು ಸರ್ಕಾರದವರು ಹಾಕಿಕೊಳ್ಳತಕ್ಕಂಥಾದ್ದು ಸರಿ ಎಂದು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರಿ ಹಾಗೂ ಖಾಸಗಿಯವರ ಆಡಳಿತದಲ್ಲಿ ನಡೆಯುತ್ತಾ ಇರತಕ್ಕಂಥ ವೈದ್ಯಕೀಯ ಕಾಲೇಜುಗಳು ಬೇರೆ ಬೇರೆ ಎನ್ನುವ ರೀತಿಯಲ್ಲಿ ನಾವು ಅರ್ಥಮಾಡಿಕೊಳ್ಳತಕ್ಕದ್ದು ಸರಿಯಾದುದಲ್ಲ. ಏಕೆಂದರೆ ಇಂಡಿಯನ್ ಮೆಡಿಕಲ್ ಇನ್‌ಸ್ಟಿಟ್ಯೂಟ್ ಮಾಡಿರತಕ್ಕ ಸಲಹೆ ಮೇರೆಗೆ ಈ ಎರಡು ಕಾಲೇಜುಗಳೂ ಕೂಡ ಒಂದೇ ಎಂದು ನನ್ನ ಭಾವನೆ. ಆದುದರಿಂದ ಸರ್ಕಾರದವರು ಎರಡೂ ವಲಯಗಳಲ್ಲಿ ನಡೆಯತಕ್ಕ ಕಾಲೇಜುಗಳಿಗೂ ಕೂಡ ಒಂದೇ ರೀತಿಯಾದಂಥ ಹಾಸಿಗೆ ಸೌಲಭ್ಯಗಳನ್ನು ಒದಗಿಸತಕ್ಕಂಥ ನೀತಿಯನ್ನು ಅಳವಡಿಸಿಕೊಳ್ಳತಕ್ಕದು ಸರಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾಲೇಜುಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಆಸ್ಪತ್ರೆಗಳನ್ನು ಮಂಜೂರು ಮಾಡಿ ಸರ್ಕಾರ ನಡೆಸುತ್ತಾ ಇರುವುದರ ಜೊತೆಗೆ ನಮ್ಮ ರಾಜ್ಯದಲ್ಲಿ ಇತರ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಕನಿಷ್ಟಪಕ್ಷ ೨೫೦ರಿಂದ ೫೦೦ ಹಾಸಿಗೆಯುಳ್ಳ ಆಸ್ಪತ್ರೆಗಳನ್ನು ಮಾಡತಕ್ಕಂಥ ನೀತಿಯನ್ನು ಸರ್ಕಾರ ಅಳವಡಿಸಿಕೊಳ್ಳುವುದು ಸರಿ ಎಂದು ನನ್ನ ಭಾವನೆ. ಅದೇ ರೀತಿ ತಾಲ್ಲೂಕುಗಳಲ್ಲಿ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ೧೦ ಸಾವಿರದಿಂದ ೨೫ ಸಾವಿರ ಜನಸಂಖ್ಯೆ ಇರುವ ನಗರವೇ ಆಗಲಿ, ೫ ಸಾವಿರ ಮೇಲ್ಪಟ್ಟು ೫೦ ಸಾವಿರ ಅಥವಾ ಒಂದು ಲಕ್ಷದ ತನಕ ಜನಸಂಖ್ಯೆ ಇರುವ ನಗರವೇ ಆಗಲಿ ಅದನ್ನೂ ಕೂಡ ಒಂದು ಆಧಾರವಾಗಿಟ್ಟುಕೊಂಡು ಅದಕ್ಕಿಂತ ಹೆಚ್ಚಿನ ರೀತಿಯಾದಂಥ ಆಸ್ಪತ್ರೆಗಳನ್ನು ಮಂಜೂರು ಮಾಡಿ ಅದಕ್ಕನುಗುಣವಾಗಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿನ ಆಸ್ಪತ್ರೆಗಳಲ್ಲಿಯೂ ಕೂಡ ಹಾಸಿಗೆಗಳನ್ನು ಹಾಕತಕ್ಕ ವ್ಯವಸ್ಥೆ ಮಾಡುವುದು ಸರಿ ಎಂದು ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳ ಮುಂದೆ ನನ್ನ ಸಲಹೆಯನ್ನು ಇಡುವುದಕ್ಕೆ ಇಚ್ಛೆಪಡುತ್ತೇನೆ.

3–30 P.M.

ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ವ್ಯವಸ್ಥೆಮಾಡುವ ದೃಷ್ಟಿಯನಿಟ್ಟುಕೊಂಡು ಪ್ರೈಮರಿ ಹೆಲ್ತ್ ಸೆಂಟರುಗಳನ್ನು ತೆರೆದಿದ್ದೀರಿ. ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ನಾವು ವ್ಯವಸ್ಥೆ ಮಾಡಿಕೊಂಡಿದಂಥ ನೂತನ ಮಾದರಿ ಆಸ್ಪತ್ರೆಗಳು ಎಂದು ಕೆಲವು ಆಸ್ಪತ್ರೆಗಳಿವೆ, ಕಂಬೈಂಡ್ ಆಸ್ಪತ್ರೆಗಳೆಂದು ಕೆಲವು ಆಸ್ಪತ್ರೆಗಳಿವೆ ಕಳೆದ ೧೦ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸರ್ಕಾರವು ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರಿಗಳೆಂದು ಅದನ್ನು ಕೂಡ ವ್ಯವಸ್ಥೆಮಾಡಿ ನಡೆಸುತ್ತಿರತಕ್ಕಂಥದ್ದು ಕಾಣುತ್ತಿದ್ದೇವೆ. ಈವತ್ತು ಸರ್ಕಾರದ ನೀತಿ ಮೆಡಿಕಲ್ ಸಬ್‌ಸೆಂಟರ್‌ಗಳನ್ನು ಒಂದೆರಡು ವರ್ಷಗಳಿಂದ ನಮ್ಮ ಸರ್ಕಾರ ಜಾರಿಗೆ ಕೊಟ್ಟು ಕಳೆದ ವರ್ಷಗಳಿಂದ ಸುಮಾರು ೧೦೦ ಮೆಡಿಕಲ್ ಸಬ್ ಸೆಂಟರುಗಳನ್ನು ರಾಜ್ಯದಲ್ಲಿ ಮಂಜೂರು ಮಾಡಿ ನಡೆಸುತ್ತಿದ್ದಾರೆ ಈ ರೀತಿ ನಡೆಸುತ್ತಿರುವ ಸಬ್‌ಸೆಂಟರ್‌ಗಳಿಗೆ ಒಂದೊಂದಕ್ಕೆ ಒಂದೊಂದು ನೀತಿಯನ್ನು ಅನುಸರಿಸುತ್ತಿದ್ದ ಹಾಗೆ ಕಾಣುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ಆಗಲಿ ಅಥವಾ ಮೆಡಿಕಲ್ ಸಬ್ ಸೆಂಟರ್‌ಗಳೇ ಆಗಲಿ ಅಥವಾ ಕಂಬೈಂಡ್ ಡಿಸ್ಪೆನ್ಸರಿ ಯಾವುದೇ ಮಂಜೂರುಮಾಡಿದಾಗಲೂ ಸರ್ಕಾರದ ನೀತಿ ಒಂದೇ ಆಗಿರಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗಾಗಿ ಹೇಳುವುದಾದರೆ ಸರ್ಕಾರದವರು ಮೆಡಿಕಲ್ ಸಬ್‌ಸೆಂಟರ್‌ಗಳನ್ನು ಮಂಜೂರು ಮಾಡುವಾಗ ನೌಕರರ ಸಂಬಳ ಔಷದೋಪಚಾರ ಇವುಗಳನ್ನು ಬಿಟ್ಟರೆ ಉಳಿದ ಎಲ್ಲ ಖರ್ಚುಗಳನ್ನು ಗ್ರಾಮಪಂಚಾಯಿತಿಗಳೇ ಆಗಲಿ ಅಥವಾ ಖಾಸಗಿಯವರೇ ಆಗಲಿ ಉತ್ತೇಜನ ರೂಪದಲ್ಲಿ

ಕೊಟ್ಟು ಅದನ್ನು ನಡೆಸಬೇಕು ಎಂದು ಹಾಕಿಕೊಂಡಿರತಕ್ಕ ನೀತಿ ಸರಿಯಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತು ಯಾವುದೇ ತೆರಿಗೆಯನ್ನೂ ಹಾಕಿದರೂ ಕೂಡ ಅದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅದರಲ್ಲೂ ರೋಗ ರುಜಿನಗಳಿಗೆ ಸಿಕ್ಕಿ ನರಳುತ್ತಿರುವ ಬಡಜನತೆಯ ಮೇಲೆ ಬೀಳುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಆರೋಗ್ಯ ದೃಷ್ಟಿಯಿಂದ ಆಸ್ಪತ್ರೆಗಳನ್ನು ಸಬ್‌ಸೆಂಟರ್‌ಗಳನ್ನು ಸರ್ಕಾರದವರೇ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯ ಬೇಕು, ಅದನ್ನು ಬಿಟ್ಟು ಆಸ್ಪತ್ರೆ ಕಟ್ಟಡಗಳನ್ನು ಅವರೇ ಕಟ್ಟಿಕೊಳ್ಳಬೇಕು. ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಅವರೇ ಕಟ್ಟಿಸಿಕೊಡಬೇಕು ಎಂದರೆ ನನಗನಿಸುತ್ತದೆ ಸರ್ಕಾರದವರು ಹತ್ತು ವರ್ಷ ಗಳಲ್ಲಿ ಎಲ್ಲ ಕಡೆಗೂ ವೈದ್ಯಕೀಯ ಸೆಂಟರ್‌ಗಳನ್ನು ಕೊಡುತ್ತೇವೆಂದು ಹಾಕಿಕೊಂಡಿರುವ ನೀತಿ ೧೦ ವರ್ಷ ಗಳಾದರೂ ಮಾಡುವುದಕ್ಕೆ ಆಗುವುದಿಲ್ಲವೆಂದು ನನಗನಿಸುತ್ತದೆ. ನಮ್ಮ ಸುತ್ತಮುತ್ತಲೂ ಇರುವ ಗ್ರಾಮಗಳಲ್ಲಿ ಹತ್ತು ಸಾವಿರ ಜನರಿರುವ ಹಳ್ಳಿಗೆ ಸರ್ಕಾರದಲ್ಲಿ ಒಂದು ಆಸ್ಪತ್ರೆ ಎಮ್ಮ ಮಂಜೂರಾದರೂ ಸಹ ಅದನ್ನು ತೆರೆಯದಿರುವ ಸಂದರ್ಭ ಕೂಡ ಇದೆ. ಅದನ್ನು ತೆರೆಯಬೇಕು. ಯಾವುದೇ ಒಂದು ನಿಗದಿ ಯಾದಂತ ಸೌಲಭ್ಯವಿಲ್ಲದೆ ಇರತಕ್ಕ ಕಟ್ಟಡದಲ್ಲಿ ಪ್ರಾರಂಭ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಸರ್ಕಾರದವರು ಹಾಕಿಕೊಂಡಿರತಕ್ಕ ನೀತಿಯನ್ನು ಅಳವಡಿಸಿಕೊಂಡು ಕಟ್ಟಡ ಮತ್ತು ವಸತಿ ಗೃಹಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡದೆಹೋದರೆ ಹತ್ತು ವರ್ಷಗಳಾದರೂ ಆಗುವುದಿಲ್ಲ ಒಂದು ರೂಮಿನ ಕೊಠಡಿ ಅದಕ್ಕಿಂತ ಕಡಿಮೆ ಇರತಕ್ಕ ಕಟ್ಟಡದಲ್ಲಿ ಆಸ್ಪತ್ರೆಗಳನ್ನು ನಡೆಸತಕ್ಕ ಸಂದರ್ಭ ಬರುತ್ತದೆಂದು ಆರೋಗ್ಯ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಾ ಮಾನ್ಯ ಆರೋಗ್ಯ ಮಂತ್ರಿಗಳು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಮತ್ತೆ ನಮ್ಮ ಚಾಮರಾಜನಗರಕ್ಕೆ ೩೫, ೪೦ ಸಾವಿರ ಜನಸಂಖ್ಯೆ ಇರತಕ್ಕ ನಗರವಾಗಿರುವುದರಿಂದ ಮಾನ್ಯ ಮಂತ್ರಿಗಳು ಸರ್ಕಾರದ ಪತಿಯಿಂದ ಜನರಲ್ ಆಸ್ಪತ್ರೆಯನ್ನು ತೆರೆಯಲು ಕಳೆದ ಎರಡು ವರ್ಷದ ಹಿಂದೆಯೇ ಮಂಜೂರಾತಿಯನ್ನು ಕೊಟ್ಟಿದ್ದರೂ ಸಹ ಅದಕ್ಕೆ ಬೇಕಾದಂಥ ಸ್ಥಳ ಕಟ್ಟಡವನ್ನು ಕಟ್ಟಿಸು ವುದಕ್ಕೆ ಬಜೆಟನಲ್ಲಿ ಯಾವ ಅವಕಾಶಗಳನ್ನು ಮಾಡಿಕೊಟ್ಟಿಲ್ಲ. ಇದನ್ನು ನೋಡಿದಾಗ ನಮಗೆ ಅರ್ಥ ವಾಗುತ್ತದೆ ನಮಗೆ ಬೇಕಾದಂಥ ಎಕ್ಸರೇ ಯೂನಿಟ್ ಸಪ್ಲೈ ಮಾಡುವುದಕ್ಕೆ ಏನೂ ವ್ಯವಸ್ಥೆ ಮಾಡಿಲ್ಲ ವೆಂಬುದಾಗಿ ತಿಳಿಯುತ್ತದೆ. ನಮಗೆ ಬೇಕಾದಂತ ಡಾಕ್ಟರ್‌ಗಳನ್ನು ಸಿಬ್ಬಂದಿವರ್ಗದವರನ್ನು ಮತ್ತು ಜನರಲ್ ಆಸ್ಪತ್ರೆಗೆ ಸರ್ಕಾರದವರು ಗೊತ್ತು ಮಾಡಿರುವಂತೆ ಆಧಾರವನ್ನಿಟ್ಟುಕೊಂಡು ಔಷಧಿಗಳನ್ನು ಕೊಟ್ಟಿರತಕ್ಕಂಥದ್ದನ್ನು ಬಿಟ್ಟರೆ ಅಲ್ಲಿಗೆ ಬೇಕಾದಂಥ ಡಯೆಟ್ ವ್ಯವಸ್ಥೆ ಮಾಡುವುದಾಗಲಿ ಆಪರೇಷನ್ ಮಾಡಲಿಕ್ಕೆ ಬೇಕಾದಂಥ ಸಲಕರಣೆಗಳನ್ನು ಒದಗಿಸುವುದೇ ಆಗಲಿ ಕಟ್ಟಡಗಳನ್ನು ಕಟ್ಟಿಸುವುದೇ ಆಗಲಿ, ಯಾವುದನ್ನೂ ವರ್ಷಗಳು ಆದರೂ ಮಾಡಿಲ್ಲ. ಆದ್ದರಿಂದ ಈ ವರ್ಷವಾದರೂ ಕೊಡುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಕೊಟ್ಟಿರತಕ್ಕ ಕಾಲ ಬಹಳ ಕಡಿಮೆ ಇರುವುದರಿಂದ ಹೆಚ್ಚಿಗೆ ಮಾತನಾಡಲು ಇಚ್ಛೆಪಡದೆ ವೈದ್ಯಕೀಯ ಕಾಲೇಜುಗಳ ಬಗ್ಗೆ ಒಂದೆರಡು ಮಾತನ್ನು ಮುಗಿಸುತ್ತೇನೆ. ಮಾನ್ಯ ಸ್ನೇಹಿತರಾದ ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀಮಾನ್ ಬಂಗಾರಪ್ಪನವರು ಹೇಳಿದ್ದಾರೆ. ನಮ್ಮಲ್ಲಿ ಸರ್ಕಾರದವರು ಮನಸ್ಸು ಮಾಡಿ ಸರ್ಕಾರದಪತಿಯಿಂದ ನಡೆಯುತಕ್ಕ ಕಾಲೇಜುಗಳೇ ಆಗಲಿ, ಖಾಸಗಿಯವರು ನಡೆಸತಕ್ಕ ಕಾಲೇಜು ಗಳೇ ಆಗಲಿ ಇವೆರಡಕ್ಕೂ ಯಾವ ಅನ್ಯಾಯವಾಗದಂತೆ ಸೂತ್ರವನ್ನು ಅನುಸರಿಸಿ ಖಾಸಗಿ ವೈದ್ಯಕೀಯ ಕಾಲೇಜುಗಳ ಮೇಲೆ ಹೆಚ್ಚಿನ ಹಿಡಿತವನ್ನು ಸರ್ಕಾರ ಇಟ್ಟುಕೊಳ್ಳತಕ್ಕ ರೀತಿಯಲ್ಲಿ ಕಾನೂನನ್ನು ಮಾಡು ವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ಇರುವುದರಿಂದ ಸರ್ಕಾರದವರು ಈ ವರ್ಷವಾದರೂ ೧೯೬೫ನೇ ವರ್ಷದಲ್ಲಿ ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳು ಸೇರುವುದಕ್ಕೆ ಮುಂಚಿತವಾಗಿ ಕಾನೂನನ್ನು ಮಾಡಿ ಕಾಲೇಜುಗಳ ಮೇಲೆ ಸರ್ಕಾರದ ಹಿಡಿತ ಇರುವಂತೆ ವ್ಯವಸ್ಥೆ ಮಾಡಬೇಕು. ಎಂದು ಮಾನ್ಯ ಮಂತ್ರಿಗಳಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡಲಿಕ್ಕೆ ಈ ಸಲಹೆಯನ್ನು ಅವರ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ ಕಾಲೇಜಿನವರಿಗೆ ೫ ವರ್ಷಗಳು ಮಾತ್ರ ಕ್ಯಾಪಿಟೇಶನ್ ಫೀ ಕೊಟ್ಟರೆ ಸಾಕು ಎಂದು ಹೇಳಲಾಗಿದೆಯೇ ಹೊರತು ಬಹುಶಃ ಮಾನ್ಯ ಮಂತ್ರಿಗಳಿಗೂ ಕೂಡ ಇದರ ಬಗ್ಗೆ ಗೊತ್ತಿಲ್ಲವೆಂದು ಕಾಣುತ್ತದೆ, ಇದರ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ನಿಖರವಾದಂಥ ನೀತಿಯನ್ನು ಹಾಕಿ ಕಟ್ಟುನಿಟ್ಟಾಗಿ ಪಾಲನೆ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡುವುದು ಸರಿಯೆಂದು ನನ್ನ ಅಭಿಪ್ರಾಯವಾಗಿರುವುದರಿಂದ ಮಾನ್ಯಮಂತ್ರಿಗಳನ್ನು ಇದರ ಬಗ್ಗೆ ಪರಿಶೀಲನೆ ಮಾಡಲಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗಾಗಲಿ ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳಿಗಾಗಲಿ ಇಲಾಖೆಯವರಿಂದ ಔಷಧಿ ಗಳನ್ನು ಒದಗಿಸತಕ್ಕ ರೀತಿಯನ್ನು ಮತ್ತು ವ್ಯವಸ್ಥೆಯನ್ನು ನೋಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಕ್ಕಿಂತ ಕೆಟ್ಟಹೆಸರುಬರುವ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು,

ಎಂದು ನನ್ನ ಅಭಿಪ್ರಾಯ ಅದಕ್ಕೆ ಏನಾದರೂ ಒಂದು ಹೊಸ ನೀತಿಯನ್ನು ಅನುಸರಿಸಿದರೆ ಒಳ್ಳೆಯದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಸ್ಪತ್ರೆಗಳಿಗೆ ಸಂಬಂಧಪಟ್ಟಂತೆ ಡಿಸ್ಟ್ರಿಕ್ಟ್ ಹೆಲ್ತ್ ಸೆಂಟರ್‌ಗಳು ಏನಾದರೂ ಆರ್ಡರ್ಸ್ ಪ್ಲೇಸ್ ಮಾಡಿದರೆ ಅವರಿಗೆ ಒಂದು ವಾರದಲ್ಲಿ ಅಥವಾ ಹದಿನೈದು ದಿವಸಗಳಲ್ಲಿ ಅವರಿಗೆ ಉಪಯೋಗಕ್ಕೆ ಬೇಕಾಗುವಷ್ಟು ಔಷದಿಗಳು ಸಿಕ್ಕುವ ರೀತಿಯಲ್ಲಿ ವ್ಯವಸ್ಥೆ ಮಾಡುವಂಥಾ ಒಂದು ನೀತಿಯನ್ನು ಸರ್ಕಾರದವರು ಹಾಕಿಕೊಳ್ಳುವುದು ಸರಿ ಎಂದು ನನ್ನ ಭಾವನೆ ಇದೆ. ಈಗ ಕೊಡತಕ್ಕ ಔಷದಿ ಲೆಕ ದಲ್ಲಿ ಇರುತ್ತದೆ. ದುಡ್ಡನ್ನು ಕೂಡ ಒದಗಿಸುತ್ತೇವೆಂದು ಹೇಳುತ್ತಾರೆ, ಆದರೆ ಅದಕ್ಕೆ ಆರು ತಿಂಗಳಾದರೂ ಔಷದಿಗಳು ಅವರ ಕೈ ಸೇರಿರುವುದಿಲ್ಲ. ಒಂದೊಂದು ಸಾರಿ ವರ್ಷದ ಕೊನೆಯವರಿಗೂ ಸಿಕ್ಕದ ಸಂದರ್ಭಗಳು ಅನೇಕವಿದೆ, ಇದನ್ನು ಕಾಲಕ್ಕೆ ಸರಿಯಾಗಿ ಒದಗಿಸದಿದ್ದರೆ ಸರ್ಕಾರಕ್ಕೆ ಬಹಳ ಕೆಟ್ಟ ಹೆಸರು ಬರುತ್ತದೆ ಆದ್ದರಿಂದ ಔಷಧಿಗಳನ್ನು ಒದಗಿಸತಕ್ಕಂಥ ಏನು ಒಂದು ಯೋಜನೆ ಇದೆ ಅದನ್ನು ಸ್ವಲ್ಪ ಬದಲಾವಣೆ ಮಾಡಿ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುವಂತೆ ಮಾಡತಕ್ಕದ್ದು ಸರಿಯೆಂದು ಹೇಳುವುದಲ್ಲದೆ ಗ್ರಾಮಾಂತರ ಪ್ರದೇಶಗಳಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡುವುದರಲ್ಲಿ ದಯಮಾಡಿ ಸರ್ಕಾರದವರು ಏನು ಅರ್ಧ ಬಿಲ್ಡಿಂಗ್‌ಗೆ ಕೊಡತಕ್ಕ ಅರ್ಧ ಖರ್ಚಿನಲ್ಲಿ ಸರ್ಕಾರದವರು ಕೊಡತಕ್ಕಂಥದ್ದು ಆಗಿದೆ. ಅದರಂತೆ ಸಲಕರಣೆಗಳಿಗೆ ಮತ್ತಿತರ ಸೌಲಭ್ಯಗಳಿಗೆ ಅರ್ಧ ಖರ್ಚು ಕೊಡತಕ್ಕ ನೀತಿಯನ್ನು ಹಿಂದಿನ ಸರ್ಕಾರದವರು ಹಾಕಿಕೊಂಡು ಬಂದಿರುವ ನೀತಿಯನ್ನಾದರೂ ನಡೆಸದೆಹೋದರೆ ಪೂರ್ಣವಾಗಿ ಸಹಾಯ ಸೌಕರ್ಯಗಳನ್ನು ಗ್ರಾಮಪಂಚಾಯಿತಿಗಳಿಗೆ ಬಿಟ್ಟರೆ ವೈದ್ಯಕೀಯ ಸೌಲಭ್ಯಗಳಿಲ್ಲದಂತಾಗುತ್ತದೆ, ನಿಜವಾಗಿಯೂ ಗ್ರಾಮಪಂಚಾಯಿತಿಗಳು ಅದನ್ನು ಪೂರೈಸುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲನೆ ಮಾಡತಕ್ಕಂಥದ್ದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷಣೆಯವರೇ ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ನಾನು ವಿರೋಧಿಸುತ್ತಾ ಕೆಲವು ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಎರಡು ವರ್ಷಗಳ ಹಿಂದೆ ಇದೇ ಬಜೆಟ್ ಅಧಿವೇಶನದಲ್ಲಿ ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರು, ತಾಲ್ಲೂಕು ಬೋರ್ಡ್ ವತಿಯಿಂದ ನಡೆಯುತಕ್ಕ ಎಲ್ಲ ಆಯುರ್ವೇದಿಕ ಆಸ್ಪತ್ರೆಗಳನ್ನು ಕೂಡ ತಕ್ಷಣ ಸರ್ಕಾರ ವಹಿಸಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅದರಲ್ಲೂ ರೋಗ ರುಜಿನಕ್ಕೆ ಸಿಕ್ಕಿ ತೊಂದರೆಗೆ ಒಳಗಾಗಿರತಕ್ಕ ಜನರಿಗೆ ವೈದ್ಯಕೀಯ ಸೌಕರ್ಯ ಕಟ್ಟುನಿಟ್ಟಾಗಿ ದೊರೆಯುವ ಹಾಗೆ ಏರ್ಪಾಡು ಮಾಡುತ್ತೇವೆಂದು ವಚನ ಕೊಟ್ಟಿದ್ದರು.

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿಕೊಡುತ್ತೇನೆ ತಕ್ಷಣವೆಂದು ಹೇಳಲಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ನಾವು ಹೊಸದಾಗಿ ಬಂದ ಮೆಂಬರುಗಳು, ನಮ್ಮ ಮಾತನ್ನು ಪೂರ್ಣವಾಗಿ ನಂಬಿಕೊಂಡು ಜನರು ನಿರೀಕ್ಷಿಸುತ್ತಿರುವುದರಿಂದ ನಾವು ಸಾಕಷ್ಟು ಪ್ರಯತ್ನ ಮಾಡಿದೆವು. ಯಾವತ್ತು ಸರ್ಕಾರ ಇದನ್ನು ತೆಗೆದುಕೊಳ್ಳುತ್ತದೆ, ಹೇಳಿ, ಈ ವರ್ಷ ಮಾಡುತ್ತೀರಾ, ಹೇಳಿ. ಈ ವರ್ಷವಾದರೂ ದೊಡ್ಡ ಮನಸ್ಸುಮಾಡಿ ಈ ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಳ್ಳುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಇನ್ನೊಂದು ಆಶ್ವಾಸನೆ ಕೊಟ್ಟಿದ್ದಿರಿ, ಪ್ರತಿಯೊಂದು ಆಸ್ಪತ್ರೆಗೂ ಕೂಡ ೧೫ ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದೆ ಔಷಧಿಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ ಆ ರೀತಿ ಏನು ಒಂದು ಭರವಸೆ ಕೊಟ್ಟಿದ್ದಿರಿ, ಅದೂ ಕೂಡ ಇಡೇರಲಿಲ್ಲ ಅದು ಈಡೇರುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕುಟುಂಬ ಯೋಜನೆಯ ವಿಷಯವನ್ನು ಹೇಳುವುದಾದರೆ, ಪ್ರತಿವರ್ಷವೂ ಎರಡರಿಂದ ಮೂರು ಕೋಟಿ ರೂಪಾಯಿ ಸರ್ಕಾರ ಖರ್ಚು ಮಾಡುತ್ತಿದೆ. ಇದರಲ್ಲಿ ಆಗುತ್ತಿರುವ ಅನಾಹುತ ಈ ದೇಶದಲ್ಲಿ ಇನ್ನು ಯಾವ ಬಾಬಿನಲ್ಲಿಯೂ ಆಗಿಲ್ಲವೆಂದರೆ ತಪ್ಪಾಗಲಾರದು. ಹೆಂಗಸರಿಗೆ ಟ್ಯೂಬೆಕ್ಟಮಿ ಆಪರೇಷನ್ ಮಾಡುತ್ತಾರೆ. ದುಡ್ಡಿನ ಆಸೆಯನ್ನು ತೋರಿಸಿ ಅಲ್ಪಸ್ವಲ್ಪ ಆಶೋತ್ತರಗಳನ್ನು ತೋರಿಸಿ ಪ್ರಚಾರಕರು ಹಳ್ಳಿಯ ಹೆಂಗಸರನ್ನು ಆಪರೇಷನ್ನಿಗೆ ಕರೆದುಕೊಂಡು ಬರುತ್ತಾರೆ. ಆಪರೇಷನ್ ಆದ ಮೇಲೆ ಅವರಿಗೆ ಏನಾಯಿತು ಏನಾದರೂ ತೊಂದರೆಯಾಯಿತೇ ಎಂಬ ಫಲೋ ಅಪ್ ಮಾಡದೆ ಇರುವುದರಿಂದ ಅನೇಕ ಜನ ನಿರ್ಭಾಗ್ಯ ಜೀವಿಗಳು ಹತರಾಗಿದ್ದಾರೆ. ಎಷ್ಟೋ ಸಂಸಾರಗಳು ಹಾಳಾಗಿವೆ, ಎಷ್ಟೋ ಜನ ಮಕ್ಕಳು ಬೀದಿ ಪಾಲಾಗಿದ್ದಾರೆ. ೧೯೭೪ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಶಾಂತಿ ಗ್ರಾಮದ ಆಸ್ಪತ್ರೆಯಲ್ಲಿ ಲಕ್ಷ್ಮಮ್ಮ ಮತ್ತು ಗೌರಮ್ಮ ಎಂಬ ಇಬ್ಬರು ಹೆಂಗಸರಿಗೆ ಆಪರೇಷನ್ ಮಾಡಿದರು, ಆಪರೇಷನ್ ಆದ ಏಳನೆಯ ದಿವಸ ಹೊರಗೆ ಬಿಟ್ಟಿದರು. ಆದರ ಮಾರನೆಯ ದಿವಸವೇ ಅವರಿಬ್ಬರೂ ಸತ್ತರು. ಅವರಿಬ್ಬರಿಗೂ ನಾಲ್ಕು ನಾಲ್ಕು ಜನ ಮಕ್ಕಳಿದ್ದಾರೆ. ಅವರಿಗೆ ಎರಡೆರಡು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ

ರಂತೆ. ದುಡ್ಡಿನ ವಿಚಾರ ಹಾಗೆ ಇರಲಿ. ಆಪರೇಷನ್ ಮಾಡಿದ ವೈದ್ಯರು ಯಾರು ? ಅವರಿಗೆ ತಕ್ಕ ಅನುಭವವಿಲ್ಲದ ಮೇಲೆ ಅವರು ಏಕೆ ಆಪರೇಷನ್ ಮಾಡಬೇಕಾಗಿತ್ತು ? ಹಳ್ಳಿಯ ಹೆಂಗಸರನ್ನು ಕರೆದು ಕೊಂಡು ಬಂದು ಹೊಸದಾಗಿ ಆಪರೇಷನ್ ಮಾಡುವುದಕ್ಕೆ ಟ್ರೈನಿಂಗ್ ತೆಗೆದು ಕೊಳ್ಳಲು ಆ ರೀತಿ ಮಾಡಿ ದರೆ ? ಆ ಇಬ್ಬರು ಹೆಂಗಸರ ಗಂಡಂದಿರು ಅವರ ಚಿಕ್ಕ ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಅವರನ್ನು ನೋಡಿ ನನಗೆ ಬಹಳ ವ್ಯಥೆಯಾಯಿತು. ಆಪರೇಷನ್ ಮಾಡುವುದಾದರೆ ಅದಕ್ಕೆ ಬೇಕಾದ ಯೋಗ್ಯತೆಯನ್ನು ಹೊಂದಿರುವ ಡಾಕ್ಟರಿಂದ, ಪರಿಣತರಿಂದ ಮಾಡಿಸಿ. ಪ್ರಚಾರಕೋಸ್ಕರ ಇಷ್ಟು ಸಾವಿರ ಜನಗಳಿಗೆ ಆಪರೇಷನ್ ಮಾಡಲಾಯಿತು, ಇಷ್ಟು ಜನ ಸಂಖ್ಯೆ ಕಡಿಮೆಯಾಯಿತು ಎನ್ನುವ ಲೆಕ್ಕವನ್ನು ಕೊಡುವುದಕ್ಕೆ, ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಆಪರೇಷನ್ ಮಾಡುವುದನ್ನು ದಯವಿಟ್ಟು ನಿಲ್ಲಿಸಿ ಎಂದು ಒತ್ತಾಯ ಪೂರ್ವಕವಾಗಿ, ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆಪರೇಷನ್ ಮಾಡಿದ ಮೇಲೆ ಆಪರೇಷನ್ ಮಾಡಿದವರ ವಿಳಾಸವನ್ನು ಇಟ್ಟುಕೊಂಡು ಆಗಾಗ್ಗೆ ಪರೀಕ್ಷೆ ಮಾಡಿ ಫಾಲೋ ಅಪ್ ಮಾಡಿ ಅವರಿಗೆ ಏನಾದರೂ ತೊಂದರೆ ಇದೆಯೋ ಎಂದು ನೋಡುವ ವ್ಯವಸ್ಥೆಯನ್ನು ಮಾಡಬೇಕಾದ್ದು ಬಹು ಮುಖ್ಯವಾದದು. ಒಂದು ಸಂದರ್ಭದಲ್ಲಿ ಟ್ಯೂಬೆಕ್ಟಮಿ ಆಪರೇಷನ್ ಮಾಡಿದ ಆರು ತಿಂಗಳಿಗೆ ಹೆಂಡತಿ ಯಾದವಳು ಗರ್ಭಿಣಿಯಾದಳು. ಹೆಂಡತಿ ಹೆರಿಗೆ ಆಸ್ಪತ್ರೆಗೆ ಹೋದರೆ ಇತ್ತ ಗಂಡನಾದವನು ಮೆಂಟಲ್ ಆಸ್ಪತ್ರೆಗೆ ಹೋದ. ಇಂಥ ನೂರಾರು ಕೇಸುಗಳಿವೆ. ನಾನು ನಡೆದಿರತಕ್ಕ ವಾಸ್ತವಾಂಶವನ್ನು ಹೇಳು ತ್ತಿದ್ದೇನೆ. ಮುಂದೆ ಏನಾಯಿತು ಎನ್ನುವುದು ಗೊತ್ತಿಲ್ಲ. ಈ ವಿಚಾರವನ್ನು ಕೇಳಿದಾಗ ನನಗೆ ಬಹಳ ವ್ಯಥೆಯಾಯಿತು. ಪರಿಣತರಲ್ಲದೆ ಇರುವವರ ಕೈಯಿಂದ ಆಪರೇಷನ್ ಮಾಡಿಸಿ ತೊಂದರೆ, ಅನಾಹುತ ಮಾಡಬೇಡಿ. ಆಪರೇಷನ್ ಯಶಸ್ವಿಯಾಗಿದೆಯೇ ಎಂದು ವೆರಿಫೈ ಮಾಡಿ ನೋಡುವುದಕ್ಕೆ ವ್ಯವಸ್ಥೆ ಮಾಡಬೇಕು. ಅದಿಲ್ಲದೆ ಮನಸ್ವೇಚ್ಛೆ ಆಪರೇಷನ್ ಮಾಡಿ ಅನೇಕ ಸಂಸಾರಗಳನ್ನು ಹಾಳು ಮಾಡಬೇಡಿ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಎಕ್ಸ್‌ಟೆನ್‌ಷನ್ ಎಜುಕೇಟರ್ಸ್ ಎಂದು ತೆಗೆದುಕೊಳ್ಳಲು ಅಡ್ವರ್ಟೈಸ್‌ಮೆಂಟ್ ಮಾಡಿದರು. ನೂರಾರು ಜನರನ್ನು ಎನ್‌ಲಿಸ್ಟ್ ಮಾಡಿದರು. ಕೆಲಸ ಗ್ಯಾರಂಟಿ ಯಾಗಿ ಸಿಕ್ಕುತ್ತದೆ ಎಂದು ಹೆಣ್ಣು ಕೊಟ್ಟು ಮದುವೆ ಮಾಡಿದರು. ಕೆಲಸ ಕೊಡಲಿಲ್ಲ: ಅವರ ಗತಿ ಏನು ? ಕೆಲವರಿಗೆ ಏಜ್‌ಬಾರ್ ಆಗಿದೆ ಮೂರು ವರ್ಷವಾದರೂ ಕೆಲಸ ಕೊಡಲಿಲ್ಲ. ಏಕಾನಮಿ ಆರ್ಡರ್ ಪ್ರಯುಕ್ತ ಕೆಲಸ ಕೊಡಲಿಲ್ಲವೆಂದು ಕೇಳುತ್ತೇನೆ ಮೆಡಿಕಲ್ ಡಿಪಾರ್ಟ್‌ಮೆಂಟಿಗೂ ಎಕನಾಮಿ ಆರ್ಡರಿಗೂ ಏನು ಸಂಬಂಧ ? ಎನ್‌ಲಿಸ್ಟ್ ಆಗಿರುವವರಿಗೆಲ್ಲ ತಕ್ಷಣ ಕೆಲಸವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಆಸಿಸ್ಟೆಂಟ್ ಸರ್ಜನ್ಸ್ ಮತ್ತು ಲೆಕ್ಚರರ್ಸ್ ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಓದುವುದಕ್ಕೆ ಹೋದರೆ ಅವರಿಗೆ ಇದುವರೆಗೂ ಅರ್ಧಸಂಬಳವನ್ನು ಕೊಡುತ್ತಿದ್ದರು. ಈಗ ಲೆಕ್ಚರರುಗಳಿಗೆ ಮಾತ್ರ ಪೂರ್ತಿ ಸಂಬಳವನ್ನು ಕೊಟ್ಟು ಅಸಿಸ್ಟೆಂಟ್ ಸರ್ಜನರಿಗೆ ತೆಗೆದು ಹಾಕಿದ್ದಾರೆ. ಅವರು ಮಾಡಿರುವ ಪುಣ್ಯ ವೇನು ಮತ್ತು ಇವರು ಮಾಡಿರುವ ಪಾಪವೇನು ? ಕೆಲವರಿಗೆ ಮಾತ್ರ ಪೂರ್ತಿ ಕೊಟ್ಟು ಇನ್ನು ಕೆಲವರಿಗೆ ಏನೂ ಕೊಡದೆ ಇರುವುದು ಯಾವ ನ್ಯಾಯ ? ಎಲ್ಲರಿಗೂ ಪೂರ್ತಿಯಾಗಿ ಸಂಬಳ ಕೊಡಬೇಕು ಇಲ್ಲದೆ ಹೋದರೆ ಹಿಂದೆ ಇದ್ದಂತೆ ಎಲ್ಲರಿಗೂ ಅರ್ಧ ಸಂಬಳವನ್ನೇ ಕೊಡುವ್ಯವ್ಯವಸ್ಥೆಯನ್ನಾದರೂ ಮಾಡಬೇಕು.

ಡಿಸ್ಟ್ರಿಕ್ ಆಸ್ಪತ್ರೆಗಳಲ್ಲಿ ಎಲ್ಲ ವೈದ್ಯರೂ ಇರುತ್ತಾರೆ ಸೀರಿಯಸ್ ಕೇಸುಗಳನ್ನು ನೋಡಬೇಕಾದರೆ ಎಲ್ಲ ರೋಗಿಗಳೂ ಅಲ್ಲಿಗೆ ಹೋಗಬೇಕು. ಸಣ್ಣಪುಟ್ಟ ಕಾಯಿಲೆಗಳಿಗೆ ಕೂಡ ಪ್ರತಿ ದಿವಸ ಜಿಲ್ಲಾ ಆಸ್ಪತ್ರೆಗೆ ಹೋಗಬೇಕು ಎಂದರೆ ಬಹಳ ತೊಂದರೆಯಾಗುತ್ತದೆ: ದೊಡ್ಡ ನಗರಗಳಲ್ಲಿ ಅಲ್ಲಲ್ಲಿ ಬಡಾವಣೆಗಳಲ್ಲಿ ಮುನಿಸಿಪಾಲಿಟಿಯವರು ಕಟ್ಟಡಗಳನ್ನು ಕೊಡುವುದಕ್ಕೆ ತಯಾರಾಗಿದ್ದರೆ ಅಲ್ಲಿ ಸಣ್ಣಪುಟ್ಟ ಕಾಯಿಲೆಗಳನ್ನು ನೋಡಲು ಡಾಕ್ಟರುಗಳನ್ನು ನೇಮಕ ಮಾಡಬೇಕು. ಹಾಸನದಲ್ಲಿ ಮುನಿಸಿಪಾಲಿಟಿಯವರು ಕೆಲವು ಕಟ್ಟಡ ಗಳನ್ನು ಬಡಾವಣೆಗಳಲ್ಲಿ ಕೊಡಲು ತಯಾರಾಗಿದ್ದಾರೆ. ಆದ್ದರಿಂದ ಈ ವಿಚಾರಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹಮೀದ್ ಷಾ (ಶಿವಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಉರ್ದು ಭಾಷೆ ಯಲ್ಲಿ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಒಂದು ಕವಿತೆಯನ್ನು ಉರ್ದುವಿನಲ್ಲಿ ಹೇಳಿ ನಂತರ ಕನ್ನಡದಲ್ಲಿ ಮಾತನಾಡುತ್ತೇನೆ. (ಉರ್ದು ಕವಿತೆ) ಅವರನ್ನು ನೋಡಿದ ತಕ್ಷಣ ಜನಗಳಿಗೆ ಏನೋ ಒಳ್ಳೆಯದು ಮಾಡುತ್ತಾರೆಂದು ತಿಳಿಯುತ್ತಾರೆ. ಆದರೆ ರೋಗಿಗಳ ಗತಿ ದೇವರೇ ನೋಡಬೇಕು ಎನು ವುದು ಅದರ ಅರ್ಥ.

ಮಾನ್ಯ ಆರೋಗ್ಯ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ನಮ್ಮ ಸಚಿವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸೇರಿದ್ದರೋ ಅದನ್ನೇ ಮರೆತ್ತಿದ್ದಾರೆ. ಇನ್‌ಪೇಷೆಂಟಾಗಿ ಬೌರಿಂಗ್ ಆಸ್ಪತ್ರೆಯಲ್ಲಿದ್ದೂ ಅದರ ಬಗ್ಗೆ ಅವರು ಕಣ್ಣು ಹಾಕಲಿಲ್ಲವೋ ಅಲ್ಲಿ ಏನಾಗುತ್ತಿದೆಯೆಂದು ಗೊತ್ತಾಗಲಿಲ್ಲವೋ ಎಂದು ಕೇಳುತ್ತೇನೆ. ಹೋದ ತಿಂಗಳು ನಮ್ಮ ಸೋದರ ಮಾವನ ಮಗನನ್ನು ಬರ್ನ್ ವಾರ್ಡ್‌ಗೆ ಸೇರಿಸಿದೆ. ೨೭ ದಿವಸ ವಾರ್ಡ್‌ನಲ್ಲಿದ್ದ. ಅಲ್ಲಿ ಸೊಳ್ಳೆ ಪರದೆ ಕೂಡ ಕೊಡುವುದಿಲ್ಲ ಬೌರಿಂಗ್ ಆಸ್ಪತ್ರೆಯಲ್ಲಿ ಎಮರ್ಜೆನ್ಸಿ ವಾರ್ಡಿನಲ್ಲಿ ೨೭ ದಿವಸ ಇದ್ದು ಹುಳುಗಳು ಬಿದ್ದು ವಾಸನೆ ಹಿಡಿದು ಸತ್ತಿದ್ದಾನೆ. ಅಂಥ ಆಸ್ಪತ್ರೆಗಳನ್ನು ಇಟ್ಟುಕೊಂಡಿದ್ದಾರೆ. ಆಸ್ಪತ್ರೆಗಳ ಬಗ್ಗೆ ಹೇಳಬೇಕಾದರೆ ಅದು ನರಕ ಎಂದು ಬರೆದಿದ್ದಾರೆ. ಅದಕ್ಕಿಂತ ಇನ್ನೂ ಕೆಳಮಟ್ಟದಲ್ಲಿ ಹೋಗಬೇಕು ಎಂದರೆ ಬೌರಿಂಗ್ ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿಗೆ ಹೋಗಿ ನೋಡಿದರೆ ಕಾಣುತ್ತದೆ. ನಾನು ಅಲ್ಲಿಗೆ ಕಮಿಷನರವರನ್ನು ಕರೆದುಕೊಂಡು ಹೋಗಿ ತೋರಿಸಬೇಕು ಎಂದು ಇದ್ದೇನೆ. ಆದರೆ ಅವರು ಬರುವಾಗ ಅವರ ಉಡುಪಿನಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಬಂದು ಅಲ್ಲಿ ಸ್ವಲ್ಪ ನೋಡಿದರೆ ಗೊತ್ತಾಗುತ್ತದೆ.

ಒಂದು ಬ್ಲಡ್ ಬಾಟಲ್ ಕೊಡಬೇಕು ಎಂದರೆ ಅದರಲ್ಲಿ ಸೇರಿಸುವ ಔಷಧಿ ಒಂದೊಂದು ದಿವಸ, ಎರಡೆರಡು ದಿವಸ ಸಿಕ್ಕುವುದಿಲ್ಲ. ಅದಕ್ಕೆ ಕಾರಣಗಳನ್ನು ಕೇಳಿದರೆ ನಮಗೆ ಸಪ್ಲೈ ಆಗಿಲ್ಲವೆಂದು ಹೇಳುತ್ತಾರೆ. ಕಾಟನ್ ಸಿಕ್ಕುವುದಿಲ್ಲ. ಇಂಥ ಆಸ್ಪತ್ರೆಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ.

ಕಟ್ಟಡಗಳ ಬಗ್ಗೆ ಹೇಳುತ್ತ ದಾವಣಗೆರೆ; ಚಿತ್ರದುರ್ಗ, ಚಿಕ್ಕಮಗಳೂರು, ಮೈಸೂರು ಮತ್ತೆ ವಿಕ್ಟೋರಿಯಾ ಆಸ್ಪತ್ರೆ ಇವುಗಳ ಬಗ್ಗೆ ಬರೆದಿದ್ದಾರೆ. ಬೌರಿಂಗ್ ಆಸ್ಪತ್ರೆಯ ವಿಚಾರವಾಗಿ ಏನೂ ಹೇಳಿಲ್ಲ. ಅಲ್ಲಿ ಯಾವ ಹೊಸ ಕಟ್ಟಡಗಳೂ ಆಗಿಲ್ಲ ಏಕೆ ?

ಬೌರಿಂಗ್ ಆಸ್ಪತ್ರೆಯನ್ನು ಈ ರೀತಿ ಬಿಟ್ಟುಬಿಡುವುದಕ್ಕೆ ಕಾರಣವೇನು? ಅಲ್ಲಿ ಎಮರ್ಜೆನ್ಸಿ ವಾರ್ಡ್ ಎಂದು ಇದೆ; ಅಲ್ಲಿ ಸಾಕಷ್ಟು ಬೆಡ್‌ಗಳು ಇಲ್ಲದೆ ರೋಗಿಗಳನ್ನು ನೆಲದ ಮೇಲೆ ಮಲಗಿಸಿ ಸಾಯಿಸುತ್ತಿದ್ದಾರೆ. ನಮ್ಮ ಕನ್‌ಟೋನ್‌ಮೆಂಟ್‌ನಲ್ಲಿ ೩ ಆಸ್ಪತ್ರೆಗಳಿವೆ. ಸೆಂಟ್ ಫಿಲಿಮಿನಾ ಆಸ್ಪತ್ರೆ, ಸೆಂಟ್ ಮಾರ್ಥಾಸ್ ಆಸ್ಪತ್ರೆ ಮತ್ತು ಸೈಂಟ್ ಜಾನ್ಸ್ ಆಸ್ಪತ್ರೆ : ಇವುಗಳಿಗೆ ಹಣ ಇರುವವರು ಮಾತ್ರ ಹೋಗುತ್ತಾರೆ. ಬಡವರು ಇಲ್ಲಿಗೆ ಹೋಗಲು ಸಾಧ್ಯವಿಲ್ಲ ಅವರೇನಿದ್ದರೂ ಸರ್ಕಾರೀ ಆಸ್ಪತ್ರೆಗಳಿಗೆ ಬರಬೇಕು. ಇಲ್ಲಿಗೆ ಬಡವರು ಬಂದರೆ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಎಲ್ಲರಿಗೂ ಚೀಟಿ ಬರೆದು ಕೊಡುತ್ತಾರೆ ಅವರು ಹೊರಗಡೆ ಕೊಂಡು ಕೊಳ್ಳಬೇಕು. ಬಡವರಿಗೆ ಇದು ಸಾಧ್ಯವೇ ಸಮಾಜವಾದವನ್ನು ಜಾರಿಗೆ ತರಬೇಕೆಂದು ನಾವು ಹೊರಟಿರುವಾಗ ಈ ಆಸ್ಪತ್ರೆಗಳನ್ನು ನಾವು ಸ್ವಲ್ಪ ಸುಧಾರಣೆ ಮಾಡಬೇಕಾಗಿದೆ. ಅದೇ ರೀತಿ ಪೋಸ್ಟ್ ಗ್ರಾಜ್ಯುಯೇಟ್‌ಗಳನ್ನು ಮತ್ತು ಅಸಿಸ್ಟೆಂಟ್ ಪ್ರೊಫೆಸರ್ಸ್ ಏನಿದ್ದಾರೆ, ಅವರು ಸ್ಟಡಿ ಮಾಡಲು ಎಲ್ಲಿ ಅನುಕೂಲಗಳನ್ನು ಮಾಡಿಕೊಡಬೇಕು. ಈಗ ಅವರಿಗೆ ಸ್ಟಡಿ ಮಾಡಲು ಒಂದು ರೂಮ್ ಇಲ್ಲ. ಕುಳಿತುಕೊಂಡು ಓದುವುದಕ್ಕೆ ಮತ್ತು ಬರೆಯುವುದಕ್ಕೆ ಸರಿಯಾದ ಜಾಗವಿಲ್ಲ. ಅದಕ್ಕೆಲ್ಲಾ ಅವಕಾಶ ಮಾಡಿಕೊಡಬೇಕು. ಹಳೆಯ ಕಾಲದಲ್ಲಿ ಎಷ್ಟು ಜನ ನರ್ಸ್‌ಗಳು ಬೌರಿಂಗ್ ಆಸ್ಪತ್ರೆಯಲ್ಲಿದ್ದರೋ ಈಗಲೂ ಅಷ್ಟೇ ಜನರಿದ್ದಾರೆ. ಯಾವುದೋ ಕಾಲದ ಬೆಡ್ಸ್ ಮತ್ತು ಕಂಬಳಿಗಳಿವೆ. ಆ ಕಂಬಳಿಗಳನ್ನು ಹೊದ್ದುಕೊಂಡರೆ ಆಕಾಶದಲ್ಲಿರುವ ನಕ್ಷತ್ರಗಳೆಲ್ಲಾ ಕಾಣಿಸುತ್ತವೆ ಮೈಸೂರು, ಚಿತ್ರದುರ್ಗ, ದಾವಣಗೆರೆ ಇಲ್ಲಿರುವ ಆಸ್ಪತ್ರೆಗಳಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡುತ್ತಿರುವಾಗ ನಮ್ಮ ಬೌರಿಂಗ್ ಆಸ್ಪತ್ರೆಗೆ ಬೇಕಾದ ಅನುಕೂಲಗಳನ್ನು ಏತಕ್ಕೆ ಮಾಡಿಕೊಡುತ್ತಿಲ್ಲ. ಹೊಸ ವಾರ್ಡ್‌ಗಳನ್ನು ಕಟ್ಟಿಸಿಲ್ಲ ಹಾಸನದಲ್ಲಿ ಬರ್ನ್ ವಾರ್ಡ್ ಕಟ್ಟಿಸಿದ್ದಾರೆ. ವಿಕ್ಟೋರೀಯಾ ಆಸ್ಪತ್ರೆಯಲ್ಲಿ ಬರ್ನ್ ವಾರ್ಡ್ ಕಟ್ಟಿದ್ದಾರೆ. ಆದರೆ ನಮ್ಮ ಬೌರಿಂಗ್ ಆಸ್ಪತ್ರೆಯಲ್ಲಿ ಕಟ್ಟಿಸಿಲ್ಲ. ಈ ವಾರ್ಡ್ ಇಲ್ಲದ ಕಾರಣ ಅಲ್ಲಿ ನನ್ನ ಸ್ವಂತ ಸೋದರ ಮಾವನ ಮಗ ಹುಳು ಬಿದ್ದು ಸತ್ತು ಹೋದ ಮುಖ್ಯವಾಗಿ ಹೇಳುವುದಾದರೆ ಅಲ್ಲಿಗೆ ಬೇಕಾದ ಔಷದ ಮತ್ತು ಇತರೇ ಸಾಮಾನುಗಳನ್ನು ಒದಗಿಸುತ್ತಿಲ್ಲ. ಇದರಿಂದ ಡಾಕ್ಟರ್‌ಗಳು ಯಾವ ರೀತಿಯಿಂದ ಕೆಲಸ ಮಾಡಲು ಸಾಧ್ಯ ? ಮಾನ್ಯ ಮಂತ್ರಿಗಳು ಒಂದು ಸಲ ಬೌರಿಂಗ್ ಆಸ್ಪತ್ರೆಯನ್ನು ಮತ್ತು ಹಾಜಿ ಇಸ್ಮಾಯಿಲ್ ಘೋಷಾ ಆಸ್ಪತ್ರೆಗಳನ್ನು ನೋಡಬೇಕು. ಅಲ್ಲಿನ ಕಷ್ಟಗಳನ್ನು ಪರಿಹಾರ ಮಾಡಲು ಸಾಧ್ಯವಾಗದಿದ್ದರೆ ಶಿವನು ತನ್ನ ಮೂರನೇ ಕಣ್ಣನ್ನು ಬಿಟ್ಟು ಪ್ರಪಂಚವನ್ನು ನಾಶ ಮಾಡಿದಂತೆ ತಾವು ಸಹ ಇವುಗಳನ್ನು ನಾಶ ಮಾಡಿಬಿಡಿ ಈ ವಿಚಾರವನ್ನು ನಾನು ಬಹಳ ನೊಂದು ಹೇಳುತ್ತಿದ್ದೇನೆ. ನನ್ನ ಸ್ವಂತ ಜನರು ಅಲ್ಲಿ ಹುಳ ಬಿದ್ದು ಸತ್ತಿದ್ದಾರೆ. ಅದನ್ನು ನೆನಸಿ ಕೊಂಡರೆ ಕಣ್ಣೀರು ಬರುತ್ತದೆ. ತಮ್ಮ ಮನಸ್ಸಿಗೂ ನೋವಾಗಲೀ ಎಂದು ಈ ಮಾತನ್ನು ಹೇಳುತ್ತಿದ್ದೇನೆ

ಇನ್ನು ಸರ್ಕಾರದವರು ಕುಟುಂಬ ಯೋಜನೆಯ ಬಗ್ಗೆ ದೊಡ್ಡ ರೀತಿಯಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಈ ಯೋಜನೆಯ ಬಗ್ಗೆ ಪ್ರಚಾರ ಮಾಡುವವರು ದುಡ್ಡಿರುವವರ ಹತ್ತಿರ ಹೋಗಿ ಪ್ರಚಾರ ಮಾಡುತ್ತಾರೆಯೇ ಹೊರತು ಬಡವರ ಹತ್ತಿರ ಹೋಗಿ ಪ್ರಚಾರ ಮಾಡುತ್ತಿಲ್ಲ. ಇದರಿಂದ ಆ ಯೋಜನೆ ಯಶಸ್ವಿಯಾಗುತ್ತಿಲ್ಲ. ಕೆಲವರಿಗೆ ೧೨ ಜನ ಮಕ್ಕಳಿವೆ. ಇನ್ನೂ ೧೨ ಮಕ್ಕಳು ಹುಟ್ಟುವುದರಲ್ಲಿವೆ. ಅಂತಹವರ ಹತ್ತಿರ ಹೋಗಿ ಇದರ ಉಪಯೋಗವನ್ನು ತಿಳಿಸುತ್ತಿಲ್ಲ. ನಾವು ಬಡ್ಜೆಟ್‌ನಲ್ಲಿ ಇದಕ್ಕಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡುವುದರ ಬದಲು ಅದೇ ಹಣವನ್ನು ರಸ್ತೆಗಳನ್ನು ಹಾಳು ಮಾಡುವುದಕ್ಕೆ ಮಾಡುವುದು ಒಳ್ಳೆಯದು. ಏಕೆಂದರೆ, ಅಂತಹ ರಸ್ತೆಗಳ ಮೇಲೆ ಆಟೋರಿಕ್ಷಾದಲ್ಲಿ ಹೋದರೆ ಅಬಾರ್ಷನ್ ಆಗಿ ಬಿಡುತ್ತದೆ. ಮುಖ್ಯವಾಗಿ ಅಡ್ಮಿನಿಸ್ಟ್ರೇಷನ್ ಚೆನ್ನಾಗಿರಬೇಕು. ಅದನ್ನು ನೋಡಿಕೊಳ್ಳುವವರು ಗರಮ್ ಆಗಿರಬೇಕು. ಏನೋ ನಡೆದುಕೊಂಡು ಹೋಗಲಿ ಎಂದು ಕನಿಕರ ತೋರಿಸಿದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ. ಆಡಳಿತ ಚೆನ್ನಾಗಿ ನಡೆಯಬೇಕಾದರೆ ಒಳ್ಳೆಯ ಗರಮ್ ಆಗಿರುವವರು ಅದರಲ್ಲಿ ಇರಬೇಕು. ಈಗ ನಾಲ್ಕನೇ ದರ್ಜೆಯ ನೌಕರರಾದ ಸ್ವೀಪರ್ಸ್, ಆಯಾಗಳು ಇದ್ದಾರೆ, ಅವರುಗಳಿಗೆ ದುಡ್ಡು ಕೊಡದ ಹೊರತು ಹೆರಿಗೆಯಾದ ಹೆಂಗಸರನ್ನು ಬೆಡ್ ಮೇಲೆ ತೆಗೆದುಕೊಂಡು ಹೋಗಿ ಹಾಕುವುದಿಲ್ಲ. ಇದರಿಂದ ಅಲ್ಲಿ ಕೆಲಸ ಮಾಡುತ್ತಿರುವ ಒಳ್ಳೆಯ ಡಾಕ್ಟರ್‌ಗೂ ಬೆಲೆ ಬರುವುದಿಲ್ಲ.

ಉಪಾಧ್ಯಕ್ಷರು.—ತಮ್ಮ ಸಮಯ ಮುಗಿಯಿತು.

ಶ್ರೀ ಹಮೀದ್ ಷಾ.—ಸೆಲ್ಫ್ ಕ್ರಿಟಿಜಿಸಮ್ ಮಾಡಿಕೊಳ್ಳಬೇಕು ಎಂದು ಹೇಳುವವರಲ್ಲಿ ನಾನೂ ಸಹ ಒಬ್ಬ. ತಾವು ಸಮಯ ಇಲ್ಲ ಎನ್ನುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಂದರೆ ತಾವು ಮೋಹನ್ ಧಾರಿಯಾ ತರಹ ಸೆಲ್ಫ್ ಕ್ರಿಟಿಜಿಸಮ್ ಮಾಡುತ್ತಿದ್ದೀರಿ.

ಶ್ರೀ ಹಮೀದ್ ಷಾ.—ಕ್ರಿಟಿಜಿಸಮ್ ಮಾಡುವುದು ನಿಮ್ಮ ಕೆಲಸ, ಸೆಲ್ಫ್ ಕ್ರಿಟಿಜಿಸಮ್ ಮಾಡುವುದು ನಮ್ಮ ಕೆಲಸ. ಆದರೆ ತಾವು ಲೋಹಿಯಾ ಹೆಸರು ಹೇಳುತ್ತೀರಿ, ಜಯಪ್ರಕಾಶ ನಾರಾಯಣ್ ಅವರ ಜೊತೆಯಲ್ಲಿ ಹೋಗುತ್ತಿದ್ದೀರಿ. ಇಂದು ಲೋಹಿಯಾ ಇದ್ದಿದ್ದರೆ ಜಯಪ್ರಕಾಶ ನಾರಾಯಣ್ ಮುಂದೆ ಬರುತ್ತಿರಲಿಲ್ಲ. ಅವರು ಇಂದು ಇದ್ದಿದ್ದರೆ ಇನ್ನೂ ಮುಂದಕ್ಕೆ ಬರುತ್ತಿದ್ದರು. ಆ ಮನೆ ಕಟ್ಟಿದವನೇ ನಾನು.

ಶ್ರೀ ಕೋಣಂದೂರು ಲಿಂಗಪ್ಪ.—ಆ ಮನೆಗೆ ವಾಪಸ್ ಬನ್ನಿ ಎಂದು ನಾವು ನಿಮ್ಮನ್ನು ಕರೆಯುತ್ತಿದ್ದೇವೆ.

ಶ್ರೀ ಹಮೀದ್ ಷಾ.—ಬೇಕಾಗಿಲ್ಲ. ಇಲ್ಲಿದ್ದುಕೊಂಡೇ ಇನ್ನೂ ದೊಡ್ಡದಾಗಿ ಕಟ್ಟುತ್ತೇವೆ. ಜಯಪ್ರಕಾಶ್ ನಾರಾಯಣ್ ಎಂತಹ ಮನುಷ್ಯ ಎಂದರೆ, ರಣಭೂಮಿಯಲ್ಲಿ ಸಿಪಾಯಿಗಳನ್ನು ಬಿಟ್ಟು ಓಡಿ ಹೋದ ಜನರಲ್ ತರಹ. ಇಷ್ಟು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಟಿ. ಆರ್. ರಾಮಣ್ಣ (ಕೋಟೆ).—ಮಾನ್ಯ ಉಪಾಧ್ಯಕ್ಷರೇ, ಈ ವರ್ಷ ೩೦ ಕೋಟಿ ರೂಪಾಯಿ ಬೇಡಿಕೆಯನ್ನು ನಮ್ಮ ಮುಂದೆ ಮಾನ್ಯ ಆರೋಗ್ಯ ಮಂತ್ರಿಗಳು ಮಂಡಿಸಿದ್ದಾರೆ. ಆದರೆ, ಕಳೆದ ಸಾಲಿಗಿಂತ ೩-೪ ಕೋಟಿ ರೂಪಾಯಿ ಹೆಚ್ಚಾಗಿದ್ದರೂ ಕೂಡ ಔಷಧಿಗಳ ಬೆಲೆ ಹೆಚ್ಚಾಗಿದ್ದು, ಮತ್ತು ಆಹಾರ ಸಾಮಗ್ರಿಗಳ ಮತ್ತು ಬಟ್ಟೆಬರೆಗಳ ಬೆಲೆ ಹೆಚ್ಚಾಗಿರುವ ಈ ಸಂದರ್ಭದಲ್ಲಿ, ಹಾಗೂ ಇದರ ಜೊತೆಗೆ ಕೆಲಸಗಾರರಿಗೆ ಕೊಡುವ ಡಿ.ಎ. ಮತ್ತು ಸಂಬಳಗಳು ಹೆಚ್ಚಾಗಿರುವ ಈ ಕಾಲದಲ್ಲಿ ೩೦ ಕೋಟಿ ರೂಪಾಯಿಗಳಲ್ಲಿ ಹೆಚ್ಚು ಕೆಲಸವನ್ನು ಮತ್ತು ಹೆಚ್ಚು ಅನುಕೂಲವನ್ನು ನಾಗರೀಕರಿಗೆ ಒದಗಿಸುವುದು ಕಷ್ಟವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗ ಸರಕಾರದವರು ಇಲಾಖೆಯ ವರದಿಯನ್ನು ಒಪ್ಪಿಸುವಾಗ, ಅಚೀವ್‌ಮೆಂಟ್ಸ್ ಎಂದು ಕೊಟ್ಟಿದ್ದಾರೆ. ಇದರಲ್ಲಿ ಸಂತೋಷಪಡಬೇಕಾದ ಅಂಶ ಏನೆಂದರೆ ಅಚೀವ್‌ಮೆಂಟ್ಸ್ ಎಂದು ಒಂದು ಇಲಾಖೆಯಲ್ಲಾದರೂ ಕೊಡುವುದಕ್ಕೆ ಸಾಧ್ಯವಾಯಿತಲ್ಲಾ ಎನ್ನುವುದು. ಆದರೆ, ಈ ಅಚೀವ್‌ಮೆಂಟ್ಸ್ ಹೇಳಿರತಕ್ಕದರಲ್ಲಿ ಇರತಕ್ಕ ಕೊರತೆ ಏನು ಎಂದರೆ, ರಾಜ್ಯದ ಎಲ್ಲಾ ಭಾಗದಲ್ಲೂ ಒಂದೇ ರೀತಿ ನಡೆದುಕೊಂಡಿಲ್ಲ ; ಕೆಲವು ಕಡೆ ತಾರತಮ್ಯವಾಗಿದೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಅದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಪರಿಶೀಲನೆ

ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ನಾನು ಮೊದಲೇ ತಿಳಿಸಿದ ಹಾಗೆ, ಅನೇಕ ಕಡೆ ಎಕ್ಸ್‌ರೇ ಎಕ್ವಿಪ್‌ಮೆಂಟ ಗಳು ಸರಕಾರೀ ಆಸ್ಪತ್ರೆಯಲ್ಲಿ ಸರಿಯಾಗಿ ಇಲ್ಲದೆ, ಇವತ್ತಿನ ದಿವಸ ಜನಗಳು ಖಾಸಗೀ ಆಸ್ಪತ್ರೆಗಳಿಗೆ ಹೋಗಿ ಎಕ್ಸ್‌ರೇ ತೆಗೆಸಬೇಕಾಗಿ ಬಂದಿದೆ. ಕೆಲವು ಕಡೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಫಿಲ್ಮ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಕಾರ್ಯ ಕ್ರಮ ತೆಗೆದುಕೊಳ್ಳಬೇಕೆಂದು ಈ ಹಿಂದೆಯೇ ಹೇಳಿದ್ದೇನೆ ಆದುದರಿಂದ ಮಾನ್ಯ ಮಂತ್ರಿಗಳು ಇವರ ಬಗ್ಗೆ ತೆಗೆದುಕೊಂಡ ಕ್ರಮವನ್ನು ಹೇಳಿದರೆ ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಒಂದು ಶೋಚನೀಯ ವಿಚಾರ ಏನೆಂದರೆ, ಇವತ್ತಿನ ದಿವಸ ಅನೇಕ ವೈದ್ಯರಿಗೆ ರೋಗಿಗಿರುವ ಕಾಯಿಲೆ ಯಾವುದೇ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಿಂದೆ ಇದ್ದ ಅನೇಕ ಡಾಕ್ಟರುಗಳು ಇಂಥಾದ್ದೇ ಈ ಕಾಯಿಲೆ ಎಂದು ಕಂಡುಹಿಡಿಯುವಷ್ಟು ಪರಿಣತಿವುಳ್ಳವರಾಗಿದ್ದರು. ಇವತ್ತಿನ ದಿವಸ ಹೆಚ್ಚು ಹೆಚ್ಚು ಡಿಗ್ರಿಗಳನ್ನು ಪಡೆದಿದ್ದರೂ ಕೂಡ ಇದು ಇಂತಹ ಕಾಯಿಲೆ ಎಂದು ಕಂಡುಹಿಡಿಯುವುದಕ್ಕೆ ಆಗುತ್ತಿಲ್ಲ. ಅನೇಕ ರೋಗಿಗಳನ್ನು ಎಕ್ಸ್‌ಪೆರಿಮೆಂಟ್ ಮಾಡಿ ಕೆಡಕು ಮತ್ತು ತೊಂದರೆಗಳಿಗೆ ಅವರು ಈಡಾಗಿರುವುದನ್ನು ಮಾನ್ಯ ಮಂತ್ರಿಗಳು ಗಮನಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ ಮೊದಲಿನಿಂದಲೂ ಆಸ್ಪತ್ರೆಗಳಲ್ಲಿ ಒಂದು ದೂರಿದೆ. ಅದೇನೆಂದರೆ, ರೋಗಿಗೆ ಚಿಕಿತ್ಸೆ ಆಗಬೇಕಾದರೆ ಹೆಚ್ಚಿಗೆ ದುಡ್ಡು ಇರಬೇಕು ; ರಕ್ಷಣೆ ಇರಬೇಕು ಎಂದು. ಹಣ ಮತ್ತು ಪ್ರಭಾವ ಇವೆರಡೂ ಇಲ್ಲದೇ ಹೋದ ಪಕ್ಷದಲ್ಲಿ ರೋಗಿಗೆ ಸರಿಯಾದ ಚಿಕಿತ್ಸೆ ಸುಲಭವಾಗಿ ದೊರೆಯುವುದಿಲ್ಲ ಇದನ್ನು ಮಾನ್ಯ ಮಂತ್ರಿಗಳು ದೂರ ಮಾಡಬೇಕೆಂದು ಹೇಳುತ್ತೇನೆ. ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಬೊಂಬಾಯಿಗೆ ಹೋದಾಗ ಅಲ್ಲಿ ಒಂದು ಆಸ್ಪತ್ರೆಗೆ ನಾನು ಹೋಗಿದ್ದೆ. ಅಲ್ಲಿನ ಕಾರ್ಪೊರೇಷನ್ನಿನವರು ನಾಲ್ಕು ಆಸ್ಪತ್ರೆಗಳನ್ನೂ, ಐದು ಮೆಡಿಕಲ್ ಕಾಲೇಜುಗಳನ್ನೂ ನಡೆಸುತ್ತಿದ್ದಾರೆ. ಒಂದು ಕಡೆ ನಾನು ಚೆಕ್ ಅಪ್ ಮಾಡಿಸಿ, ಅಲ್ಲಿಂದ ಬರ ವಾಗ ಆ ಡಾಕ್ಟರಿಗೆ ಏನು ಕೊಡಬೇಕೆಂದು ಕೇಳಿದೆ. ಅದಕ್ಕೆ ಅವರು, ನನಗೆ ಸರಕಾರದವರು ದುಡ್ಡು ಕೊಡುತ್ತಾರೆ ; ನಾನು ಮೂರು ಕಾಸೂ ತೆಗೆದುಕೊಳ್ಳುವುದಕ್ಕೆ ನನಗೆ ಹಕ್ಕಿಲ್ಲ ಎಂದು ಹೇಳಿದರು ಅಂತಹ ಸೇವಾ ಮನೋಭಾವ ಇಟ್ಟುಕೊಂಡಿರತಕ್ಕ ಡಾಕ್ಟರ್ ಸಂಪಾದನೆ ಜೊತೆಗೆ ರೋಗಿಗಳು ಬಡವರಾಗಲೀ, ಯಾರೇ ಆಗಿರಲಿ, ಅವರಿಗೆ ಹೆಚ್ಚು ಸೌಲಭ್ಯಗಳು ದೊರಕಿಸಿಕೊಡಬೇಕೆಂಬುದನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಮುಖ್ಯವಾದ ವಿಚಾರವೇನೆಂದರೆ, ಮೆಡಿಕಲ್ ಕಾಲೇಜುಗಳ. ಅದರಲ್ಲೂ ನನಗೆ ತಿಳಿದಮಟ್ಟಿಗೆ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ತರಬೇತಿ ಆಗತಕ್ಕಂಥ ಡಾಕ್ಟರಿಗೆ ಎಂಟರ್ನಲ್ ವ್ಯಾಲ್ಯುಯೇಷನ್ ಅಥವಾ ಪೋಸ್ಟ್ ಗ್ರಾಜುಯೇಟ್‌ಗೆ ಸೀಟ್ ಕೊಡಬೇಕಾದುದು ಮತ್ತು ಮಾರ್ಕ್ಸ್ ಕೊಡುವ ಬಗ್ಗೆ ಬಹಳ ತಾರತಮ್ಯ ನಡೆಯುತ್ತಿದೆ ಫೇಲ್ ಆಗಿರತಕ್ಕ ಹುಡುಗಿ ಇದ್ದರೆ, ಹೆಚ್ಚು ಪ್ರೀಮಿಯಂ ಅಥವಾ ಜಾತಿ ಪ್ರಭಾವದಿಂದ, ಕೆಲವು ಕಡೆ ಮೇಲಿನಿಂದ ಶಿಫಾರಸು ಬಂದರೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಇದು ಬಹಳ ವ್ಯಸನಕರವಾದ ವಿಷಯ. ನಂಬತಕ್ಕ ಒಂದು ಕಡೆಯಿಂದ ಹೇಳಬೇಕೆ ದರೆ, ಒಬ್ಬ ಅಧಿಕಾರಿಯ ಮಗನಿಗೆ ಪಾಸು ಮಾಡಿಸುವುದಕ್ಕೋಸ್ಕರ ಅವನಿಗೆ ೩೦ ಮಾರ್ಕ್ಸ್ ಗ್ರೇಸ್ ಕೊಟ್ಟರು. ಹಾಗೂ ಎಲ್ಲರಿಗೂ ಆ ವರ್ಷ ೩೦ ಮಾರ್ಕ್ಸ್ ಗ್ರೇಸ್ ಕೊಟ್ಟು ಯಾರು ತೇರ್ಗಡೆ ಹೊಂದದೆ ಇರಲಿಲ್ಲ ಎಂದು ತಿಳಿದುಕೊಂಡಿದ್ದೇನೆ. ಮೆರಿಟ್ ಬಿಟ್ಟು ಬೇರೆ ಕಾರಣಗಳಿಂದ ಮೇಲಕ್ಕೆ ಎತ್ತುವ ಪರಿಸ್ಥಿತಿಯನ್ನು ಆದಷ್ಟು ಜಾಗ್ರತೆ ಕಮ್ಮಿ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಸದಸ್ಯರಾದ ಹಮೀದ್ ಷಾ ಅವರು ಸರಕಾರೀ ಆಸ್ಪತ್ರೆಗಳ ಬಗ್ಗೆ ಸಾಕಷ್ಟು ಟೀಕೆ ಮಾಡಿದರು. ವಿಕ್ಟೋರಿಯಾ ಆಸ್ಪತ್ರೆ ಈಗ ಹೊಸದಾಗಿ ಸೂಪರಿಂಟ್‌ಂಡೆಂಟ್ ಬಂದ ಮೇಲೆ ಹೆಚ್ಚಿನ ರೀತಿಯಲ್ಲಿ ಬದಲಾವಣೆಯಾಗಿದೆ. ದಕ್ಷರಾಗಿ, ನ್ಯಾಯವಾಗಿ ನಡೆದುಕೊಳ್ಳತಕ್ಕ ಡಾಕ್ಟರ್‌ಗಳನ್ನು ಆಸ್ಪತ್ರೆಗಳಿಗೆ ಮುಖ್ಯಸ್ಥರನ್ನಾಗಿ ಹಾಕಿದರೆ ಅದರ ವಾತಾವರಣ ಬದಲಾವಣೆಯಾಗುತ್ತದೆ ; ಇದಕ್ಕೆ ವಿಕ್ಟೋರಿಯ ಆಸ್ಪತ್ರೆ ಒಂದು ಉದಾಹರಣೆ ಎಂದು ತಿಳಿದುಕೊಂಡಿದ್ದೇನೆ ನಾನು ವಿಕ್ಟೋರಿಯ ಆಸ್ಪತ್ರೆಯ ವಿಜಿಟರ್ಸ್ ಬೋರ್ಡ್ ಸದಸ್ಯನಾಗಿದ್ದೇನೆ. ಸಾಧಾರಣವಾಗಿ ನಾನು ವಿಚಾರ ಮಾಡಿರುವುದರಲ್ಲಿ ಹೇಳುವಷ್ಟು ಉತ್ಪ್ರೇಕ್ಷೆ ಅಲ್ಲಿ ಇಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ನಾನು ಆರೋಗ್ಯ ಮಂತ್ರಿಗಳನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತೇನೆ ಬೋರಿಂಗ್ ಆಸ್ಪತ್ರೆಯಲ್ಲಿ ತಮ್ಮದೇ ಆದ ಪಂಗಡದ ಪುಡಾರಿಗಳ ವಿಜಿಟರ್ಸ್ ಬೋರ್ಡ್ ಬಗ್ಗೆ ದೂರು ಬಂದಾಗ, ವಿಜಿಟರ್ಸ್ ಬೋರ್ಡನ್ನೇ ರದ್ದು ಮಾಡಿದರು. ಸಾಧಾರಣವಾಗಿ ತಮ್ಮ ಪಕ್ಷದವರೇ ಇರುವ ಕಡೆ ಏನಾದರೂ ಆದರೆ ತೇಪೆ ಹಾಕಿ ಮುಚ್ಚುವ ಪರಿಸ್ಥಿ ಇದೆ. ಆದರೆ ಮಾನ್ಯ ಸಿದ್ಧವೀರಪ್ಪನವರು ಬೋರ್ಡನ್ನೇ ರದ್ದು ಮಾಡತಕ್ಕ ದೃಢ ನಿಲುವನ್ನು ತೋರಿಸಿದ್ದಾರೆ ; ಅದು ಮೆಚ್ಚತಕ್ಕದ್ದು. ಪ್ರಭಾವಗಳಿಗೆ, ಒತ್ತಡಗಳಿಗೆ, ಸಾಧಾರಣವಾಗಿ ಮಂತ್ರಿಗಳು ಒಲಿಯುತಕ್ಕದ್ದು. ಆದುದರಿಂದ, ನಿರ್ದಾಕ್ಷಿಣ್ಯವಾಗಿ, ಅರ್ಹತೆ ಮೇಲೆ ಮತ್ತು ರೋಗಿಗಳ ಕ್ಷೇಮವನ್ನು ಯಾರು ಹೆಚ್ಚಿಗೆ ರೀತಿಯಲ್ಲಿ ಗಮನಿಸುತ್ತಾರೋ ಅಂಥವರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಸಾಕಷ್ಟು ಗಮನ ಕೊಡುತ್ತಾರೆಂದು ಭಾವಿಸಿದ್ದೇನೆ

ಇನ್ನು ಬೆಂಗಳೂರು ನಗರದಲ್ಲಿ ಹಲಸೂರು ರಸ್ತೆಯಲ್ಲಿರುವ ಟಿ. ಬಿ. ಸ್ಯಾನಿಟೋರಿಯಂ ಆಸ್ಪತ್ರೆಯಲ್ಲಿ ಅಲ್ಲಿ ಹಾಸಿಗೆಗಳು ಸಿಕ್ಕತಕ್ಕದ್ದು ಬಹಳ ಕಷ್ಟ. ಅಲ್ಲಿಗೆ ಬರುವ ರೋಗಿಗಳು ಬಹುಪಾಲು ಸ್ಲಂ ಏರಿಯಾದವರು ಮತ್ತು ಬಡವರು. ಅವರಿಗೆ ಅಲ್ಲಿ ಸರಿಯಾದಂಥ ವ್ಯವಸ್ಥೆ ಇರುವುದಿಲ್ಲ. ಅವರು ಹಣನ್ನು ತೆಗೆದುಕೊಳ್ಳುವುದಕ್ಕೆ ಮೊದಲೇ ಅವರಿಗೆ ಸಾಧ್ಯವಿರುವುದಿಲ್ಲ. ಅವರು ವಾಸ ಮಾಡುವುದು ಸ್ಲಂನಲ್ಲಿರುವ ಗುಡಿಸಲುಗಳಲ್ಲಿ. ಅಂಥವರಿಗೆ ಅಲ್ಲಿ ಜಾಗ ಸಿಕ್ಕತಕ್ಕದ್ದು ಬಹಳ ಕಷ್ಟ. ಆದುದರಿಂದ ಟಿ.ಬಿ. ಆಸ್ಪತ್ರೆಯಲ್ಲಿ ಬೇರೆ ವ್ಯವಸ್ಥೆ ಮಾಡಬೇಕು ಅಥವಾ ಹಾಸಿಗೆಗಳನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ, ರಾಜ್ಯದ ಅನೇಕ ಭಾಗಗಳಿಂದ ಈ ಟಿ.ಬಿ. ಕಾಯಿಲೆ ವಾಸಿ ಮಾಡಿಕೊಳ್ಳುವುದಕ್ಕೆ ಬೆಂಗಳೂರಿಗೆ ಬರುತ್ತಾರೆ. ಅಂಥವರಿಗೆ ಅಲ್ಲಿ ಜಾಗ ಸಿಕ್ಕದಿದ್ದರೆ, ಕಾಯಿಲೆ ಗುಣವಾಗುವುದು ಹೇಗೆ? ಈ ಕೆಟ್ಟ ರೋಗವನ್ನು ತಡೆಗಟ್ಟುವುದಕ್ಕೋಸ್ಕರ ಬೆಂಗಳೂರು ಮತ್ತು ರಾಜ್ಯದ ಇತರ ಕಡೆಗಳಲ್ಲಿ ಈ ರೀತಿ ಆಸ್ಪತ್ರೆಗಳನ್ನು ಏರ್ಪಾಡು ಮಾಡುವುಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ವಿಕ್ಟೋರಿಯ ಆಸ್ಪತ್ರೆಯ ಔಟ್ ಪೇಷಂಟ್ ಬ್ಲಾಕ್‌ನಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಸಂತೆ ಇದ್ದ ಹಾಗೆ ಇರುತ್ತದೆ. ಅಲ್ಲಿಗೆ ಬರುವವರಲ್ಲಿ ಬಡವರೇ ಹೆಚ್ಚು ಜನ. ಮಾನ್ಯ ಮಂತ್ರಿಗಳು ಒಂದು ದಿನ ಬೆಳಗ್ಗೆ ಹೋಗಿ ಅಲ್ಲಿ ನೋಡಿದರೆ ಎಷ್ಟು ಅವ್ಯವಸ್ಥೆ ಇದೆ ಎಂಬುದು ಗೊತ್ತಾಗುತ್ತದೆ. ಅಲ್ಲಿನ ಜಾಗ ಕಿಷ್ಕಿಂಧವಾಗಿದ್ದು, ಆದರೆ ಬರತಕ್ಕ ರೋಗಿಗಳು ವಿಫುಲವಾಗಿದ್ದಾರೆ. ಆದುದರಿಂದ, ಇಂತಹ ಕಡೆ ಸ್ವಲ್ಪ ಬದಲಾವಣೆ ಮಾಡದೇ ಹೋದರೆ ಬಡವರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ಈಗ ಎಕ್ಸ್‌ಪ್ಯಾಂಡ್ ಮಾಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಬಡಾವಣೆಗಳಲ್ಲಿ ಕಟ್ಟುತ್ತಿದ್ದಾರೆ. ಅದು ಆದಮೇಲೆ ಎಲ್ಲಾ ಸರಿಹೋಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಅವರು ಹೆಚ್ಚು ಗಮನ ಕೊಟ್ಟರೆ ಒಳ್ಳೆಯದು. ಮಾನ್ಯ ಸಿದ್ಧವೀರಪ್ಪನವರು ಕೆಲವು ದಿನ ಕಾಯಿಲೆ ಬಂದ ಮೇಲೆ ಆಸ್ಪತ್ರೆಗೆ ಹೋಗಬಾರದು ಎಂದು ದಿಟ್ಟತನ ಇಟ್ಟುಕೊಂಡಿದ್ದರೂ ಅವರೂ ಕೂಡ ಆಸ್ಪತ್ರೆಗೆ ಹೋಗಬೇಕಾಗಿ ಬಂದಿತು. ನಿರ್ಧಾಕ್ಷಿಣ್ಯವಾಗಿ ಕೆಲಸ ಮಾಡತಕ್ಕ ಮಂತ್ರಿಗಳಿಗೆ ಆರೋಗ್ಯವನ್ನು ಹೆಚ್ಚು ಕೊಟ್ಟು, ಅವರಿಂದಲೂ, ಅವರ ಕೈ ಕೆಳಗೆ ಕೆಲಸ ಮಾಡುವ ಅಧಿಕಾರಿಗಳ ಸಹಾಯದಿಂದಲೂ ಅನೇಕ ರೋಗಿಗಳಿಗೆ ಇರತಕ್ಕ ಕಾಯಿಲೆ ನಿವಾರಣೆಯಾಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ ಅನೇಕ ರೀತಿಯಲ್ಲಿ ಹಣವನ್ನು ವ್ಯಯ ಮಾಡುತ್ತಾ ಇದ್ದಾರೆ, ಅದನ್ನು ತಪ್ಪಿಸಿ ವೈದ್ಯಕೀಯ ಸೌಲಭ್ಯವನ್ನು ಹೆಚ್ಚು ಹೆಚ್ಚಿಸಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ಈ ದಿವಸ ಆರೋಗ್ಯ ಸಚಿವರು ಆರೋಗ್ಯ ಖಾತೆಯ ಬೇಡಿಕೆಗಳನ್ನು ಮಂಡಿಸಿರತಕ್ಕದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಅನೇಕ ಸ್ನೇಹಿತರು ಆಸ್ಪತ್ರೆಗಳಲ್ಲಿ ಡಾಕ್ಟರು ಸರಿಯಾದ ರೀತಿಯಲ್ಲಿ ಜನಗಳಿಗೆ ಚಿಕಿತ್ಸೆ ನಡೆಸುತ್ತಿಲ್ಲ ಎನ್ನುವ ವಿಚಾರವನ್ನು ಈಗಾಗಲೆ ತಿಳಿಸಿದ್ದಾರೆ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಕಡೆ ಆಸ್ಪತ್ರೆಗಳಲ್ಲಿ ನಿಜವಾಗಿ ಡಾಕ್ಟರುಗಳು ಸರಿಯಾದ ರೀತಿಯಿಂದ ಮಾನವೀಯತೆಯ ದೃಷ್ಟಿಯಿಂದ ಸರಿಯಾಗಿ ಚಿಕಿತ್ಸೆ ಕೊಡುತ್ತಿಲ್ಲಾ. ಈಗ ಇದಕ್ಕೆ ಮಾನ್ಯ ಮಂತ್ರಿಗಳು ತಕ್ಕ ಗಮನಕೊಟ್ಟು ಸರಿಯಾದ ರೀತಿಯಲ್ಲಿ ಚಿಕಿತ್ಸೆ ದೊರೆಯತಕ್ಕ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಹಿಂದೆ ನಾನ್ ಪ್ರಾಕ್ಟೀಸ್ ಅಲೋಯನ್ಸ್ ಕೊಡುತ್ತಿದ್ದು ಈಗ ಅದನ್ನು ನಿಲ್ಲಿಸಿದ್ದಾರೆ. ಇಂತಹ ನಾನ್ ಪ್ರಾಕ್ಟೀಸ ಅಲೋಯನ್ಸ್ ಪ್ರೊವೈಡ್ ಮಾಡಿ ಡಾಕ್ಟರ್‌ಗಳಿಗೆ ಯಾವುದಾದರೂ ರೀತಿಯಲ್ಲಿ ಸರ್ಕಾರ ಆರ್ಡರ್ ಮಾಡಿಸಿ ಜನರಿಗೆ ಆಸ್ಪತ್ರೆಯಲ್ಲೇ ಚಿಕಿತ್ಸೆ ದೊರೆಯತಕ್ಕ ಏರ್ಪಾಟು ಮಾಡಬೇಕು ಎಂದು ಮನವಿಮಾಡಿಕೊಳ್ಳುತ್ತೇನೆ. ಈಗ ಡಾಕ್ಟರುಗಳು ರೋಗಿ ಬಂದರೆ ಸರ್ಕಾರದ ಖರ್ಚಿನಲ್ಲಿ ಆಸ್ಪತ್ರೆಯಲ್ಲಿ ಎಕ್ಸ್‌ರೇ, ರಕ್ತ ಪರೀಕ್ಷೆ ಇದರ ಬಗ್ಗೆ ಎಲ್ಲಾ ಪರೀಕ್ಷೆಗಳನ್ನು ಕೂಡ ಸರ್ಕಾರದ ಖರ್ಚನಲ್ಲೇ ಮಾಡಿ ನಂತರ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಫೀಸು ವಸೂಲು ಮಾಡುತ್ತಾರೆ. ಅಂಥಾದ್ದು ಗಮನಕ್ಕೆ ಬಂದಿದೆ. ಅದನ್ನು ತಪ್ಪಿಸಬೇಕು, ನಿಜವಾಗಿಯೂ ಕೂಡ ಅಂಥಾದ್ದನ್ನು ತಪ್ಪಿಸಬೇಕಾದ ಮಾನ್ಯ ಸಚಿವರು ಅದಕ್ಕೆ ಒಂದು ಸ್ಪೆಷಲ್ ಸ್ಕ್ವಾಡ್ ಏರ್ಪಾಡು ಮಾಡಿ ಅದರಿಂದ ಒಂದು ನಿರ್ಭಂಧ ಹಾಕಿ, ಅದರಲ್ಲಿ ಒಂದು ತಕ್ಕ ಏರ್ಪಾಡು ಮಾಡಿ ಒಂದು ಸರಿಯಾದ ಚಿಕಿತ್ಸೆ ನಡೆಯತಕ್ಕ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನೊಂದು ವಿಷಯ, ಔಷಧಿಗಳು ಸರಬರಾಜು ಸರಿಯಾಗಿ ಮಾಡುತ್ತಿಲ್ಲಾ, ಅದರ ಬಗ್ಗೆ ಸಾಕಷ್ಟು ಬಡ್ಜೆಟ್ಟಿನಲ್ಲಿ ಹಣ ಪ್ರವೈಡ್ ಮಾಡಬೇಕು, ಕೆಲವು ಆಸ್ಪತ್ರೆಯಲ್ಲಿ ೭,೫೦೦, ರೂಪಾಯಿ ೧೦,೦೦೦ ರೂಪಾಯಿ, ೧೫,೦೦೦ ರೂಪಾಯಿ, ಎಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಮಾಡಿದ್ದಾರೆ, ನನ್ನ ಕ್ಷೇತ್ರವಾದ ಹೊಸದುರ್ಗ ತಾಲೋಕಿನಲ್ಲಿ

ಹೇಳುವುನಾದರೆ ೩-೪ ವರ್ಷದಿಂದ ೧೯೭೧-೭೨ರಲ್ಲಿ ೭,೫೦೦ ರೂಪಾಯಿ ಔಷಧಿಗೆ ಕೊಡುವ ಅವಕಾಶ ಇದ್ದರು ಕೂಡ ಕೇವಲ ೫,೦೨೯ ರೂಪಾಯಿ ಔಷಧಿ ದೊರೆಯಿತು. ೧೯೭೨-೭೩ರಲ್ಲಿ ೪,೨೬೪ ರೂಪಾಯಿ ಔಷಧಿ ದೊರೆತಿದೆ, ೧೯೭೩-೭೪ರಲ್ಲಿ ೧೦,೦೦೦ ರೂಪಾಯಿ ಔಷಧಿಗೆ ಬದಲಾಗಿ ೬,೬೮೫ ರೂಪಾಯಿ ಔಷಧಿ ದೊರೆತಿದೆ, ೧೯೭೪-೭೫ರಲ್ಲಿ ೧೫ ಸಾವಿರ ರೂಪಾಯಿ ನಿಗದಿ ಇದ್ದರೂ ೫,೮೫೬ ರೂ. ಔಷಧಿ ಮಾತ್ರ ದೊರೆತು ೯,೧೪೪ ರೂಪಾಯಿ ಔಷಧಿ ಇದುವರೆಗೆ ಸಿಕ್ಕಿಲ್ಲ ಈ ತರಹ ನಡೆದಿದೆ. ಅಲ್ಲಿರತಕ್ಕ ಮೆಡಿಕಲ್ ಆಫೀಸರ್ ಒಂದು ನಿಯಮಿತ ಕಾಲದಲ್ಲಿ ಇಂಡೆಂಟ್ ಕಳುಹಿಸಿದರೂ ಕೂಡ ಇದುವರೆಗೆ ಗವರ್ನಮೆಂಟ್ ಮೆಡಿಕಲ್ ಸ್ಟೋರ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಔಷಧಿ ಕಳುಹಿಸದೆ ಜನರಿಗೆ ಬಹಳ ತೊಂದರೆಯಾಗಿದೆ ಕೊನೆಗೆ ಡಾಕ್ಟರು ಸ್ಲಿಪ್ ಕೊಟ್ಟು ಕಳುಹಿಸಿ ಎಷ್ಟೋ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಈ ಒಂದು ಸರಬರಾಜು ಮಾಡತಕ್ಕ ರೀತಿಯಲ್ಲಿ ಎಷ್ಟು ಹಣ ಅಲಾಟ್‌ಮೆಂಟ್ ಪ್ರಕಾರ ಆಗಿದೆಯೋ ಅಷ್ಟನ್ನು ಒದಗಿಸಿ ಆಸ್ಪತ್ರೆಗಳಿಗೆ ಸರಿಯಾಗಿ ದೊರಕುವಂತೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಆಸ್ಪತ್ರೆಯಲ್ಲಿ ಫ್ರೀ ಚಿಕಿತ್ಸೆ ನಡೆಸಲಿಕ್ಕೆ, ಒಂದು ಇನ್‌ಕಮ್ ನಿಗದಿಯಾಗಿದೆ. ೧೦೦ ರಿಂದ ೧೫೦ ರೂಪಾಯಿ ನಿಗದಿ ಇದೆ. ಇದು ಬಹಳ ಕಡಿಮೆ ಆಯಿತು. ಆಗಿನ ಕಾಲದಲ್ಲಿ ಒಬ್ಬ ಜವಾನನಿಗೆ ೨೦೦ ರೂಪಾಯಿ ಸಂಬಳ ಬರುವಾಗ, ಇವರು ಸಹ ಚಿಕಿತ್ಸೆ ಪಡೆಯಲು ಅವಕಾಶವಿಲ್ಲ, ಚಾರ್ಜ್ ಮಾಡುವುದು ಅನ್ಯಾಯ ಇದನ್ನು ಮಾನ್ಯ ಮಂತ್ರಿಗಳು ಅವರ ಒಂದು ಆದಾಯದ ಮಿತಿಯನ್ನು ೧೦೦ ರಿಂದ ೩೦೦ ರೂಪಾಯಿವರೆಗೆ ಇಟ್ಟು ಬಡವರಿಗೆ ಮುಫತ್ತಾಗಿ ದೊರಕುವಂತೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಳೆದ ಎರಡು ವರ್ಷದಿಂದ ಹೋಮಿಯೋಪಥಿಯ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಮಾನ್ಯ ಮಂತ್ರಿಗಳು ಕಳೆದ ಎರಡು ವರ್ಷಗಳ ಹಿಂದೆ ಸಾಕಷ್ಟು ಸರಿಯಾದ ಟೀಚಿಂಗ್ ಸ್ಟಾಫ್ ಇಲ್ಲದೆ ಕಾಲೇಜು ಆಗಿಲ್ಲವೆಂದು ತಿಳಿಸಿದ್ದರು, ಇಲ್ಲಿಯವರೆಗೂ ಗಮನ ತೆಗೆದುಕೊಂಡಿಲ್ಲ. ಈ ಬಗ್ಗೆ ಗಮನ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಜನರಿಗೆ ಚಿಕಿತ್ಸೆ ದೊರೆಯುವುದಕ್ಕೆ ಸಹಾಯ ಮಾಡುವಂತೆ ಹೇಳುತ್ತೇನೆ. ಈಗ ಪ್ರತಿಯೊಂದು ತಾಲ್ಲೋಕಿನಲ್ಲೂ ಕೂಡ, ಪ್ರತಿ ಜಿಲ್ಲೆಯಲ್ಲೂ ಕೂಡ ೧೦ ಹಾಸಿಗೆಯನ್ನು ಆಸ್ಪತ್ರೆಗೆ ಒದಗಿಸಿ ಒಬ್ಬ ಹೋಮಿಯೋಪಥಿಕ್ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಪ್ರತಿ ತಾಲ್ಲೋಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಕೂಡ ಜನರಲ್ ಆಸ್ಪತ್ರೆ ಮಂಜೂರು ಮಾಡಿ ಎ.ಎಂ.ಡಿ.ಎಂ.ಎಸ್. ಡಾಕ್ಟರ್ ನೇಮಕ ಮಾಡಿ, ಈಗ ಬೆಂಗಳೂರಿನಲ್ಲಿ ಏನು ಇನ್‌ವೆಸ್ಟಿಗೇಷನ್ ಮಾಡುತ್ತಾರೆ ಅದೇ ರೀತಿ ಎಲ್ಲಾ ಹೆಡ್‌ಕ್ವಾರ್ಟರ್ಸ್‌ನಲ್ಲೂ ಕೂಡ ಜನರಲ್ ಆಸ್ಪತ್ರೆ ಮಾಡಿ. ನಮ್ಮ ಹೊಸದುರ್ಗ ತಾಲ್ಲೋಕಿನಲ್ಲಿ ಕಳೆದ ೨೦ ವರ್ಷದಿಂದ ಜನರಲ್ ಆಸ್ಪತ್ರೆ ಮಂಜೂರು ಮಾಡಬೇಕೆಂದು ಕೇಳಿದರು ಇದುವರೆಗೆ ಮಾಡಿಲ್ಲ, ಇದರ ಬಗ್ಗೆ ಗಮನ ಹರಿಸಬೇಕು, ನಮ್ಮ ತಾಲ್ಲೂಕು ಮಟ್ಟಗಳಲ್ಲಿ ಬಹಳ ಬಡವರು ಇರುತ್ತಾರೆ ಅವರು ದೂರ ಹೋಗಿ ಚಿಕಿತ್ಸೆ ಪಡೆಯುವುದಕ್ಕೆ ಆಗುವುದಿಲ್ಲ, ಆದ್ದರಿಂದ ಜನರಲ್ ಆಸ್ಪತ್ರೆ ಮಂಜೂರು ಮಾಡಬೇಕು. ಮತ್ತೆ ಅಲ್ಲಿ ಒಂದು ಡೆಂಟಲ್ ಯೂನಿಟ್ ಕೂಡ ಮಾಡಿಕೊಡಬೇಕು. ಈಗ ಮೂರು ವರ್ಷದಿಂದಲೂ ಜನರಲ್ ಆಸ್ಪತ್ರೆ ಬಗ್ಗೆ ಪ್ರಾರ್ಥನೆ ಮಾಡಿದ್ದರೂ, ಇದುವರೆಗೂ ಆಗಿಲ್ಲ, ದಯಮಾಡಿ ಬೇಗ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಎಕ್ಸ್‌ರೇ ಎಕ್ವಿಪಮೆಂಟ್ ಸರಿಯಾಗಿಲ್ಲದೆ ಕಾರ್ಯಾರಂಭ ನಿಂತು ಹೋಗಿದೆ, ಅದನ್ನು ಬೇಗ ತರಿಸಿಕೊಟ್ಟು ಜನರಿಗೆ ಸಹಾಯ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಂತರ ಈಗ ನಮ್ಮ ತಾಲ್ಲೋಕಿನಲ್ಲಿ ಮಲೇರಿಯಾ ಬಹಳ ಹೆಚ್ಚಾಗಿ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಆದರೆ ಹಿಂದೆ ನ್ಯಾಷನಲ್ ಮಲೇರಿಯಾ ಇರ್ರ್ಯಾಡಿಕೇಷನ್ ಸ್ಕೀಮ್ ಮೂಲಕ ಡಿ.ಡಿ.ಟಿ. ಸ್ಪ್ರೇ ಮಾಡುತ್ತಿದ್ದರು, ಅದು ಈಗ ನಿಂತು ಹೋಗಿದೆ ದಯವಿಟ್ಟು ರೋಗ ತಡೆಗಟ್ಟಲು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿ ಪ್ರಾರ್ಥನೆ. ನಮ್ಮ ತಾಲೋಕಿನಲ್ಲಿ ಶ್ರೀರಾಂಪುರ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದು ಹೆರಿಗೆ ಆಸ್ಪತ್ರೆ ಇಲ್ಲ. ಅಲ್ಲಿ ೫೦-೬೦ ಸಾವಿರ ಜನಸಂಖ್ಯೆಗೆ, ಅನುಕೂಲವಾಗತಕ್ಕ ಬೇಡಿಕೆಯಾಗಿದೆ ಸ್ಥಳ. ಮಾನ್ಯ ಮಂತ್ರಿಗಳು ಆದೇಶ ಕಳುಹಿಸಿದಂತೆ ಕಾಂಟ್ರಿಬ್ಯೂಷನ್ ಕೊಟ್ಟಿದ್ದರೂ ಕೂಡ ಹೆರಿಗೆ ಆಸ್ಪತ್ರೆ ಮಂಜೂರು ಆಗಿಲ್ಲ ಅದನ್ನು ತಕ್ಷಣ ಮಾಡಿಕೊಡಬೇಕು ಎಂದು ಪ್ರಾರ್ಥಿಸುತ್ತೇನೆ. ಮತ್ತೆ ಮುಗುದಕೆರೆ, ಬಾಗೂರು, ಬಲ್ಲಾಳ ಸಮುದ್ರ ಮುಂತಾದ ಹಿಂದುಳಿದ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡಿ ಕೊಡಬೇಕು ಎಂದು ಹೇಳಿ ಇಷ್ಟು ಕಾಲ ಮಾನ್ಯ ಅಧ್ಯಕ್ಷರು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ಮಾನ್ಯ ಮಂತ್ರಿಗಳು ಒಂದು ವರದಿಯನ್ನು ಕೂಡ ನಮಗೆ ಸಲ್ಲಿಸಿ, ಈ ಇಲಾಖೆಯ ವರದಿಯನ್ನು ಕೊಟ್ಟಿದ್ದಾರೆ. ಈ ಇಲಾಖೆಯ ವರದಿಯನ್ನು ಓದಿದರೆ ನಮಗೆ ನಮ್ಮ ರಾಜ

ದಲ್ಲಿ ಬಹುಮಟ್ಟಿಗೆ ವೈದ್ಯಕೀಯಶಾಲಾಖೆಯಲ್ಲಿ ಮುಂದುವರೆದಿದ್ದೇವೆ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಬರೆದಿದ್ದಾರೆ, ಆದರೆ ನನಗಾದರೂ ಕಂಡುಬರುತ್ತದೆ. ಈ ರೀತಿ ಅಭಿಪ್ರಾಯ ಬರುವುದಕ್ಕೆ ಸಾಕಷ್ಟು ಅಂಕಿ ಅಂಶ ಇಟ್ಟಿದ್ದರೆ ನಾನು ಆ ರೀತಿ ಅಭಿಪ್ರಾಯಕ್ಕೆ ಬರುತ್ತಿದ್ದೆ. ಆದರೆ ಮಾನ್ಯ ಸಿದ್ಧವೀರಪ್ಪ ನವರು ಬಹಳ ದಿಟ್ಟತನದ ನಿಲುವನ್ನು ತಾಳುವಂತಹವರು ಎಂದು ಜನರಿಗೆ ಗೊತ್ತಿದೆ. ಆ ರೀತಿ ಅವರು ಮಾಡುತ್ತಾರೆ ಎಂದು ಅನಿಸಿತ್ತು. ಆದರೆ ಅಂಕಿ ಅಂಶ ನೋಡಿದರೆ ನಮ್ಮ ರಾಜ್ಯದಲ್ಲಿ ನಾವು ಏನು ಮಾಡ ಬೇಕು ನಮ್ಮ ಗುರಿ ಏನು, ಇದನ್ನು ನೆರೆರಾಜ್ಯಗಳಿಗೆ ಹೋಲಿಸಿನೋಡಿದರೆ ನಾವು ಹಿಂದುಳಿದಿದ್ದೇವೆ. ಕೆಲವು ಅಂಕಿ ಅಂಶಗಳನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು, ನಾನು ತಮ್ಮ ಗಮನಕ್ಕೆ ತೃಪ್ತಿಕರ ವಾಗುವಂಥ ಅಂಕಿ ಅಂಶಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಈಗ ೧೯೨ ಆಸ್ಪತ್ರೆಗಳು ಇವೆ, ೨೪,೩೬೩ ಹಾಸಿಗೆಗಳು ಇವೆ ಎಂದು ಹೇಳಿದರು. ಅದರಲ್ಲಿ ೧,೬೧೮ ಹಾಸಿಗೆಗಳು ಗ್ರಾಮಾಂತರ ಪ್ರದೇಶಕ್ಕೆ. ಇದು ಒಂದೇ ಸಾಕು ಇದನ್ನು ನೋಡಿದರೆ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಗಮನ ಕೊಟ್ಟಿಲ್ಲ ಎನ್ನುವುದು ಬಹಳ ಸ್ಪಷ್ಟವಾಗಿದೆ ಎನ್ನುವುದು ಗೊತ್ತಾಗುತ್ತದೆ. ಈಗ ನಾನು ಹೇಳಿದ್ದು ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶ.

ಇನ್ನು ಡಿಸ್ಪೆನ್ಸರಿಗಳನ್ನು ತೆಗೆದುಕೊಂಡರೆ, ೧,೮೦ ಡಿಸ್ಪೆನ್ಸರಿಗಳಿಗೆ ೪೧೭೬ ಹಾಸಿಗೆಗಳು ಇವೆ. ಗ್ರಾಮಗಳಲ್ಲಿ ೧೩೩ ಡಿಸ್ಪೆನ್ಸರಿಗಳಿಗೆ ೨೩೮೫ ಹಾಸಿಗೆಗಳಿವೆ. ಗ್ರಾಮಗಳಲ್ಲಿ ಡಿಸ್ಪೆನ್ಸರಿಗಳನ್ನು ಕೊಟ್ಟಿದ್ದೀರಿ ಆಸ್ಪತ್ರೆಗಳನ್ನು ಮಾತ್ರ ಕೊಡುವುದಕ್ಕೆ ತಯಾರಾಗಿಲ್ಲ, ಕೊಟ್ಟಿಲ್ಲ. ಬೋರ್ ಕಮಿಟಿ ಶಿಫಾರಸ್ ಪ್ರಕಾರ ಒಂದು ಲಕ್ಷ ಜನಕ್ಕೆ ೨೫೦ ಬೆಡ್‌ಗಳು ಇರಬೇಕು ಎಂದು ಹೇಳಿದ್ದಾರೆ. ಆದರೆ ಈಗ ಇರುವುದು ಒಂದು ಲಕ್ಷ ಜನಕ್ಕೆ ೧೨ ಬೆಡ್‌ಗಳು ಮಾತ್ರ. ಆದರೆ ಕಾಲೇಜುಗಳಲ್ಲಿ ಇದಕ್ಕಿಂತ ಕಡಿಮೆ ಇವೆ. ಸ್ಟೇಟ್ ಆವರೇಜ್ ತೆಗೆದುಕೊಂಡರೆ ೯೭ ಹಾಸಿಗೆಗಳು ಬರುತ್ತದೆ, ಆದರೆ ಕಾಲೇಜಿನಲ್ಲಿ ಇದಕ್ಕಿಂತ ಕಡಿಮೆ ಇದೆ. ಇದರ ಬಗ್ಗೆ ಕರ್ನಾಟಕ ಪಬ್ಲಿಕೇಷನ್ 'ಪ್ರಗತಿಪಥ' ಎಂಬ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಡಾಕ್ಟರ್ ಪಾಪುಲೇಷನ್ ರೇಷಿಯೊ ತೆಗೆದುಕೊಂಡರೆ, ಪ್ಲಾನಿಂಗ್ ಕಮಿಷನ್ ರೆಕಮೆಂಡೇಷನ್ ಪ್ರಕಾರ ಒಬ್ಬ ಡಾಕ್ಟರ್‌ಗೆ ೩೫೦೦ ಜನ ಇರಬೇಕು ಎಂದು ಹೇಳಿದ್ದಾರೆ. ಆಲ್ ಇಂಡಿಯಾ ಆವರೇಜ್ ತೆಗೆದುಕೊಂಡರೆ, ಒಬ್ಬ ಡಾಕ್ಟರ್‌ಗೆ ೬೫೦೦ ಜನ ಬರುತ್ತಾರೆ. ಕರ್ನಾಟಕದಲ್ಲಿ ತೆಗೆದುಕೊಂಡರೆ, ಒಬ್ಬ ಡಾಕ್ಟರ್‌ಗೆ ೬೩೦೦ ಜನ ಬರುತ್ತಾರೆ. ಇದರಿಂದ ಡಾಕ್ಟರ್ ಎಷ್ಟು ಗಮನಕೊಟ್ಟು ರೋಗಿಗಳನ್ನು ಚಿಕಿತ್ಸೆ ಮಾಡುವುದಕ್ಕೆ ಅವಕಾಶ ಇರಬಹುದು ಎಂದು ಕಲ್ಪನೆ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತಾ ಇಲ್ಲ. ಆದುದರಿಂದ ಆಲ್ ಇಂಡಿಯಾ ರೆಕಮೆಂಡೇಷನ್, ಪ್ಲಾನಿಂಗ್ ಕಮಿಷನ್ ರೆಕಮೆಂಡೇಷನ್‌ನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಬೆಡ್ ಪಾಪುಲೇಷನ್ ರೇಷಿಯೋ ರೂರಲ್ ಏರಿಯಾದು ತೆಗೆದುಕೊಂಡರೆ, ನಾನು ಇದನ್ನು ಸ್ಟಡಿ ಮಾಡಿದ್ದೇನೆ. ರೂರಲ್ ಏರಿಯಾದಲ್ಲಿ ಒಬ್ಬ ಡಾಕ್ಟರ್‌ಗೆ ೫೦೦೦ ಆಗುತ್ತದೆ. ಅರ್ಬನ್ ಏರಿಯಾನಲ್ಲಿ ತೆಗೆದುಕೊಂಡರೆ ಒಂದಕ್ಕೆ ೧೩೦೦ ಆಗುತ್ತದೆ. ಇದು ಹೋಗಬೇಕು ತಾವು ಹಿಂದಿನವರ್ಷ ಮಾಡಿದಂಥ ಭಾಷಣದಲ್ಲಿ ಹೇಳಿದ್ದೀರಿ.

SRI H. SIDDAVEERAPPA.—I have made an earnes. effort.

ಶ್ರೀ ಎಂ.ಎಸ್. ಕೃಷ್ಣನ್.—ಅಲ್ಲಿಗೆ ಬರುತ್ತೇನೆ. ಇದನ್ನು ತಾವು ಮಾಡಿದ್ದರೆ ಇಲ್ಲಿ ಮುದ್ರಿತ ವಾಗಬೇಕಾಗಿತ್ತು. ಇದರಲ್ಲಿ ತಾವು ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದೀರಿ. ಸ್ಟೇಟ್‌ಮೆಂಟ್–೧, ಸ್ಟೇಟ್ ಮೆಂಟ್–೨, ಸ್ಟೇಟ್‌ಮೆಂಟ್–೩ ಕೊಟ್ಟಿದ್ದೀರಿ. ಇದನ್ನು ನೋಡಿದರೆ ಆ ತರಹ ಅಭಿಪ್ರಾಯ ಬರುವುದಕ್ಕೆ ಕಷ್ಟವಾಗುತ್ತದೆ. ಆಸ್ಪತ್ರೆಗಳನ್ನು ತೆಗೆದುಕೊಂಡರೆ ೧೯೩ ಅಷ್ಟೇ ಇದೆ ಏನೂ ಜಾಸ್ತಿಯಾಗಿಲ್ಲ. ಇನ್ನು ಪ್ರೈಮರಿ ಹೆಲ್ತ್ ಸೆಂಟರ್ಸ್ ತೆಗೆದುಕೊಂಡರೆ, ಒಂದೇ ಒಂದು ಜಾಸ್ತಿಯಾಗಿದೆ. ಮೆಡಿಕಲ್ ಸಬ್ ಸೆಂಟರ್ಸ್ ೧೫ ಮಾತ್ರ ಜಾಸ್ತಿಯಾಗಿವೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಎಚ್.ಯು.ಟಿ.ಡಿ. ೯೯ ಆಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಇದರಲ್ಲಿ ೮೫ ಮಾಡಿದರಿ, ಮೆಡಿಕಲ್ ಸಬ್‌ಸೆಂಟರ್ಸ್, ಹೆಲ್ತ್ ಸೆಂಟರ್ಸ್ ಕರ್ನಾಟಕ ಜಿ.ಓ.ಐ. ಟೈಪ್ ಎಂದು ಕಾಣುತ್ತದೆ. ಅದರ ಅಡಿಯಲ್ಲಿ ಬರುವಂಥ ಸಬ್ ಸೆಂಟರ್ಸ್ ಇವೆ. ಒಂದು ರೂಮು, ಒಂದು ಕೋಣೆ ಇರುತ್ತದೆ, ಅವರಲ್ಲಿ ಯಾರೋ ಒಬ್ಬರನ್ನು ಕೂಡಿಸುತ್ತಾರೆ. ಹೆಲ್ ಸೆಂಟರ್ ಮಾಡಿದ ಮೇಲೆ ಮೆಡಿಕಲ್ ಸಬ್ ಸೆಂಟರ್ ಬಂದೇ ಬರಬೇಕು. ಆಗ ರಿಯಲ್ ಪ್ರೋಗ್ರೆಸ್ ತೋರಿಸುತ್ತೆ. ಅದಕ್ಕೆ ಎಕ್ಸ್‌ಪ್ಲನೇಷನ್ ಕೊಡಬೇಕು.

ಆಮೇಲೆ ಎಂಪ್ಲಾಯಿಸ್ ಸ್ಟೇಟ್ ಇನ್‌ಷೂರೆನ್ಸ್ ಡಿಸ್ಪೆನ್ಸರೀಸ್ ಎರಡು ಮಾಡಿದ್ದೀರಿ; ಮತ್ತೆ ಜಾಸ್ತಿಯಾಗಿಲ್ಲ ತಮ್ಮ ಸ್ಟೇಟ್‌ಮೆಂಟ್ ಪ್ರಕಾರ ಜಾಸ್ತಿಯಾಗಿದೆಯೆಂದು ಹೇಳಿದ್ದೀರಿ. ೧೯೭೪-೭೫ ರಲ್ಲಿ ಜಾಸ್ತಿಯಾಗುತ್ತದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಆಮೇಲೆ ಕ್ಲಿನಿಕ್ಸ್ ಅಂಡ್ ಅದರ್ ಯೂನಿಟ್ಸ್ ೫ ಹೆಚ್.ಟಿ ಟಿ.ಸಿ ಎಂದು ಹೇಳಿದ್ದೀರಿ. ಆಮೇಲೆ ವಿ.ಡಿ. ಕಂಟ್ರೋಲ್ ಸೆಂಟರ್ಸ್, ಸರ್ವಿಸ್ ಕ್ಲಿನಿಕ್ಸ್, ಸ್ಟೆಕೇಟಿಕ್ ಬ್ಲಡ್ ಬ್ಯಾಂಕ್ಸ್ ಯಾವುದರಲ್ಲೂ ಏನೂ ಜಾಸ್ತಿಯಾಗಿಲ್ಲ ಎಂದು ಇದರಿಂದ ಗೊತ್ತಾಗುತ್ತದೆ, ಒಂದು ತೀರ್ಮಾನಕ್ಕೆ ಬರಬೇಕಾದರೆ ನಿಮ್ಮ ಪುಸ್ತಕದ ಎಲ್ಲಾ ಅಂಕಿ ಅಂಶಗಳ ಆಧಾರದ ಪ್ರಕಾರ ಬರುವುದಕ್ಕೆ ಸಾಧ್ಯವಾಗಿಲ್ಲ. ಆ ಮೇಲೆ ಹಣ ಕೊಟ್ಟಿಲ್ಲ ಎಂದು ತಾವು ಹೇಳಿದಿರಿ. ನಮ್ಮ ರಾಜ್ಯದ ಹಾಗೆ ಬೇರೆ ರಾಜ್ಯಗಳೂ ಇವೆ ಬೇರೆ ರಾಜ್ಯಗಳಲ್ಲಿ ಇಷ್ಟೇ ಪಾಪುಲೇಷನ್ ಇದ್ದು, ನಮಗಿಂತ ವರಮಾನ ಕಡಿಮೆ ಇದ್ದು ನಮಗಿಂತ ಆರೋಗ್ಯಕ್ಕೋಸ್ಕರ ಜಾಸ್ತಿ ಖರ್ಚುಮಾಡಿದ್ದರೆ ನಾವು ಏಕೆ ಖರ್ಚು ಮಾಡಬಾರದು ಎಂದು ನಾನು ಹೇಳುತ್ತೇನೆ. ಪರ್ ಕ್ಯಾಪಿಟ ಎಕ್ಸ್‌ಪೆಂಡಿಚರ್ ಆಫ್ ಎಜುಕೇಷನ್ ಮತ್ತು ಪಬ್ಲಿಕ್ ಹೆಲ್ತ್‌ನದು ಒಂದು ಪಟ್ಟಿ ಕೊಟ್ಟಿದ್ದಾರೆ ಅದು ೧೯೭೪-೭೫ ರಲ್ಲಿ ಪಬ್ಲಿಷ್ ಆಗಿದೆ. ಅದರಲ್ಲಿ ಎಲ್ಲಾ ರಾಜ್ಯಗಳದ್ದೂ ಇದೆ ೧೯೭೨-೭೩ರಲ್ಲಿ ಗುಜರಾತಿನಲ್ಲಿ ೮.೯, ಹರಿಯಾಣ ೦.೧, ಜಮ್ಮು ಮತ್ತು ಕಾಶ್ಮೀರ ೧೩.೬, ಕೇರಳ ೬.೭. ಕರ್ನಾಟಕ ೬.೭ ಪಂಜಾಬ್ ೯, ರಾಜಾಸ್ಥಾನ, ತಮಿಳುನಾಡು ೮.೯, ವೆಸ್ಟ್ ಬೆಂಗಾಲ್ ೭.೧ ಇದೆ ಆಲ್ ಇಂಡಿಯಾ ಆವರೇಜ್ ೭.೯ ಇದೆ. ನಮ್ಮದು ಕರ್ನಾಟಕದ್ದು ತೆಗೆದುಕೊಂಡರೆ ೬.೩ ಇದೆ. ಆಲ್ ಇಂಡಿಯಾ ಆವರೇಜ್ ತೆಗೆದುಕೊಂಡರೂ ಕೂಡ ನಮ್ಮದು ಕಡಿಮೆ. ಪ್ರಗತಿಯನ್ನು ಬಹಳ ದೊಡ್ಡದಾಗಿ ಸಾಧಿಸುತ್ತೇವೆ ಎಂದು ತಾವು ಹೇಳಿದರೆ ಬಹಳ ಕಷ್ಟವಾಗುತ್ತದೆ ಎಂದು ನಾನು ಹೇಳುತ್ತೇನೆ.

ಆ ಮೇಲೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಬಗ್ಗೆ ಹೇಳಿದ್ದೀರಿ, ನಿಮ್ಮ ಅಭಿಪ್ರಾಯವೇನೆಂದರೆ ಕಂಟ್ರೋಲ್ ಮಾಡಬೇಕು ಎಂದು. ಆದರೆ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಣಿಪಾಲ್ ಕಾಲೇಜಿನಲ್ಲಿ ಏನಾಗಿದೆ ಎನ್ನುವುದು ತಮಗೇ ಗೊತ್ತು. ನಿಮ್ಮ ಆರ್ಡರನ್ನು ಕೂಡ ಅವರು ವೈಯಲೇಟ್ ಮಾಡುತ್ತಿದ್ದಾರೆ. ಅಲ್ಲಿ ೧ ಲಕ್ಷ ರೂಪಾಯಿ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ ಅಲ್ಲಿ ಬರೀ ಕಾಲೇಜು ಇದೆ, ಆಸ್ಪತ್ರೆ ಇರುವುದು ಮಂಗಳೂರಿನಲ್ಲಿ ಸರ್ಕಾರ ಅನುಕೂಲ ಮಾಡಿಕೊಟ್ಟಿದ್ದರೂ ಕೂಡ ಸರ್ಕಾರ ಹೇಳಿದಂಥ ಮಾತು ಕೇಳುವುದಿಲ್ಲ. ರಮೇಶ್ ಪೈ, ಟಿ.ಎ ಪೈ ಮುಂತಾದವರು ನಿಮ್ಮ ಮಾತನ್ನು ಉಲ್ಲಂಘನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಮಣಿಪಾಲ್‌ದು ಒಂದೇ ಏಕೆ ಹೇಳುತ್ತೀರಿ ಎಲ್ಲವೂ ಹಾಗೇ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಅದರಲ್ಲಿ ಇಬ್ಬರು ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ಗೆ ತೆಗೆದುಕೊಳ್ಳಬೇಕು ಎಂದು ಮಾಡಿದಂಥ ಆರ್ಡರ್ ಏನಾಗಿದೆಯೆಂದು ತಮಗೇಗೊತ್ತಿದೆ, ಮತ್ತು ಆ ವಿದ್ಯಾರ್ಥಿಗಳ ಹೆಸರೂ ಕೂಡ ತಮಗೆ ಗೊತ್ತಿದೆ. ಇದರ ಬಗ್ಗೆ ಏನಾಗಿದೆಯೆಂದು ಮತ್ತು ಈ ವಿಷಯದಲ್ಲಿ ಅವರು ಎಷ್ಟು ದೂರ ಹೋಗಿದ್ದಾರೆ ಎಂದು ಅರ್ಥವಾಗುತ್ತದೆ. You must take away all the private medical colleges.

ಆಮೇಲೆ ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಇವತ್ತಿನ ದಿವಸ ನ್ಯೂರೋಲಜಿ, ಪ್ಲಾಸ್ಟಿಕ್ ಸರ್ಜರಿ ಇವೆಲ್ಲಾ ಇವೆ. ನಮ್ಮ ಸೂಚನೆ ಏನೆಂದರೆ, ೩೦ ಲಕ್ಷ ಪಾಪುಲೇಷನ್‌ಗೆ ಒಂದು ಮೈನ್ ಆಸ್ಪತ್ರೆ ಇಟ್ಟುಕೊಂಡರೆ, ಬೇರೆ ಕಡೆ ಸಣ್ಣ ಸಣ್ಣದಾಗಿ ಮಾಡಿಕೊಂಡರೆ ಕಂಜಷನ್ ಇರುವುದಿಲ್ಲ. ಆದುದರಿಂದ ಜಾಸ್ತಿ ಮಾಡಿದರೆ ತೊಂದರೆಯಾಗುವುದಿಲ್ಲ ಆಮೇಲೆ ಡಿಪಾರ್ಟ್‌ಮೆಂಟ್ ಆಫ್ ಅಂತ್ರೋಲಜಿಯನ್ನು ಹೆಚ್ಚಿಗೆ ಮಾಡಬೇಕು ಎಂದು ನಮ್ಮ ಪ್ರಾರ್ಥನೆ. ಇದರಲ್ಲಿ ಕ್ವಾಲಿಫೈಡ್ ಡಾಕ್ಟರ್ಸನ್ನು ಹಾಕಬೇಕು. ಪ್ಲಾಸ್ಟಿಕ್ ಸರ್ಜರಿಯಲ್ಲಿ ಜನರಲ್ ಸರ್ಜನ್‌ನ್ನು ಹಾಕಬಾರದು: ಪ್ಲಾಸ್ಟಿಕ್ ಸರ್ಜನನ್ನೇ ಹಾಕಬೇಕು. ಫಂಡ್ ಕೊಡುವುದರಲ್ಲಿ ಹೆಚ್ಚಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಮಾಲ್ಗಮೇಷನ್ ಆಫ್ ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತನ್ನು ನಗರದಲ್ಲಿ ಮಾಡಿದ್ದೀರಿ. ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಇದ್ದಾರೆ, ಇದನ್ನು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮಾಡಿಲ್ಲ. ಆಮೇಲೆ ಡಿ.ಎಚ್ ಒ. ಎ.ಎಂ.ಒ. ಇದ್ದಾರೆ. ಇವೆರಡನ್ನೂ ಕೆಲಸದಲ್ಲಿ ಒಂದೇ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ, ಆ ಮೇಲೆ ರಾಜಾಜಿನಗರದಲ್ಲಿ ಒಂದು ಆಸ್ಪತ್ರೆಯನ್ನು ಕೇಳಿದ್ದಾರೆ ಅದನ್ನು ತಾವು ಪ್ರಾರಂಭಿಸಬೇಕು. ಕೆ.ಸಿ. ಆಸ್ಪತ್ರೆಗೆ ಫಂಡ್ಸ್ ಸಾಂಕ್ಷನ್ ಮಾಡಬೇಕು ಎಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ ಮಾತನ್ನು ಮುಗಿಸುತ್ತೇನೆ

4–30 P.M.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು (ಶಾಂತಿ ನಗರ).--ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಮಂತ್ರಿಗಳು ತಂದಿರತಕ್ಕಂಥ ೧೯೭೪-೭೫ರ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ಇಚ್ಛಿಪಡುತ್ತೇನೆ ತಮಗೆ ಗೊತ್ತಿದ್ದಹಾಗೆ ಹೋದ ವರ್ಷಕ್ಕಿಂತ ಈ ವರ್ಷವೂ ೩೫ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ ಸಂತೋಷ ಡಾಕ್ಟರ್‌ಗಳು ೩೦೦ಕ್ಕೆ ಒಬ್ಬರೂ ಇಲ್ಲಿರುವುದಕ್ಕೆ ಇಷ್ಟಪಡುವುದಿಲ್ಲ ಎಲ್ಲಾ ಪರದೇಶಕ್ಕೆ ಹೋಗುವುದಕ್ಕೆ ಇಷ್ಟಪಡುತ್ತಾರೆ ಆದುದರಿಂದ ಅಂಥವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿ "Brain Drain" ಆಗುತ್ತೆ ಆದ್ದರಿಂದ ಇಂತಹ ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಹೇಳಿದ ಹಾಗೆ ಒಬ್ಬ ಡಾಕ್ಟರ್ ೬೦-೭೦ ಸಾವಿರ ರೂ ಖರ್ಚು ಮಾಡಿ ಅಡ್ಮಿಷನ್ ಪಡೆಯಬೇಕಾಗಿರುವುದರಿಂದ, ಅವರು ಪರದೇಶಗಳಿಗೆ ಹೋಗಿ ನೆಲೆಸುವುದಕ್ಕೆ ಇಷ್ಟಪಡುತ್ತಾರೆ. ನಮ್ಮ ಜನರಿಗೆ ಸೇವೆಮಾಡಲು ಸಿದ್ಧವಿಲ್ಲ.

ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರ್‌ಗಳು ಹೋಗಿ ಏತಕ್ಕೆ ನೆಲೆಸುವುದಿಲ್ಲವೆಂದರೆ ಅಲ್ಲಿ "ಫೋನ್ ಇಲ್ಲ, ವ್ಯಾನ್ ಇಲ್ಲ, ಫ್ಯಾನ್ ಇಲ್ಲ ಮತ್ತು Cinema ಇಲ್ಲ. ಅಲ್ಲಿ ಯಾವುದೇ ಒಂದು ಎನ್ವಿರೋನ್‌ಮೆಂಟ್ ಇಲ್ಲ. ನಾನು ಕೇಳುತ್ತೇನೆ ನೀವು ಅಲೋಪತಿಗೆ ೩೫ ಕೋಟಿ ರೂಪಾಯಿ ಖರ್ಚು ಮಾಡತಕ್ಕಂಥಕಾಲದಲ್ಲಿ ನಮ್ಮ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್‌ಗಳಾದ ಆಯುರ್ವೇದ, ಹೋಮಿಯೋಪತಿ ಸಿದ್ಧೌಷಧ, ಯುನಾನಿ. ಮನೆಯಲ್ಲಿ ಚಾಪೆಮೇಲೆ ಕೂತುಕೊಂಡು ಮಾಡುತ್ತಾರಲ್ಲ, ಅವರಿಗೆ ಕೊನೆಪಕ್ಷ ೫ ಕೋಟಿ ರೂಪಾಯಿಗಳನ್ನಾದರೂ ಖರ್ಚುಮಾಡಿ ಎಂದು ಒತ್ತಿ ಹೇಳುತ್ತೇನೆ. ತಾವು ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್‌ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ ಇಂಗ್ಲೀಷಿನವರು ಬರುವುದಕ್ಕೆ ಮುಂಚೆ ಯುನಾನಿ ಸಿಸ್ಟಂ ಇತ್ತು. ಅವರು ಬಂದಮೇಲೆ ಆಲೋಪತಿ, ಹೋಮಿಯೋಪತಿ ಬೆಳೆಯಿತು. ಆದರೂ ನಮ್ಮ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್‌ಗಾಗಿ ತಾವು ಹೆಚ್ಚಿಗೆ ಹಣವನ್ನು ವೆಚ್ಚ ಮಾಡುತ್ತಾ ಇಲ್ಲ. ಇದು ಬಹಳ ವಿಷಾದಕರ ಸಾವಿರಾರು ಆಸ್ಪತ್ರೆಗಳಲ್ಲಿ ಕೇವಲ ೩೦-೪೦ ಹೋಮಿಯೋಪತಿ, ಆಲೋಪತಿ ಆಸ್ಪತ್ರೆಗಳಿವೆ ಹೋಮಿಯೋಪತಿ. ಆಲೋಪತಿ, ಯುನಾನಿ ಈ ಸಿಸ್ಟಂ ಮೆಡಿಸನ್ ಅವರೆಲ್ಲಾ ಎಲ್ಲಿಯವರೆಗೂ ಒಂದುಗೂಡುವುದಿಲ್ಲವೋ ಅಲ್ಲಿಯವರೆಗೂ ಇದು ಸರಿಹೋಗುವುದಿಲ್ಲ ೧೯೬೪ರಲ್ಲಿಯೇ ಒಂದು ಬೋರ್ಡ್ ಮಾಡಬೇಕೆಂದು ಮಾಡಿದ್ದರು. ಆದರೆ ಅವರೆಲ್ಲರೂ ಒಟ್ಟಿಗೆ ಸೇರಿ ಬೋರ್ಡ್ ಮಾಡಲಿಕ್ಕೆ ಒಪ್ಪಲಿಲ್ಲ ಆದುದರಿಂದ ತಾವು ಈಗಲಾದರೂ ಒಂದು ಬೋರ್ಡನ್ನು ಸ್ಥಾಪನೆ ಮಾಡಿ ಇರತಕ್ಕಂಥ ಲೋಪದೋಷಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಹಾಗೂ ಆಲೋಪತಿ ಹೋಮಿಯೋಪತಿ ಡಾಕ್ಟರುಗಳು ಹಳ್ಳಿಗಳಿಗೆ ಹೋಗುವುದಕ್ಕೆ ಸಿದ್ಧರಾಗಿರುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮತ್ತು ಕೋರ್ಟ್ ಆಫ್ Examine ಅನ್ನು ಸಹ ಬದಲಾಯಿಸಬೇಕೆಂದು ಕೋರುತ್ತೇನೆ

ಇನ್ನು ಡ್ರಗ್ ಕಂಟ್ರೋಲರ್ ಬಗ್ಗೆ ಒಂದು ವಿಷಯವನ್ನು ಹೇಳಿಬಿಡುತ್ತೇನೆ. ಡ್ರಗ್ ಕಂಟ್ರೋಲರ್ ಔಷಧಿಗಳನ್ನು ಸರಿಯಾಗಿ ಇನ್‌ಸ್ಪೆಕ್ಟ್ ಮಾಡುತ್ತಿದ್ದಾರೆ. ಬಹಳ ಎಫೆಕ್ಟಿವ್ ಆಗಿ ಡ್ರಗ್ಸ್‌ನು ಕಂಟ್ರೋಲ್ ಮಾಡುತ್ತಿದ್ದಾರೆ. ಆದರೆ, ಸ್ಟ್ಯಾಂಡರ್ಡನ್ನು ಮೈನ್‌ಟೇನ್ ಮಾಡುತ್ತಿದ್ದಾರೆಂದು ತಾವು ಹೇಳುತ್ತಿದ್ದೀರಿ ಆದರೆ ಈಗತಾನೆ ರಾಜಾಜಿನಗರದ ಆಸ್ಪತ್ರೆ, ಮತ್ತಿತರ ಕೆಲವು ಆಸ್ಪತ್ರೆಗಳಲ್ಲಿ ಔಷಧ ತೆಗೆದುಕೊಂಡು ಸತ್ತು ಹೋಗಿರತಕ್ಕಂಥ ವಿಷಯಗಳನ್ನು ನಾವು ನೋಡುತ್ತಲೇ ಇದ್ದೇವೆ ತಾವು ಸಂಬಂಧಪಟ್ಟ ಅಧಿಕಾರಿಗಳನ್ನು ಸರಿಯಾಗಿ ಔಷಧಗಳನ್ನು ಚೆಕ್ ಮಾಡಿಕೊಂಡು ಹೋಗುವಂತೆ ಹೇಳಬೇಕು ಈಗ ನಮ್ಮ ದೇಶದಲ್ಲಿ ಕಾಲೇಜ್ ಆಫ್ ಫಾರ್ಮಸಿಯವರು ಇದ್ದಾರೆ, (೨) ಡ್ರಗ್ ಮ್ಯಾನ್ಯುಫ್ಯಾಕ್ಚರ್ ಸೆಂಟರ್ಸ್‌ನವರಿಗೆ ಉದ್ಯೋಗವಿಲ್ಲ (೩) ಹೀಗೆಯೇ ಕಾಲೇಜ್ ಆಫ್ ನರ್ಸಿಂಗ್ ಅಂಡ್ ಡಿಗ್ರಿಕೋರ್ಸ್ ಮಾಡಿರುವವರಿದ್ದಾರೆ (೪) ಡಿಪ್ಲೊಮೋ ಕೋರ್ಸ್ ಮಾಡಿರತಕ್ಕಂಥವರೆಲ್ಲರೂ ಇದ್ದಾರೆ. ಅವರಿಗೆ ಏನೂ ಕೆಲಸಕಾರ್ಯಗಳೇ ಇಲ್ಲ ಎಂದು ಹೇಳುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಕೂಡಲೇ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿ, ಪಿ.ಎಸ್.ಸಿ. ಮೂಲಕ ಅವರಿಗೆ ಕೆಲಸವನ್ನು ಒದಗಿಸಿಕೊಡಿ.

ಮುಖ್ಯವಾದ ವಿಷಯವನ್ನು ಹೇಳುವುದಾದರೆ "ಹೆಲ್ತ್ ಯೂನಿಟ್" ಸ್ಥಾಪನೆ ಮಾಡಿದರೆ ಈರೀತಿ ಸ್ಥಾಪಿಸಿದರೆ ನಮ್ಮ ದೇಶದಲ್ಲಿ ಇದೇ "ಪ್ರಥಮ ಯೂನಿವರ್ಸಿಟಿಯಾಗುತ್ತದೆ." ಇದಕ್ಕೆ ಸ್ವಲ್ಪ ಹಣವನ್ನು ಮತ್ತು ಸ್ಥಳವನ್ನು ಒದಗಿಸಿ ಎನ್ನುವ ಬಗ್ಗೆ ನನಗೂ ಮಾನ್ಯ ಆರೋಗ್ಯಮಂತ್ರಿಗಳಿಗೂ ಸ್ವಲ್ಪ ವ್ಯತ್ಯಾಸವಿದೆ. ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಬೆಂಗಳೂರಿನಲ್ಲಿ ಈ ಒಂದು ಹೆಲ್

University ಸೆಂಟರ್‌ನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲತೆ ಇದೆ. ಅದನ್ನು ಮಾಡುವುದಕ್ಕೆ ಎಲ್ಲಾ ಅರ್ಹತೆಗಳೂ ಮತ್ತು ಅನುಕೂಲಗಳು ಇಲ್ಲಿ ಇದೆ. ನಮ್ಮಲ್ಲಿ ಸೆಂಟ್ ಜಾನ್ ಮೆಡಿಕಲ್ ಕಾಲೇಜ್ ಇದೆ ವಿಕ್ಟೋರಿಯಾ ಆಸ್ಪತ್ರೆ ಇದೆ, ಮಿಂಟೋ ಆಸ್ಪತ್ರೆ, ಮಾರ್ತಾಸ್ ಆಸ್ಪತ್ರೆ ಕೇವಲ ಒಂದೆರಡು ಮೈಲಿ ದೂರದಲ್ಲಿ ಇದೆ ಹಾಗೂ ಇದನ್ನು ಮಾಡಲು ಬೇಕಾಗತಕ್ಕಂಥ ೧೫೦-೨೦ ಎಕರೆ ಜಮೀನು ಸ್ಥಳ ಸಹ ಇದೆ. ಆದುದರಿಂದ ತಾವು ಹೆಲ್ತ್ ಯೂನಿವರ್ಸಿಟಿಯನ್ನು ಈ ವರ್ಷದಿಂದಲೇ ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಏತಕ್ಕೆ ಮೈಸೂರಿನಲ್ಲಿ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ಆರ್. ಎಸ್. ನಾಯ್ಡು.—ಎಲ್ಲಾ ಫೆಸಿಲಿಟೀಸ್ ಇರಬೇಕು ಬರೀ ಕಟ್ಟಡ ಒಂದು ಇದ್ದರೆ ಸಾಲದು ಇಲ್ಲಿ ಬೆಂಗಳೂರಿನಲ್ಲಿ ಮಾಡುವುದಕ್ಕೆ ಎಲ್ಲಾ ಅನುಕೂಲತೆಗಳೂ ಇರುವುದರಿಂದ ಬೆಂಗಳೂರಿನಲ್ಲಿಯೇ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಡಾ|| ಮೇಲುಕೋಟೆಯವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ, ಅದರ ಲೆಟರ್ ಅಂಡ್ ಸ್ಪಿರಿಟ್‌ನಂತೆ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಮೆಡಿಕಲ್ ಕಾರ್ಪೋರೇಷನ್ ಸಹ ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಫುಡ್ ಕಾರ್ಪೋರೇಷನ್ ಎಂದು ಮಾಡಿದ್ದೀರಿ ಮತ್ತು ಡೈರಿ ಕಾರ್ಪೋರೇಷನ್ ಎಂದು ಮಾಡಿದ್ದೀರಿ. ಅದೇರೀತಿ ಒಂದು ಮೆಡಿಕಲ್ ಕಾರ್ಪೋರೇಷನ್ ಮಾಡಿ ಎಂದು ಹೇಳುತ್ತೇನೆ, ಮತ್ತೆ ಯಾವುದಕ್ಕೂ ಹಣ ಕೇಳಿದರೂ, ಹಣವಿಲ್ಲ ಹಣವಿಲ್ಲವೆಂದು ಹೇಳುತ್ತಿದ್ದೀರಿ ? ನಾನು ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರನ್ನು ಕೇಳಿಕೊಂಡಿದ್ದೇನೆ. ನೀವು ಯಾವುದಕ್ಕೆ ಖೋತಾ ಮಾಡಿದರೂ, ಎಸೆನ್ಷಿಯಲ್ Services ಆಗಿ ಬೇಕಾಗಿರತಕ್ಕ Medical Services ಗೆ ಮಾತ್ರ ಹೆಚ್ಚು ಹಣವನ್ನು ಒದಗಿಸಿ ಎಂದು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ ಇವತ್ತಿಗೂ ಒತ್ತಿ ಹೇಳುತ್ತಿದ್ದೇನೆ. ಮಾನ್ಯ Finance Minister ಸಹ ಇದರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ.

ಇನ್ನು ಕೆಲವು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾಗಿ ಆಹಾರವನ್ನು ಕೊಡುತ್ತಿಲ್ಲ; ನಾನ್ ವೆಜಿಟೇರಿಯನ್ ಬೆಲೆ ಜಾಸ್ತಿ ಯಾಗುತ್ತದೆಂದು ಹೇಳುವುದಾದರೆ, ಕೊನೆಯಪಕ್ಷ ಒಂದು ವಾರಕ್ಕೊಮ್ಮೆಯಾದರೂ ಎರಡು ಎಗ್ಸ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಆಸ್ಪತ್ರೆಗಳಿಗೆ ಬೇಕಾಗತಕ್ಕಂಥ ಎಕ್ವಿಪ್‌ಮೆಂಟ್ಸ್‌ನ್ನು ಅಂದರೆ Beds ಔಷಧಿಯನ್ನು ಒದಗಿಸಿ ಸಾಕಷ್ಟು Staff ಕೊಡಬೇಕೆಂದು ಹೇಳಿ ಈ ನಾಲ್ಕು ಮಾತು ಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ ಜೈ ಕರ್ನಾಟಕ.

ಶ್ರೀ ಜಿ. ಎಲ್. ಕಬಾಡಿ (ಬೆಳ್ಳೊಳ್ಳಿ):—ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಆರೋಗ್ಯ ಮಂತ್ರಿಗಳು ತಂದಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಭಾಷಣಮಾಡದೇ ಕೆಲವೊಂದು ಪಾಯಿಂಟ್ಸ್‌ಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ತರಬೇತಿ ಹೊಂದಿರುವವರಿಗೆ ಹೊರಗಿನ ರಾಜ್ಯಗಳಲ್ಲಿ ೨೦೦ ರೂಪಾಯಿ ವೇತನ ಕೊಡುತ್ತಿರುವಾಗ ನಮ್ಮ ರಾಜ್ಯದಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಕೊಡದೇ ಇರುವುದು ಒಂದು ವಿಷಾದನೀಯವಾದ ಸಂಗತಿ. ಆದುದರಿಂದ ಅವರು ಕೇಳುತ್ತಿರತಕ್ಕಂಥ ಶಿಷ್ಯ ವೇತನ ೨೦೦ ರೂಪಾಯಿಗಳನ್ನು ಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ ಮತ್ತೆ ನಮ್ಮ ಇಂಡಿ ತಾಲ್ಲೂಕಿನಲ್ಲಿ ಚಡಚಣ, ಮುಂತಾದ ಭಾಗದಲ್ಲಿರತಕ್ಕಂಥ ಹೆಲ್ತ್ ಸೆಂಟರ್‌ನಲ್ಲಿ ಏನು ದುರ್ವ್ಯವಹಾರ ಏನಾಗಿದೆ ಅದರ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾಗ್ಯೂ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ತೆಗೆದು ಕೊಂಡಿಲ್ಲ. ಕೇವಲ ಒಬ್ಬ ಕಾರ್ಕೂನನನ್ನು ಮಾತ್ರ ಸಸ್‌ಪೆಂಡ್ ಮಾಡಿ ಇಟ್ಟಿದ್ದೀರಿ ನಾನು ಕಾಗದ ಬರೆದು ಒಂದು ತಿಂಗಳ ಮೇಲಾದರೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಿದ್ದರೆ ನಿಮ್ಮ ಆಡಳಿತ ನಿರ್ವಹಣೆಯನ್ನು ಪ್ರಶ್ನಿಸಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಆಗಲೇ ಎನ್‌ಕ್ವೈರಿಗೆ ಕಳುಹಿಸಿದ್ದೇನೆ.

ಶ್ರೀ ಜಿ. ಎಲ್. ಕಬಾಡಿ.—ಇಲ್ಲಿಯವರೆಗೂ ಕಳುಹಿಸಿಲ್ಲ ತಾವು ಬಿಜಾಪುರಕ್ಕೆ ಬಂದಿದ್ದಾಗ ಅಂಥ ನಿವಾರಣಾ ಸಂಸ್ಥೆಯ ಬಗ್ಗೆ ನಾನು ವಿನಂತಿ ಮಾಡಿಕೊಂಡಿದ್ದೇ, ಈ ಅಂಥ ನಿವಾರಕ ಸಂಸ್ಥೆಗೆ ಸಾಕಷ್ಟು ಧನ ಸಹಾಯವನ್ನು ಒದಗಿಸಿ ಎಂದು. ೧೯೬೫ನೇ ಇಸ್ವಿಯಿಂದಲೂ ಈ ಸಂಸ್ಥೆಗೆ ಸಾಕಷ್ಟು ಧನ ಸಹಾಯ ಕೊಟ್ಟಿದ್ದೇ ಇಲ್ಲ. ತಾವು ಹಣವನ್ನು ಕೊಟ್ಟರೆ ಈ ಸಂಸ್ಥೆಯನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತ

ದೆಂದು ಹೇಳುತ್ತೇನೆ. ಇದರ ಬಗ್ಗೆ ತಾವು ತೀವ್ರವಾಗಿ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಇನ್ನು ಡಾಕ್ಟರ್‌ರವರ ವರ್ಗದ ಬಗ್ಗೆ ಹೇಳುವುದಾದರೆ ಒಬ್ಬ ಡಾಕ್ಟರನ್ನು ವರ್ಗ ಮಾಡಿದ್ದೇವೆಂದು ಆರ್ಡರ್ ಕೊಟ್ಟ ಮೇಲೆ ಅದರ ಹಿಂದೆನೇ ಆ ಕ್ಯಾನ್ಸಲ್ ಮಾಡಿದ್ದೇವೆಂದು ಮತ್ತೊಂದು ಆರ್ಡರ್ ಬರುತ್ತದೆ. ಈ ರೀತಿ ಆಗಬಾರದು ಆದರೆ ಇವತ್ತು ಆಗುತ್ತಿದೆಯೆಂದು ಹೇಳಬೇಕಾಗಿದೆ. ಫಾರ್ಮಸಿಸ್ಟ್, ಕೆಲಸದಲ್ಲಿರುವವರು ಕೆಲಸ ಏನು ಮಾಡುತ್ತಾ ಇದ್ದಾರೆ ಎಂದರೆ, ಔಷಧಿ ಕೊಡುವುದರಿಂದ ಹಿಡಿದು ಜವಾನರ ಕೆಲಸದವರೆಗೆ ಕೆಲಸ ಮಾಡುತ್ತಾ ಇದ್ದಾರೆ. ನಿಯಮಾವಳಿಯಲ್ಲಿ ಕೆಲಸ ಎಷ್ಟು, ಹೇಗೆ ಎಂಬ ನಿಯಮದ ಕಾರ್ಯಕ್ರಮ ಹಾಕಿ ಕೊಡುವುದು ಸೂಕ್ತ. ಅದರ ಪ್ರಕಾರ ಹೆಚ್ಚಿನ ಕೆಲಸ ಮಾಡಿದರೆ, ೫ ಪರ್ಸೆಂಟ್ ಪರಿಹಾರ ಸಿಗಬೇಕು ಎಂದು ಹೇಳುತ್ತೇನೆ. ಇನ್ನು ಬಿಜಾಪುರ ಸಿವಿಲ್ ಆಸ್ಪತ್ರೆಯಲ್ಲಿ ಹೊಸದಾಗಿ ನಿರ್ಮಿಸಲ್ಪಟ್ಟ ೨೫೦ ಬೆಡ್ ಇರುವ ಆಸ್ಪತ್ರೆಯ ಬಗ್ಗೆ ಇನ್ನೂ ಯಾವ ಕಾರ್ಯಕ್ರಮ ಕೈಗೊಂಡಿಲ್ಲ. ಅಲ್ಲಿ ಇರತಕ್ಕ ಸೌಲಭ್ಯಗಳ ಯಾವುದು ಇಲ್ಲದೇ ಆಸ್ಪತ್ರೆಯಲ್ಲಿ ತೀವ್ರವಾಗಿ ಶಿಫ್ಟ್ ಮಾಡಿ ಅಲ್ಲಿನ ಜನರಿಗೆ ಬಹಳ ಅನಾನುಕೂಲವಾಗುತ್ತದೆ. ಪಾಯಿಂಟ್ಸ್ ಮಾತ್ರ ಹೇಳುತ್ತೇನೆ

1. ದವಾಖಾನೆಗೆ Compound wall ಇಲ್ಲ.

2. Construction of water storage taken ಕಟ್ಟಲಿಲ್ಲ,

3. Continuing the water pumping arrangements from the existing well after opening the Hospital in the new premises and with tube well also. ಅದರ ಬಗ್ಗೆ ಸೂಚನೆ ಕೊಟ್ಟಿದ್ದೇನೆ.

4. Construction of 6 latrines and 6 bathrooms to the electric laundry so that the laundry and of portion of the kitchen block can be utillised as a hostel for General Nursing Students and Auxillary Nurse Midwife Student, till the hostel building is constructed.

5. Construction of smokeless chulas in the kitchen.

6. Construction of hdobi ghat on the northern side of mortuary, so that the mortuary building can be used temporarily as a laundry.

7. Constructien of one post-mortem room with a provision of 2 rooms on the north west corner of the campus.

ಹಾಗೆ ಕೆಲವು ಎಲ್ಲಾ ಕಟ್ಟಬೇಕು ಇದರ ಬಗ್ಗೆ ಸೂಚನೆ ಕೊಟ್ಟಿದ್ದೇನೆ. ನೀವು ಒದಗಿಸಿರತಕ್ಕ ಲಿಫ್ಟ್ ಏನು ಇದೆ ಲಿಫ್ಟ್‌ಗೆ ಸುಮಾರು ಎರಡು ಲಕ್ಷ ಮೂವತ್ತು ಸಾವಿರ ರೂಪಾಯಿ ಖರ್ಚುಮಾಡಿದ್ದು. ಬೇರೆ ಫಂಡೆಗೆ ಯುಂಟಿಲೈಸ್ಡ್ ಮಾಡಿ ಆಸ್ಪತ್ರೆಯಲ್ಲಿ ಸುವ್ಯವಸ್ಥೆ ಮಾಡಿ ಎಂದು ಹೇಳಿದ್ದೆ, ಇದೂ ಅಲ್ಲದೆ ಹೆಲ್ತ್ ಲ್ಯಾಬೋರೇಟರಿಗೆ ೬೦ ಸಾವಿರ ರೂಪಾಯಿ ಏನು ಹಣ ಒದಗಿಸಿದ್ದು ಇದೆ, ಹಳೆ ಆಸ್ಪತ್ರೆಯಲ್ಲಿರುವ ಲ್ಯಾಬೊರೇಟರಿ ಸಾಧ್ಯಾ ಇರುವಾಗ ಅದನ್ನು ಕೈ ಬಿಟ್ಟರೆ ಇಟ್ಟಿದ್ದರೆ ಅನುಕೂಲವಾಗುತ್ತದೆ. ಸ್ಸರ್‌ಲೈ ಸೇಷನ್ ವಾರ್ಡ್ ಕನ್‌ಸ್ಟ್ರಕ್ಷನ್ ಆಫ್ ಥೀಯೇಟರ್‌ಗೆ ಹಣ ಏನು ಇದೆ ಖರ್ಚು ಮಾಡಬೇಕಾಗಿದೆ. ಅದಕ್ಕೆ ಪ್ರೈಮರಿ ಹೆಲ್ತ್ ಯೂನಿಟ್‌ಗೆ ಉಪಯೋಗಿಸಿ ಅದನ್ನು ಬೇಗ ಕಾರ್ಯರೂಪಕ್ಕೆ ತರಬೇಕು ಈಗ ಇರತಕ್ಕ ಬಿಜಾಪುರ ಆಸ್ಪತ್ರೆಯಲ್ಲಿ ಹೆರಿಗೆ ಆಸ್ಪತ್ರೆಗೆ ಮುಂಜೂರಾತಿ ಕೊಡಬೇಕು ಎಂದು ವಿನಂತಿ ಮಾಡಿಕೊಂಡಿದ್ದೇನೆ. ೫೦ ಬೆಡ್‌ಗೆ ಮಂಜೂರಾತಿ ನೀಡಿದ್ದಾರೆ ಎಂದು ಕೇಳಿದ್ದೇನೆ. ಮಂಜೂರಾತಿ ಆರ್ಡರ್ ಬಂದಿಲ್ಲ. ಇದರ ಬಗ್ಗೆ ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

SRI H SIDDAVEERAPPA.—They are going to have one of the biggest hospitals.

ಶ್ರೀ ಜಿ. ಎಲ್. ಕಬಾಡಿ.—ಒಂದು ಮೈಲಿ ಹೊರಗೆ ಇರತಕ್ಕ ಬಿಜಾಪುರ ಸಿಟಿ ಆಸ್ಪತ್ರೆಗೆ ಎಲ್ಲಾ ವ್ಯವಸ್ಥೆ ಮಾಡಬೇಕು. ಮೆಟರನಿಟಿ ಹೋಂಗೆ ಹೆರಿಗೆಗೆ ಹೋಗುವ ಹೆಣ್ಣು ಮಕ್ಕಳಿಗೆ ಅನುಕೂಲವಾಗಬೇಕು. ಬಿಜಾಪುರದಲ್ಲಿ ಹಳೆ ಆಸ್ಪತ್ರೆ ಏನು ಇದೆ, ಇದನ್ನು ಅಲ್ಲಿ ಮಾಡಿದ್ದು ಆದರೆ ಎಲ್ಲಾ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ. ಬಡವರಿಗೆ ಆಗತಕ್ಕ ಖರ್ಚಿನ ಸಂದರ್ಭ ತಪ್ಪಿಸಬಹುದು, ದೂರದಲ್ಲಿ ಆಗತಕ್ಕ ಎಷ್ಟೋ ಅಪಘಾತಗಳನ್ನು ತಪ್ಪಿಸುವುದಕ್ಕೆ ಆಗುತ್ತದೆ. ಏತಕ್ಕೆಂದರೆ ಬಾಣಂತಿ ಆಗುವ ಸಂದರ್ಭದಲ್ಲಿ ಎರಡು ಮೈಲಿ ದೂರ ಇರುವ ಹೊಸ ಆಸ್ಪತ್ರೆಗೆ ಹೋಗಬೇಕಾದರೆ, ವಾಹನ ಸಿಕ್ಕದೇ

ಇದರೆ ಏನು ಅನಾಹುತವಾಗುತ್ತದೆ ಎಂಬುದು ತಮಗೆ ಗೊತ್ತು. ಈಗ ಇರುವ ಹಳೇ ಆಸ ತ್ರೆಯಲ್ಲಿ ಮೆಂಟರಿನಟಿ ಆಸ್ಪತ್ರೆ ಇಡಬೇಕು. ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿಯಲ್ಲಿ ಶಾಸಕ ವೃಂದ ತಮ್ಮನ್ನು ಈ ಬಗ್ಗೆ ವಿನಂತಿ ಮಾಡಿಕೊಂಡಿದೆ.

SRI H. SIDDAVEERAPPA —Government have not disagreed with your view.

ಶ್ರೀ ಜಿ. ಎಲ್. ಕಬಾಡಿ —ತಾವು ಈ ರೀತಿ ಮಾಡಬೇಕು, ತಮಗೆ ಧನ್ಯವಾದ ಅರ್ಪಿಸುತ್ತೇನೆ. ಒಂದು ವಿಚಾರ ಆರೋಗ್ಯ ಖಾತೆ ಮಂತ್ರಿಗಳು ಷೆಡ್ಯೂಲ್ ಕಾಸ್ಟ್ ಸಲುವಾಗಿ ಏನು ಒಂದು ನಿರ್ಧಾರ ಕೈಗೊಳ್ಳುತ್ತಾ ಇದ್ದಾರೆ. ಇವತ್ತು ವಿ. ಪಿ ರುದ್ರಪ್ಪನವರ ಬಗ್ಗೆ ತೆಗೆದುಕೊಂಡಂತಹ ಕ್ರಮ ಅಷ್ಟು ಸೂಕ್ತ ಎಂದು ಇವತ್ತಿನ ದಿನ ಜನತೆಗೆ ಅನ್ನಿಸಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ.

SRI H. SIDDAVEERAPPA.—The matter is sub-judice.

ಶ್ರೀ ಜಿ. ಎಲ್. ಕಬಾಡಿ.—ಕೋರ್ಟಿಗೆ ಹೋಗಿದ್ದಾರೆಯೇ ?

ಶ್ರೀ ಹೆಚ್ ಸಿದ್ದವೀರಪ್ಪ.—ಹೌದು.

ಶ್ರೀ ಕೋಣಂದೂರು ಲಿಂಗಪ್ಪ.—ಸಬ್ ಜಡೀಸ್ ಎಂದು ಪ್ರತಿ ಮಾತಿಗೂ ಹೇಳುತ್ತಾರೆ, ಯಾವಾಗ ಸಬ್‌ಜುಡೀಸ್ ಆಗುತ್ತದೆ, ಏತಕ್ಕೆ ಸಬ್ ಜುಡೀಸ್ ಆಗುತ್ತದೆ ?

MR. DEPUTY SPEAKER.—The minute chargesheet goes to the court, the court is seized of the matter and then it becomes sub-judice, not when the F.I.R. has gone. That was the old view. The present view is that charge-sheet must go. Then it becomes sub-judice; the court is seized of the matter.

ಶ್ರೀ ಜಿ. ಎಲ್. ಕಬಾಡಿ.—ಬಿಜಾಪುರ ಸಿವಿಲ್ ಆಸ್ಪತ್ರೆಯಲ್ಲಿ ಮಾಡತಕ್ಕ ಸ್ಯಾನಿಟೋರಿಯಂ ಅರೇಂಜ್‌ಮೆಂಟ್ಸ್ ಏನು ಇದೆ, ನೂರು ಹಾಸಿಗೆಯುಳ್ಳ ಸ್ಯಾನಿಟೋರಿಯಂ ಅರೇಂಜ್‌ಮೆಂಟ್ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಬಜೆಟ್ಟಿನಲ್ಲಿ ಪ್ರಾವಿಷನ್ ಇದ್ದರೂ ಸಹ ತೆಗೆದುಕೊಂಡಿಲ್ಲ. ಲೋಕೋಪಯೋಗಿ ಇಲಾಖೆಯಿಂದ ಏನಾದರೂ ತೊಂದರೆ ಬಂದಿದೆಯೇ, ಹಣದ ಅಭಾವ ಅದಕ್ಕೆ ಏನಾದರೂ ಆಗಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟೀಕರಿಸಬೇಕೆಂದು ವಿನಂತಿ, ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರಾನಾಳಿ ಚಂದ್ರಶೇಖರ (ಹೊಸನಗರ).—ಸನ್ಮಾನ್ಯ ಉಪಾಧ್ಯಕ್ಷರೇ, ಆರೋಗ್ಯ ಮಂತ್ರಿಗಳು ತಂದಿರುವ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು, ನಾಲ್ಕು ಮಾತುಗಳನ್ನು ಆಡಲಿಕ್ಕೆ ಇಚ್ಛಿಸುತ್ತೇನೆ. ಆರೋಗ್ಯ ಮಂತ್ರಿಗಳು ಖಾಸಾಗಿ ಮಾತು ಹೇಳಿರುವ ಬಗ್ಗೆ ಇಲ್ಲಿ ಉಲ್ಲೇಖಿಸಿದರು ಅದಕ್ಕೆ ಕ್ಷಮೆ ಕೇಳುತ್ತೇನೆ. ಬ್ರಹ್ಮ ಬಂದರೂ ಈ ಇಲಾಖೆಯನ್ನು ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಖಾಸಗೀಯಾಗಿ ಹೇಳಿದರು. ಅವರೇ ಅರ್ಥಮಾಡಿಕೊಂಡು ಬಿಟ್ಟಮೇಲೆ ನಾವು ಏನು ಹೇಳುವುದಕ್ಕೆ ಇದೆ. ಅವರಿಗೆ ಸಂಪೂರ್ಣವಾಗಿ ಇದರ ಅರ್ಥ ಗಮನಕ್ಕೆ ಬಂದಿವೆ ಎಂದು ನಾನು ತಿಳಿದುಕೊಂಡಿದ್ದೇನೆ: ಆದರೆ ಹೆಸರು ಸಿದ್ದವೀರಪ್ಪ ಇದ್ದಹಾಗೆ, ಸಿದ್ದರಾಮು ಹೆಸರು ಇಟ್ಟುಕೊಂಡಿರುವವರು ಏನು ಸಿದ್ಧಿಯನ್ನು ಮಾಡಲಿಕ್ಕೆ ಸಾಧ್ಯವಿದೆ, ಅಂಥ ಯಾವ ಯಾವ ನ್ಯೂನತೆಗಳು ಇವೆ ಅದನ್ನು ಸ್ವಚ್ಛಮಾಡಲಿಕ್ಕೆ ಶಕ್ತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ, ಅವರು ಮಾಡಿರತಕ್ಕ ಸಾಧನೆಯನ್ನು ಒಂದು ವರದಿ ರೂಪದಲ್ಲಿ ಕೊಟ್ಟಿದ್ದರೆ ಅವರಿಗೆ ಶಹಭಾಷಗಿರಿ ಕೊಡಲೇಬೇಕು. ಸಾಧನೆಯನ್ನು ಎಷ್ಟು ಮಾಡಿದರೂ ಕೂಡ ಇಲಾಖೆಯಲ್ಲಿ ಸಾಲದು: ಇವತ್ತು ಈ ಇಲಾಖೆಯಲ್ಲಿ ಹೆಚ್ಚು ಹಣ ಮಾಡಿರತಕ್ಕ ಹಣ ಏನು ಇದೆ, ಈ ಹಣದ ಉಪಯೋಗ ಯಾವ ರೀತಿಯಲ್ಲಿ ಆಗುತ್ತಾ ಇದೆ ಎನ್ನುವುದನ್ನು ನಾವು ಯೋಚನೆ ಮಾಡಿದರೆ, ಈ ಸಾಧನೆಯ ಫಲ ಏನು ಇದು ಅದು ಸಾಕಷ್ಟು ಜನತೆಗೆ ದೊರಕಿಲ್ಲ ಎನ್ನುವ ಮಾತನ್ನು ನಾನು ಹೇಳದೆ ಗತ್ಯಂತರವಿಲ್ಲ. ಕುಟುಂಬ ಯೋಜನೆ ಒಂದೇ ತೆಗೆದುಕೊಂಡರೆ ಸಾಕು. ಕುಟುಂಬ ಯೋಜನೆಯಲ್ಲಿ ಇವತ್ತು ಕೇವಲ ವಿದ್ಯಾವಂತರು, ಅಕ್ಷರಸ್ಥರು ಹಾಗೂ ಅನುಕೂಲಸ್ಥರು

ಹೆಚ್ಚಿನ ಪ್ರಯೋಜನ ಪಡೆಯುತ್ತಿದ್ದಾರೆಯೇ ಹೊರತು, ಗ್ರಾಮಾಂತರ ಭಾಗದಲ್ಲಿ ಇನ್ನೂ ಕೂಡ ಸಾಕಷ್ಟು ಮನಸ್ಸುಬಿಚ್ಚಿ ತಾವಾಗಿಯೇ ಒಂದು ಈ ಒಂದು ಉಪಯೋಗವನ್ನು ಪಡೆಯುವಂತ ನಿಲುವನ್ನು ಇನ್ನೂ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಆರೋಗ್ಯಮಂತ್ರಿಗಳು ಹಳ್ಳಿಗಳಲ್ಲಿ ಏನು ಆಸ್ಪತ್ರೆಯನ್ನು ಕಟ್ಟಲಿಕ್ಕೆ ಯೋಜನೆ ಹಾಕಿಕೊಂಡಿದ್ದಾರೆ ಅದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಶಿವಮೊಗ್ಗದಲ್ಲಿ ರೋಟರಿ ಸಂಸ್ಥೆಯವರು ೫೦ ಸಾವಿರ ರೂಪಾಯಿ ಮತ್ತು ಫ್ರೆಂಡ್ಸ್ ಸೆಂಟರ್‌ನವರು ೫೦ ಸಾವಿರ ರೂಪಾಯಿ ಇಟ್ಟುಕೊಂಡು ಸರ್ಕಾರದ ಆಜ್ಞೆಯನ್ನು ಜಾತಕ ಪಕ್ಷಿಯಂತೆ ಕಾದು ಕುಳಿತರೂ ಕೂಡ ಸರ್ಕಾರದ ಆಜ್ಞೆ ಬಂದಿಲ್ಲ ಎಂದರೆ ಇದಕ್ಕೆ ವ್ಯಸನವಾಗುತ್ತದೆ. ಆರೋಗ್ಯ ಮಂತ್ರಿಗಳು ಇರಲಿಲ್ಲ, ಶಿವಮೊಗ್ಗ ಜಿಲ್ಲೆಯ ರೋಟರಿ ಸಂಸ್ಥೆಯವರು ಮತ್ತು ಫ್ರೆಂಡ್ಸ ಸೆಂಟರಿನವರು ೫೦-೫೦ ಸಾವಿರ ರೂಪಾಯಿ ಬಂಡವಾಳ ಹೂಡಿ, ಸರ್ಕಾರದ ಮಂಜೂರಾತಿ ಬೇಕು ಎಂದ ಜಾತಕಪಕ್ಷಿಯಂತೆ ಕಾದು ಕೂತರೂ, ಸಿದ್ಧವೀರಪ್ಪನವರ ಮನಸ್ಸು ಕರಗಲಿಲ್ಲವೇ ಎಂದು ವ್ಯಸನವಾಗುತ್ತದೆ. ಮಂತ್ರಿಗಳಲ್ಲದ ತಬ್ಬಲಿ ಜಿಲ್ಲೆ ಎಂದೂ, ನಿಮ್ಮ ಜಿಲ್ಲೆ ಎಂದು ತಿಳಿದುಕೊಂಡು ಕೆಲಸ ಮಾಡಬೇಕು. ದಯವಿಟ್ಟು ಸವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ಶಿವಮೊಗ್ಗದಲ್ಲಿ ವಕೀಲಿ ವೃತ್ತಿ ಮಾಡಿದ್ದೀರಿ, ಶಿವಮೊಗ್ಗಕ್ಕೂ, ಚಿತ್ರದುರ್ಗಕ್ಕೂ ಸಂಪರ್ಕ ಬಹಳ ಇದೆ. ಆದುದರಿಂದ ಕಾಂಜೋಡಿಸಿ ಬೇಡಿಕೊಳ್ಳುತ್ತೇನೆ. ಈ ಜಿಲ್ಲೆಯ ಬಗ್ಗೆ ತಬ್ಬಲಿ ಜಿಲ್ಲೆ ಎಂದು ಕಕ್ಕುಲತೆ ಇಟ್ಟುಕೊಳ್ಳಿ ಎಂದು ಕಳಕಳಿಯಿಂದ ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಮಾಡುತ್ತಾ ಇದ್ದೇವೆ. ಮಾಡುವುದು ಬಿಟ್ಟಿಲ್ಲ

ಶ್ರೀ ಎಸ್. ಎಂ. ಶೀಲವನ್ನಾಳಿ ಚಂದ್ರಶೇಖರ್.—ನಮ್ಮ ಮಂತ್ರಿಗಳಲ್ಲಿ ಒಂದು ದೊಡ್ಡ ಗುಣ ಏನು ಎಂದರೆ, ಯಾರಲ್ಲ ಹೋಗಲಿ ಸಂಪೂರ್ಣ ಭರವಸೆ ಚೆನ್ನಾಗಿ ಕೊಟ್ಟು ಬಿಡುತ್ತಾರೆ, ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಮಗೆ ಮಾತಿನ ಕಡೆ ಹೋಗುತ್ತದೆ. ಬರೀ ಪ್ರೀತಿ ವಾತ್ಸಲ್ಯದ ಮಾತನ್ನು ನಾನು ಕೇಳುವುದಕ್ಕೆ ಆಗುವುದಿಲ್ಲ. ಆದರೆ, ಕೆಲಸ ಮಾತ್ರ ಆಗಿರುವುದಿಲ್ಲ ಅದು ನಮಗೆ ಬಹಳ ಕಷ್ಟಕ್ಕೆ ಬಂದಿರುವುದು.

ಇದನ್ನು ಕೂಡ ಗಮನದಲ್ಲಿಟ್ಟುಕೊಳ್ಳಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ತಮ್ಮ ಸಂಸ್ಥಾನ ಮಟ್ಟದಲ್ಲಿರುವ ಅಧಿಕಾರಿಗಳು ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಡೈರೆಕ್ಟರುಗಳೇ ಆಗಲಿ ಅಥವ ಪ್ರಾಜೆಕ್ಟ್ ಆಫೀಸರುಗಳೇ ಆಗಲಿ ಎಲ್ಲರೂ ಒಳ್ಳೆಯ ಕೆಲಸಗಾರರಾಗಿದ್ದಾರೆ. ನಮ್ಮ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಬಹಳ ಕೆಟ್ಟುಹೋಗಿದೆ. ಇದನ್ನು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಇವತ್ತಿನವರೆಗೂ ಬಾಗಿಲು ಬಿಟ್ಟಿರಲಿಲ್ಲ. ಇವತ್ತು ಫೋನ್ ಮಾಡಿ ಡಾಕ್ಟರ್ ಸರ್ಟಿಫಿಕೇಟನ್ನು ಕೇಳಿದರೆ ಜೇಬ್‌ಗೆ ಕೈ ಹಾಕಿ ವಸೂಲು ಮಾಡುವ ಮಟ್ಟಕ್ಕೆ ಹೋಗುತ್ತಾರೆ. ಏನು ತಂದಿದ್ದೀರಿ ಎಂದು ಜೇಬಿಗೆ ಕೈ ಹಾಕುತ್ತಾರೆ.

SRI H. SIDDAVEERAPPA.—The Hon. Member is on the Board of Visitors.

ಶ್ರೀ ಎಸ್. ಎಂ. ಶೀಲವನ್ನಾಳಿ ಚಂದ್ರಶೇಖರ್.—ಈ ದಿವಸ ಆಸ್ಪತ್ರೆಯಲ್ಲಿ ಕಷ್ಟ ಲೀಲೆ ಆಗುತ್ತಾ ಇದೆ. ಇದನ್ನೆಲ್ಲ ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಬಾರದು. ಆಸ್ಪತ್ರೆ ಎಂದರೆ ಒಂದು ದೇಗುಲಕ್ಕೆ ಸಮಾನವಾದುದು. ಅಂತಹ ದೇಗುಲಕ್ಕೆ ಸಮಾನವಾದಂಥಹ ಆಸ್ಪತ್ರೆಯನ್ನು ಅಧೋಮಟ್ಟಕ್ಕೆ ತರುತ್ತಿದ್ದಾರೆಂದು ಬೇರೆ ಈ ಸದನದ ಮುಂದೆ ಹೇಳಬೇಕಾಗಿಲ್ಲ. ತಾವು ಅದನ್ನು ಸುಧಾರಣೆ ಮಾಡಬೇಕು. ಅಲ್ಲಿರುವವರು ನಿಮ್ಮ ಶಿಷ್ಯರೇ ನೀವು ಅವರನ್ನು ಗದರಿಸಿದರೆ ಸಾಕು ಅವರು ನಡಗುತ್ತಾರೆ, ಬೇರೆ ಡಿ.ಒ ಲೆಟರ್ ಕೂಡ ಬೇಡ, ಕಂಪ್ಲೇಂಟ್ ಬಂದಿದೆಯೆಂದರೆ ಸಾಕು ಅವರು ನಡಗುತ್ತಾರೆ.

SRI H. SIDDAVEERAPPA.—Please give me the names. I will take action.

ಶ್ರೀ ಎಸ್. ಎಂ. ಶೀಲವನ್ನಾಳಿ ಚಂದ್ರಶೇಖರ್.—ಖಾಸಗಿಯಾಗಿ ಮೆಡಿಕಲ್ ಪ್ರಾಕ್ಟೀಸ್ ಮಾಡುವುದು ಇದೆ. ನನಗಾದ ಒಂದು ಅನುಭವವನ್ನು ಹೇಳುತ್ತೇನೆ. ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಎಗ್ಸಾಮಿನೇಷನ್‌ಗೋಸ್ಕರ ಹೋದರೆ ಒಬ್ಬ ಲೇಡಿ ಡಾಕ್ಟರ್ ಮನೆಗೆ ಕರೆದುಕೊಂಡು ಬನ್ನಿ ಎಂದು ಹೇಳಿದರು. ಅವರಿಗೆ ನನಗೂ ಆ ರೀತಿ ಹೇಳುವಷ್ಟು ಧೈರ್ಯ ಇದೆ. ಇದು ಈ ಮಟ್ಟಕ್ಕೆ ಹೋಗಿದೆ. ಆಸ್ಪತ್ರೆಯಲ್ಲಿ ಬೋರ್ಡ್ ಹಾಕಿಕೊಂಡು ವಶೀಲಿಬಾಜಿ ನಡೆಸುತ್ತಾರೆ. ಇದನ್ನು ದಯವಿಟ್ಟು ಖೈದು

ಮಾಡಿ. ಇದರಿಂದ, ಈ ಖಾಸಗೀ ವೃತ್ತಿಯಿಂದ ಬಡವಬಗ್ಗರು ನಿಜವಾಗಿ ಬದುಕುವುದಕ್ಕೆ ಸಾಧ್ಯವಿಲ್ಲ ವಾಗಿದೆ. ಕೊನೆಯಂದಾಗಿ ಡ್ರಗ್ ಮ್ಯಾನುಫ್ಯಾಕ್ಚರಿಂಗ್ ಇಂಡಸ್ಟ್ರೀಸ್‌ನವರು ಪಡತಕ್ಕ ಕಷ್ಟವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವತ್ತು ಅಲ್ಲಿ ಸರಿಯಾಗಿ ಸಕ್ಕರೆಯನ್ನು ಒದಗಿಸುತ್ತಾ ಇಲ್ಲ. ಸಕ್ಕರೆ ಇಲ್ಲದೆ ಯಾವ ಡ್ರಗ್ ಮ್ಯಾನುಫ್ಯಾಕ್ಚರ್ ಇಂಡಸ್ಟ್ರೀಸ್ ಮುಂದುವರಿಯುವುದಕ್ಕೆ ಸಾಧ್ಯ ಇಲ್ಲ, ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಇದು ಕೇಂದ್ರಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದೆ. ತಾವು ಸರಿಯಾದ ರೀತಿಯಲ್ಲಿ ಆದೇಶ ಕೊಟ್ಟು ಈ ಕೈಗಾರಿಕೆಯನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಪಿ. ಬಿ. ಪಾಟೀಲ್ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸಿದ್ಧವೀರಪ್ಪ ನವರು ತಂದಂತಹ ವೈದ್ಯಕೀಯ ಬಜೆಟ್ ಮೇಲೆ ಎರಡು ಸಲಹೆಗಳನ್ನು ನಾನು ಹೇಳಲು ಇಚ್ಛೆಪಡುತ್ತೇನೆ. ಇದು ನನ್ನ ಬೆಳಗಾಂ ಜಿಲ್ಲೆಗೆ ಸಂಬಂಧಿಸಿದಂತೆ, ಒಂದು ಹಾಸ್ಪಿಟಲ್, ಎರಡು ಕಾಟೇಜ್ ಹಾಸ್ಪಿಟಲ್ ಇವೆ. ಬೆಳಗಾಂ ಜಿಲ್ಲೆಯ ಸಿವಿಲ್ ಹಾಸ್ಪಿಟಲ್‌ನಲ್ಲಿ ಈಗ ಸದ್ಯಕ್ಕೆ ೭೦೦ ಬೆಡ್‌ಗಳು ಇವೆ ಇದಕ್ಕೆ ಮೊದಲು ಅಂದರೆ ೬ ವರ್ಷದ ಹಿಂದೆ ಹಾಸ್ಪಿಟಲ್‌ನಲ್ಲಿ ೪೫೦ ಬೆಡ್‌ಗಳು ಇದ್ದುವು. ೪೫೦ ಬೆಡ್‌ಗಳು ಇದ್ದಾಗ ಏನು ಖರ್ಚು ಮಾಡುತ್ತಿದ್ದರೋ ಈಗಲೂ ಅದೇ ಖರ್ಚನ್ನು ಮುಂದೂಡುತ್ತಾ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟಿಲ್ಲ ಎಂದು ನಾನು ಇವತ್ತು ಹೇಳುವುದಕ್ಕೆ ಬಯಸುತ್ತೇನೆ ಇದೂ ಅಲ್ಲದೆ ಈ ಹಾಸ್ಪಿಟಲ್‌ನಲ್ಲಿ ೪ ಎಕ್ಸ್‌ರೇ ಪ್ಲಾಂಟ್‌ಗಳು ಇದ್ದರೂ ಸಹ ಒಂದೇ ಎಕ್ಸ್‌ರೇ ಪ್ಲಾಂಟ್ ಮಾತ್ರ ಕೆಲಸಮಾಡತ್ತಿದೆ. ಉಳಿದವುಗಳು ಔಟ್ ಆಫ್ ಆರ್ಡರ್ ಆಗಿ ೩ ವರ್ಷವಾಯಿತು. ಅದನ್ನು ಅಟೆಂಡ್ ಮಾಡುವವರು ಯಾರು ಇಲ್ಲವೆಂದು, ಸ್ವತಃ ಮಿನಿಸ್ಟರು ಬಂದು ಕೇಳಿದರೂ ಇದನ್ನೇ ಹೇಳಿಕೊಂಡು, ಆ ಸಿವಿಲ್ ಹಾಸ್ಪಿಟಲ್‌ನಲ್ಲಿ ಕರೆಸ್ಪಾಂಡ್‌ನ್ಸ್ ಬಂದರೂ ಸಹ ಅಟೆಂಡ್ ಆಗಿ ಎಂದು ಹೇಳಬಹುದು. ತಾವು ಅಡಿಷನಲ್ ಡೈರೆಕ್ಟೋರೇಟ್ ಪೋಸ್ಟನ್ನು ಕ್ರಿಯೇಟ್ ಮಾಡಿದ್ದೀರಿ. ಅಡಿಷನಲ್ ಡೈರೆಕ್ಟೋರೇಟ್ ಎಂದರೆ ಕೆಲವೊಂದು ಜನರಿಗೆ ಫೇವರ್ ತೋರಿಸುವುದಕ್ಕೆ ಮಾಡಿದ್ದಾರೆಂದು ಅಪಾದಿಸಬೇಕಾಗಿದೆ ಇನ್ನು ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಬಗ್ಗೆ ಶ್ರೀಮಾನ್ ವಾಯುಡು ಅವರು ಹೇಳಿದರು. ರಾಜಾಜಿ ನಗರದ ಹಾಸ್ಪಿಟಲ್‌ನಲ್ಲಿ ಆದಂತಹ ಡೆತ್ಸ್‌ಫುಡ್ ಪಾಯಜನ್‌ನಿಂದ ಆಗಿದ್ದು, ಅದರ ಸಲುವಾಗಿ ಶ್ರೀ ಕೃಷ್ಣನರವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳಿಸಿದ್ದು, ಫುಡ್ ಪಾಯ್‌ಜನ್ ಮೂಲಕ ಡೆತ್ ಆಗಿದ್ದರೂ ಸಹಿತ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧ ಇದೆಯೆಂದು ಅನ್ನಿಸುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಯಾವ ರೀತಿ ಈ ಡಿಪಾರ್ಟ್‌ಮೆಂಟ್ ಎಫಿಶಿಯೆನ್ಸಿಯಿಂದ ಕೆಲಸಮಾಡುತ್ತಿದೆ ಎಂದರೆ ಡ್ರಗ್ ಕಂಟ್ರೋಲ್, ಡ್ರಗ್ ಟೆಸ್ಟಿಂಗ್ ಲ್ಯಾಬೊರೇಟರಿ ಎಂದು ಹೇಳಬಹುದು. ಏನಾದರೂ ಕರೆಸ್ಪಾಂಡ್‌ನ್ಸ್ ಮಾಡಿದರೆ ಒಂದು ವಾರದಲ್ಲಿ ಕರೆಸ್ಪಾನ್‌ಡೆನ್ಸ್ ಮಾಡಿದಂತಹ ಮದಿಗೆ ಉತ್ತರ ಸಿಕ್ಕುತ್ತದೆ ಎಂದು ಹೇಳಲಿಕ್ಕೆ ನಾನು ಹೆಮ್ಮೆ ಪಡುತ್ತೇನೆ. ಇವತ್ತು ಈ ಡಿಪಾರ್ಟ್‌ಮೆಂಟನ್ನು ಬಿಟ್ಟರೆ ಬೇರೆ ಯಾವ ಡಿಪಾರ್ಟ್‌ಮೆಂಟ್‌ನಿಂದಲೂ ಈ ರೀತಿ ಸಪ್ಲೈ ಸಿಕ್ಕುವುದಿಲ್ಲ. ಆದ್ದರಿಂದ ಇದನ್ನು ಎಫಿಷಿಯೆಂಟ್ ಡಿಪಾರ್ಟ್‌ಮೆಂಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಅಷ್ಟೆಲ್ಲಾ ಖರ್ಚು ಮಾಡುತ್ತಿದ್ದಾರೆ. ಹೆಚ್ಚಿನ ಅಪರೇಷನ್ಸ್ ಮಾಡಿದಂತಹ ಮನುಷ್ಯನಿಗೆ ಒಂದು ಫ್ರೈಜ್ ಆಗಲೀ ಆತನಿಗೆ ಕೊಡುವಂತಹದ್ದನ್ನು ವ್ಯಾಪಾರಡು ಮಾಡಬೇಕೆಂದಿದೆಯಾದರೆ ಡಾಕ್ಟರುಗಳು ಹೆಚು ದುಡಿದು ಹೆಚ್ಚು ಕೆಲಸಮಾಡುತ್ತಾರೆಂದು ತಮಗೆ ಹೇಳಲಿಚ್ಛೆಪಡುತ್ತೇನೆ. ಮತ್ತು ಡೈರೆಕ್ಟರ್ ಇಲ್ಲಿಯವರೆಗೆ ಟ್ರಾನ್ಸ್‌ಫರ್ ಮಾಡುತ್ತಾ ಇದ್ದಾರೆ. ಡಾಕ್ಟರುಗಳನ್ನು ಮಿನಿಸ್ಟರುಗಳು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಟ್ರಾನ್ಸ್‌ಫರ್ ಫೈಲ್ ಬಂದಿದ್ದು ಮಿನಿಸ್ಟರ್ ಮನೆಯಲ್ಲಿ ಬಿದ್ದು ೩ ತಿಂಗಳು ಆಯಿತು ಇದನ್ನು ತಮ್ಮ ಗಮನಕ್ಕೆ ತಂದಿದ್ದರೂ ಸಹ ಟ್ರಾನ್ಸ್‌ಫರ್ ಎಫೆಕ್ಟ್ ಆಗಲಿಲ್ಲ. ಡೈರೆಕ್ಟರ ಇದ್ದಾಗ ಮೊದಲು ಏನಾದರೂ ಮಾಡುತ್ತಿದ್ದರು ಅದನ್ನು ಕಸಿದುಕೊಂಡದ್ದು ತಪ್ಪು ಎನಿಸುತ್ತದೆ. ಕಡೆಯದಾಗಿ ನಮ್ಮ ಮೆಡಿಕಲ್ ಕಾಲೇಜ್ ಬಗ್ಗೆ ಶ್ರೀಮಾನ್ ಭಂಗಿಯವರು, ಶ್ರೀಮಾನ್ ಕೃಷ್ಣನ್ ನವರು ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಅವರು ಈ ಮೆಡಿಕಲ್ ಕಾಲೇಜುಗಳನ್ನು ತೆಗೆದುಕೊಂಡು ಬಿಡಬೇಕು ಎಂದು ಹೇಳಿದರು ಈ ಮೆಡಿಕಲ್ ಕಾಲೇಜ್‌ಗಳ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಭಂಗಿಯವರು ಮೆಡಿಕಲ್ ಕಾಲೇಜಿನ ಸೆಲೆಕ್ಷನ್ ಕಮಿಟಿಯಲ್ಲಿ ಕೆಲಸಮಾಡಲಿಕ್ಕೆ ಹತ್ತಿ ಎರಡು ವರ್ಷವಾಯಿತು. ನಾವು ಗೌವರ್ನಿಂಗ್ ಬಾಡಿಯಾಗಿ ಇದ್ದು ಕೊಂಡು ಸೆಲೆಕ್ಷನ್ ಕಮಿಟಿಯಲ್ಲಿ ಸೆಲೆಕ್ಟಾದ ಲಿಸ್ಟ್ ಇದು ಒಬ್ಬ ಮಿನಿಸ್ಟರ್ ಲಿಸ್ಟ್, ಇದು ಇನ್ನೊಬ್ಬ ಮಿನಿಸ್ಟರ್ ಲಿಸ್ಟ್ ಎಂದು ಕೆಲವೊಂದು ಲಿಸ್ಟನ್ನು ನಮಗೆ ಸಬ್ಮಿಟ್ ಮಾಡಿದರು. ಲಿಸ್ಟನ್ನು ಎಗ್ಸಾಸ್ಟ್ ಮಾಡಲಿಕ್ಕೆ ಪ್ರಯತ್ನ ಮಾಡಿದರು ನಮ್ಮಲ್ಲಿ ವೇಕೆನ್ಸಿ ಇದ್ದಿಲ್ಲ. In that list, 50% of the students were not eligible, ತೆಗೆದುಕೊಂಡು ಮಾಡಲೇಬೇಕು ಎಂದು ಒತ್ತಾಯ ಮಾಡಿದರು.

೫೦ ಸೀಟು ಇದ್ದು ೫ ಸೀಟು ಮುನಿಸಿಪಾಲಿಟಿಗೆ ಹೋಗಿ ೪೫ ಸೀಟುಗಳಲ್ಲಿ ೧೩ ಸೀಟುಗಳಿಗೆ ಅಡ್ಮಿಷನ್ ಕೊಟ್ಟಿದ್ದಾರೆಂದು ಹೇಳುತ್ತೇನೆ. ಉಳಿದದ್ದು ಬೊಂಬಾಯಿ ಕರ್ನಾಟಕದವರಿಗೆ, ಗುಲ್ಬರ್ಗದಲ್ಲಿ ಹೈದರಾಬಾದ್ ಕರ್ನಾಟಕದವರಿಗೆ, ದಾವಣಗೆರೆ ಕಾಲೇಜಿನಲ್ಲಿ ಮೈಸೂರಿನವರಿಗೆ, ಮಣಿಪಾಲ್ ಕಾಲೇಜಿನಲ್ಲಿ ಮಂಗಳೂರಿನವರಿಗೆ ಅವರ ಸಲುವಾಗಿ ಕೊಟ್ಟಿದ್ದಾರೆ. ಮಂಗಳೂರು ಕಾಲೇಜು ಪ್ರಾರಂಭವಾಗಿ ೨೦ ವರ್ಷವಾಯಿತು. ಇದು ೨೧ನೇ ವರ್ಷ ನಡೆಯುತ್ತಿದೆ. ದಾವಣಗೆರೆ, ಗುಲ್ಬರ್ಗ, ಬೆಳಗಾಂ, ಈ ಮೂರು ಕಾಲೇಜುಗಳು ಶುರುವಾಗಿ ೧೦ ವರ್ಷವಾಯಿತು. ಈ ೧೦ ವರ್ಷದಲ್ಲಿ ಈ ಕಾಲೇಜುಗಳು ಎಷ್ಟು ಡೆವೆಲಪ್ ಆಗಿದೆ, ಎಷ್ಟು ಚೆನ್ನಾಗಿ ನಡೆದಿವೆ ಎಂದು ನೋಡಬೇಕಾಗಿದೆ. ಇಲ್ಲಿ ಒಂದು ಪೆಟ್ಟಿಗೆ ಇಟ್ಟು ದುಡ್ಡು ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಿದ್ದರು. ಶ್ರೀಮೂನ್, ಭಂಗಿಯವರು ಆ ಕಾಲಕ್ಕೆ ಸೆಲೆಕ್ಷನ್ ಕಮಿಟಿಯಲ್ಲಿ ಇದ್ದರು. ಅಲ್ಲಿ ಪ್ರತಿವರ್ಷ ಗೌರ್ನಿಂಗ್ ಬಾಡಿಯಿಂದ ಎಲೆಕ್ಷನ್ ಆಗುತ್ತದೆ. ಈ ವರ್ಷ ಅವರು ದುರಾದೃಷ್ಟದಿಂದ ಸೆಲೆಕ್ಷನ್ ಕಮಿಟಿಗೆ ಸೆಲೆಕ್ಟ್ ಆಗಿ ಬರಲಿಲ್ಲ. ಅವರು ಸೆಲೆಕ್ಷನ್ ಕಮಿಟಿಯಲ್ಲಿ ಬಾರದೆ ಅಸಮಾಧಾನವಾಗಿದೆಯೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೆಡಿಕಲ್ ಕಾಲೇಜುಗಳಲ್ಲಿ ದುಡ್ಡು ತೆಗೆದುಕೊಳ್ಳುತ್ತಾರೆ ಎಂದು ಏನು ಆಪಾದನೆ ಮಾಡಿದ್ದಾರೆ, ಆ ಅಪಾದನೆಗಳನ್ನು ನಿರಾಕರಿಸುವ ಸಲುವಾಗಿ ಎರಡು ಮಾತುಗಳನ್ನು ಹೇಳಲು ಎದ್ದು ನಿಂತಿದ್ದೇನೆ. ಈ ಮೆಡಿಕಲ್ ಕಾಲೇಜುಗಳ ಬಗ್ಗೆ ಕೆಲವೊಂದು ಜನರು ಏನು ಹೇಳಿದ್ದಾರೆ ಎಂದರೆ ಅಲ್ಲಿ ೫ ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ, ಹೊರಗಿನವರಿಂದ ೩೦ ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ, ಪ್ರತಿವರ್ಷ ಸೀಟು ಕಡಿಮೆಯಾಗುತ್ತದೆ ಎಂದು ಒಂದು ನಿದರ್ಶನ ಹೇಳಿದರು. ಕಾಲೇಜುಗಳಿಗೆ ಅಡ್ಮಿಷನ್ಸ್ ಕಡಿಮೆಯಾಯಿತು ಎಂದು ಹೇಳಿದ್ದಾರೆ. ನಮ್ಮ ಕಾಲೇಜಿನಲ್ಲಿ ಐದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಮೈಸೂರಿನವರು ಬಂದರೂ ಐದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇವೆ.

೬–00 P.M.

ಶ್ರೀ ಕಾಗೋಡು ತಿಮ್ಮಪ್ಪ.—ಐದು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ತೆಗೆದುಕೊಂಡಿರುವ ನಿದರ್ಶನಗಳಿವೆ.

ಶ್ರೀ ಪಿ. ಬಿ. ಪಾಟೀಲ್.— ನಮ್ಮಲ್ಲಿ ಜಾಸ್ತಿ ತೆಗೆದುಕೊಂಡಿಲ್ಲ. ಬೇರೆಯವರು ತೆಗೆದುಕೊಂಡಿದ್ದರೆ ನಾನುನಿಏನು ಮಾಡುವುದಕ್ಕೂ ಬರುವುದಿಲ್ಲ. ನನಗೆ ಸಂಬಂಧಪಟ್ಟ ಕಾಲೇಜಿನಲ್ಲಿ ಆ ರೀತಿಯಾಗಿ ತೆಗೆದುಕೊಂಡಿಲ್ಲ. ಕಾಲೇಜಿಗೆ ಐದು ಸಾವಿರ ರೂಪಾಯಿ ಕೊಟ್ಟು ಬೇರೆಯವರು ೨೦ ಸಾವಿರ ರೂಪಾಯಿ ತೆಗೆದುಕೊಂಡಿದ್ದರೆ ಅದಕ್ಕೆ ನಾನು ಜವಾಬ್ದಾರನಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಐದು ಸಾವಿರ ರೂಪಾಯಿ ಕಾಲೇಜು ಲೆಕ್ಕಕ್ಕೆ ತೆಗೆದುಕೊಂಡು ೨೦ ಸಾವಿರ ಸೊಸೈಟಿಯ ಲೆಕ್ಕಕ್ಕೆ ತೆಗೆದುಕೊಂಡ ನಿದರ್ಶನಗಳಿವೆ.

ಶ್ರೀ ಪಿ. ಬಿ. ಪಾಟೀಲ್.—ನಾನು ಆ ಕಾಲೇಜಿನ ಚೇರ್‌ಮನ್. ಅಲ್ಲಿ ಆ ರೀತಿಯಾಗಿ ತೆಗೆದುಕೊಂಡಿಲ್ಲ. ಬೇರೆ ಕಾಲೇಜುಗಳಲ್ಲಿ ತೆಗೆದುಕೊಂಡಿದ್ದರೆ ಆ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಕಾಲೇಜಿನ ಸ್ಟ್ರೆಂಗ್ತ್ ಕಡಿಮೆಯಾದುದರ ಕಾರಣ ಪಿ.ಯು.ಸಿ. ಕೋರ್ಸ್ ಮತ್ತು ಪಿ.ಪಿ.ಸಿ. ಕೋರ್ಸ್ ಓವರ್‌ಲ್ಯಾಪ್ ಆದುದರ ಕಾರಣದಿಂದ ೧೯೬೨ರಲ್ಲಿ ಪಿ.ಯು.ಸಿ. ಮತ್ತು ಪಿ.ಪಿ.ಸಿ. ಎರಡೂ ಕೋರ್ಸುಗಳವರಿಗೆ ಅಡ್ಮಿಷನ್ ಕೊಟ್ಟುದರಿಂದ ಎಕ್ಸೆಸ್ ಆಯಿತು. ಆ ವರ್ಷ ಡಬಲ್ ಅಡ್ಮಿಷನ್ ಆದುದರಿಂದ, ಕೇಂದ್ರ ಸರ್ಕಾರದವರು ರಿಸ್ಟ್ರಿಕ್ಷನ್ ಹಾಕಿ ೧೫೦ ಇದ್ದ ಸ್ಟ್ರೆಂಗ್ತನ್ನು ೭೫ಕ್ಕೆ ರೆಡ್ಯೂಸ್ ಮಾಡಿದರು. ಇದರಿಂದ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕು ಮತ್ತು ಆಸ್ಪತ್ರೆಯಲ್ಲಿ ೨೦೦ ಬೆಡ್ಸ್ ಪ್ರಾವಿಷನ್ ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಭಂಗಿ.—ನಾನು ಸ್ವಲ್ಪ ವಿವರಣೆ ಕೊಡಬೇಕಾಗಿದೆ. ನಾನು ಏನು ಸಂಗತಿಗಳನ್ನು ಹೇಳಿದ್ದೇನೆ ಅವುಗಳನ್ನು ಸಿದ್ಧ ಮಾಡಲಿಕ್ಕೆ ತಯಾರಾಗಿದ್ದೇನೆ.

† ಶ್ರೀ ಎಂ ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧ ಮಾಡುತ್ತ ಕೆಲವು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಸಚಿವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟುಗಳಲ್ಲಿ ನೋಡಿದರೆ ಮೆಡಿಕಲ್ ಅಂಡ್ ಪಬ್ಲಿಕ್ ಇನ್‌ಸ್ಟಿಟ್ಯೂಷನ್ಸ್ ಏನಿತ್ತು, ಈ ವರ್ಷ ಏನು ಹೆಚ್ಚು ಮಾಡಿದ್ದಾರೆಂದು ನೋಡಿದರೆ ಈ ವರ್ಷಕ್ಕೆ ಹೆಚ್ಚಿಸುವುದಕ್ಕೆ ಏನೇನೂ ಅವಕಾಶ ಮಾಡಿಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಪ್ರೈಮರಿ ಹೆಲ್ತ್ ಸೆಂಟರ್ ಒಂದು ಹೆಚ್ಚು ಮಾಡಿದ್ದಾರೆ, ಮೆಡಿಕಲ್ ಸಬ್‌ಸೆಂಟರ್ಸ್ ೮೫ ಹೆಚ್ಚು ಮಾಡಿದ್ದಾರೆ, ಎಂಪ್ಲಾಯೀಸ್ ಸ್ಕೀಂನಲ್ಲಿ ೨

ಹೆಚ್ಚಿಸಿದ್ದಾರೆ. ವರ್ಷೇ ವರ್ಷೇ ಎಷ್ಟು ಬೇಡಿಕೆ ಹೆಚ್ಚಾಗುತ್ತಿದೆಯೋ ಅಷ್ಟು ಹೆಚ್ಚಿಸುವುದಕ್ಕೆ ಅವಕಾಶ ಮಾಡಿಕೊಂಡಿಲ್ಲ. ಹಾಗೆಯೇ ಕ್ಲಿನಿಕ್ಸ್ ಅಂಡ್ ಅದರ್ ಯೂನಿಟ್ಸ್‌ನಲ್ಲಿ ಎಸ್.ಇ.ಟಿ. ಸೆಂಟರ್ಸ್ ೫೦ ಜಾಸ್ತಿ ಮಾಡಿದ್ದಾರೆ ಹಾಗೂ ಲೆಪ್ರಸಿ ಸಬ್ಸಿಡಿಯಂ ಸೆಂಟರ್ಸ್ ಎರಡು ಇದ್ದುದನ್ನು ತೆಗೆದುಹಾಕಿದ್ದಾರೆ. ಇರುವ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಇದ್ದುದನ್ನು ಕೂಡ ತೆಗೆದು ಹಾಕಬಾರದು. ಅದೇ ರೀತಿ ವೇಕೆನ್ಸಿ ಸ್ಟೇಟ್‌ಮೆಂಟ್ ನೋಡಿದರೆ ಡಾಕ್ಟರುಗಳು ಮತ್ತು ಅನೇಕ ತರಹ ಸಿಬ್ಬಂದಿಯ ವೇಕೆನ್ಸಿಗಳು ಇವೆ. ಹೆಚ್ಚಾಗಿ ಡಾಕ್ಟರುಗಳ ಮತ್ತು ಇತರ ಸಿಬ್ಬಂದಿಯ ಅವಶ್ಯಕತೆ ಇರುವ ಕಾಲದಲ್ಲಿ ಇರುವ ವೇಕೆನ್ಸಿಗಳನ್ನು ಭರ್ತಿ ಮಾಡದೆ ಇದ್ದರೆ ನಿಜವಾಗಿಯೂ ಕೂಡ ಶೋಚನೀಯವಾದುದು. ತದರಿಂದ ಜನಗಳಿಗೆ ಏನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡಲು ಅವಕಾಶವಿಲ್ಲದೆ ಇರುವುದು ಇದರಿಂದ ಗೊತ್ತಾಗುತ್ತದೆ ಹೆಚ್ಚಿನ ಆಸ್ಪತ್ರೆ ಮತ್ತು ಸಿಬ್ಬಂದಿಯನ್ನು ಮಂಜೂರು ಮಾಡದೆ ಇದ್ದರೂ ಕೂಡ ಮಂಜೂರಾಗಿರುವ ಹುದ್ದೆಗಳಿಗೆ ಕೂಡಲೇ ಭರ್ತಿ ಮಾಡಿ ಅನುಕೂಲ ಕಲ್ಪಿಸಿಕೊಡಬೇಕು.

ಫೈನಾನ್ಷಿಯಲ್ ಔಟ್‌ಲೇ ತೆಗೆದುಕೊಂಡರೆ ೧೯೭೪–೭೫ರಲ್ಲಿ ನಾನ್ ಪ್ಲಾನ್ ೨೦೫೧.೩೪ ಲಕ್ಷ ಪ್ರೊವೈಡ್ ಮಾಡಿದ್ದಾರೆ. ಸ್ಟೇಟ್ ಪ್ಲಾನ್‌ನಲ್ಲಿ ಕಡಮೆಯಾಗಿದೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳಿಗೆ ೮೬.೧೧ ಲಕ್ಷ ಮಂಜೂರು ಮಾಡಿದ್ದಾರೆ. ಇದನ್ನು ನೋಡಿದರೆ ಕೇಂದ್ರದಿಂದ ಪಡೆಯಬೇಕೋ, ಸ್ಟೇಟ್ ಪ್ಲಾನ್‌ನಲ್ಲಿ ಹೆಚ್ಚು ಒದಗಿಸಿಕೊಳ್ಳಬೇಕೋ ಅದಕ್ಕೆ ಸಾಕಾದಷ್ಟು ಅವಕಾಶವನ್ನು ಮಾಡಿಕೊಂಡಿಲ್ಲ. ಇದರಿಂದ ಈ ವರ್ಷಕ್ಕೆ ಆರೋಗ್ಯ ಇಲಾಖೆಯ ಕೆಲಸಕ್ಕೆ ಬಹಳ ಧಕ್ಕೆ ಬರುವುದಕ್ಕೆ ಅವಕಾಶವಿದೆ.

ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಸುಮಾರು ೫೦ ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೂ ಡೊನೇಷನ್ ತೆಗೆದುಕೊಳ್ಳುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇಷ್ಟು ಭಾರಿ ಮೊತ್ತವನ್ನು ಡೊನೇಷನ್ ಕೊಟ್ಟು ಅಪಾಯಿಂಟ್‌ಮೆಂಟಿಗೆ ಬಂದರೆ, ಅವರು ಡಾಕ್ಟರಾಗುವುದಕ್ಕೆ ಖರ್ಚಾಗಿರುವ ಹಣವನ್ನು ಪೂರ್ಣವಾಗಿ ಹಿಂದಕ್ಕೆ ಪಡೆಯುವುದಕ್ಕೆ ಪ್ರಯತ್ನ ಮಾಡಿಯೇ ಮಾಡುತ್ತಾರೆ. ಆದುದರಿಂದ ಸಿನ್ಸಿರಿಟಿಗೆ ಅವಕಾಶವಿರುವುದಿಲ್ಲ. ಅವರು ಎಷ್ಟು ಖರ್ಚು ಮಾಡಿರುತ್ತಾರೆ ಅದನ್ನು ಯಾವ ರೀತಿಯಿಂದಲಾದರೂ ಪಡೆಯಬೇಕೆಂದು ಪ್ರಯತ್ನ ಮಾಡುತ್ತಾರೆ. ಆದುದರಿಂದ ಖಾಸಗಿ ಕಾಲೇಜುಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಂಡು ಡೊನೇಷನ್ ಪದ್ಧತಿಯನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಬೇಕು.

ಸೀನಿಯಾರಿಟಿ ಲಿಸ್ಟ್ ಪ್ರಕಾರ ಸರಿಯಾದ ರೀತಿಯಲ್ಲಿ ಪ್ರಮೋಷನ್ಸ್ ಸಿಕ್ಕದೆ ಅಸಮಾಧಾನ ಬಂದು ಸರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಒಂದೊಂದು ಡಿಪಾರ್ಟ್‌ಮೆಂಟಿನಲ್ಲೂ ಪ್ರಮೋಷನ್ ಕೊಡುವಾಗ ಮತ್ತು ಇರತಕ್ಕ ವೇಕೆನ್ಸಿಯನ್ನು ಭರ್ತಿ ಮಾಡುವಾಗ ಒಂದೇ ರೀತಿಯಾದ ನಿಯಮಗಳನ್ನು ಅನುಸರಿಸದೆ ಬೇರೆ ಬೇರೆ ರೀತಿಯಲ್ಲಿ ಮಾಡುವುದರಿಂದ ಅನ್ಯಾಯಗಳಾಗುತ್ತವೆ. ಅದು ಡಾಕ್ಟರುಗಳ ಮೇಲೆ ಪರಿಣಾಮವನ್ನುಂಟುಮಾಡಿ ಅವರು ನ್ಯಾಯವಾಗಿ ಕೆಲಸ ಮಾಡಲು ತೊಂದರೆಯಾಗುತ್ತದೆ ಅಲ್ಲದೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಡಾಕ್ಟರುಗಳಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡಲು ಅವಕಾಶ ಕೊಟ್ಟಿರುವುದರಿಂದ ಬೇರೆ ಬೇರೆ ನರ್ಸಿಂಗ್ ಹೋಂಗಳಲ್ಲಿ ದಿನಕ್ಕೆ ಒಂದೆರಡು ಗಂಟೆಕಾಲ ಕೆಲಸ ಮಾಡಿ ಸಾವಿರಾರು ರೂಪಾಯಿ ಸಂಪಾದನೆ ಮಾಡುವ ಅವಕಾಶವಿರುತ್ತದೆ. ಇದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಕೆಲಸ ನಡೆಯುವುದಿಲ್ಲ. ಪ್ರೈವೇಟಾಗಿ ಮನೆಯಲ್ಲಿ ಹೋಗಿ ನೋಡಿದ ಪೇಷೆಂಟುಗಳಿಗೆ, ದುಡ್ಡು ಕೊಟ್ಟವರಿಗೆ ಮಾತ್ರ ಹೆಚ್ಚು ಅನುಕೂಲವಾಗುತ್ತದೆಯೇ ಹೊರತು ಬಡವರಿಗೆ ಆಸ್ಪತ್ರೆಗಳಲ್ಲಿ ಅನುಕೂಲಗಳು ದೊರೆಯುವುದಿಲ್ಲ. ಡಾಕ್ಟರುಗಳ ಕುಂದುಕೊರತೆಗಳನ್ನು ನ್ಯಾಯವಾಗಿ ಪರಿಹರಿಸಿ, ಅವರಿಗೆ ಕೊಡಬೇಕಾದ ಫೆಸಿಲಿಟೀಸ್, ಪ್ರಮೋಷನ್ ಇತ್ಯಾದಿಗಳನ್ನು ಸರಿಯಾಗಿ ಕೊಟ್ಟು ಅವರಿಂದ ನ್ಯಾಯವಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಬ್ಲಡ್ ಬ್ಯಾಂಕ್ ಎಂದು ಮಾಡಿಕೊಂಡು ಬ್ಲಡ್‌ಕಲೆಕ್ಟ್ ಮಾಡಲು ಒಂದು ಬಾಟಲಿಗೆ ೧೦ ರೂಪಾಯಿಗಳನ್ನು ಕೊಡುತ್ತಾರೆ. ಇದು ಬಹಳ ವರ್ಷಗಳ ಹಿಂದೆ ಗೊತ್ತು ಮಾಡಿರತಕ್ಕದ್ದು. ಈಗ ಖಾಸಗಿ ಆಸ್ಪತ್ರೆಗಳಲ್ಲಿ ಒಂದು ಬಾಟಲಿಗೆ ೪೦–೫೦ ರೂಪಾಯಿಗಳ ತನಕ ಕಲೆಕ್ಟ್ ಮಾಡುತ್ತಿದ್ದಾರೆ, ಅವರು ರೇಟುಗಳನ್ನು ಹೆಚ್ಚು ಮಾಡಿದ್ದಾರೆ. ಆದುದರಿಂದ ರಕ್ತವನ್ನು ಕೊಡುವವರು ಪ್ರೈವೇಟ್ ಆಸ್ಪತ್ರೆಗಳಿಗೆ ಜಾಸ್ತಿ ಹೋಗುತ್ತಾರೆಯೇ ಹೊರತು ಸರ್ಕಾರಿ ಆಸ್ಪತ್ರೆಗಳಿಗೆ ಬರುತ್ತಿಲ್ಲ.

ಇದರಿಂದ ರಕ್ತಸಿಗದೇ ಎಷ್ಟೋ ಜನರು ಸತ್ತಿದ್ದಾರೆ. ಹೆರಿಗೆ ಆಸ್ಪತ್ರೆಯಲ್ಲಿ ರಕ್ತದ ಅವಶ್ಯಕತೆ ಬಹಳವಿದೆ. ಸ್ಟಾಕ್‌ನಲ್ಲಿರುವಂತಹ ರಕ್ತವನ್ನು ಯಾರು ದುಡ್ಡು ಕೊಡುತ್ತಾರೋ ಅಂತಹವರಿಗೆ ಮಾತ್ರ ಕೊಡುತ್ತಾರೆ. ಇದರಿಂದ ಬಡವರಿಗೆ ರಕ್ತ ಸಿಗುತ್ತಿಲ್ಲ., ಈ ವಿಚಾರ ನನ್ನ ಗಮನಕ್ಕೆ ಕೆಲವರು ತಂದಾಗ, ನಾನು ಸಂಬಂಧಪಟ್ಟ ಡಾಕ್ಟರ್‌ಗಳಿಗೆ ಅವಶ್ಯಕತೆ ಇರುವವರಿಗೆ ರಕ್ತ ಕೊಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳಿದ್ದಕ್ಕೆ, ತಮಗೆ ಬರುವ ದುಡ್ಡು ತಪ್ಪಿಹೋಗುತ್ತದೆಂದುಕೊಂಡು ತಮ್ಮ ಬಳಿ ರಕ್ತವೇ ಇಲ್ಲ ಎಂದು ಹೇಳಿಬಿಟ್ಟರು. ಇದರಿಂದ ಎಷ್ಟೋ ಜನ ಬಡ ರೋಗಿಗಳು ಸತ್ತಿದ್ದಾರೆ. ಈ ಅಂಶವನ್ನು ನಾನು ಬೋರ್ಡ್ ಆಫ್ ವಿಜಿಟರ್ಸ್ ಗಮನಕ್ಕೆ ತಂದೆ. ಆದರೆ ಅವರೂ ಸಹ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾನು ಬರೆದ ಕಾಗದಕ್ಕೆ ಉತ್ತರವನ್ನೂ ಸಹ ಕೊಟ್ಟಿಲ್ಲ.. ಮೈಸೂರಿನ ನಜರ್‌ಬಾದ್‌ನಲ್ಲಿ ನಾಗಮ್ಮ ಪೆರುಮಾಳ್‌ಚೆಟ್ಟಿ ಹೆರಿಗೆ ಆಸ್ಪತ್ರೆ ಇದೆ, ಅಲ್ಲಿ ಡಾಕ್ಟರ್ಸ್, ಆಯಾ, ನರ್ಸ್ ಇವರಿಗೆಲ್ಲ ಇಷ್ಟಿಷ್ಟು ಎಂದು ದುಡ್ಡು ಕೊಡಬೇಕು, ಇಲ್ಲದಿದ್ದರೆ ಸರಿಯಾಗಿ ಟ್ರೀಟ್‌ಮೆಂಟ್ ಕೊಡುವುದಿಲ್ಲ, ದುಡ್ಡು ಕೊಡದಿದ್ದರೆ ಹೆರಿಗೆ ಸಮಯದಲ್ಲಿ ಇಲ್ಲದ ಕಿರುಕುಳ ಕೊಡುತ್ತಾರೆ. ಇದೇ ಕಾರಣದಿಂದ ಒಂದು ಮಗು ಸತ್ತು ಹೋಯಿತು, ಈ ವಿಚಾರಗಳನ್ನೆಲ್ಲಾ ನಾನು ಮಾನ್ಯ ಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದ್ದೇನೆ ಮತ್ತು ಅಲ್ಲಿಯ ಜನರು ಸಹ ಮಾನ್ಯ ಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದ್ದಾರೆ. ಆದರೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಇಂತಹ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಇಂತಹ ಪ್ರಕರಣಗಳು ಇನ್ನೂ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೆ.ಆರ್ ನಗರ ತಾಲ್ಲೂಕ್ ಹತ್ತಿರ ಅಡ್ಯ ಎಂಬ ಗ್ರಾಮವಿದೆ. ಆ ಗ್ರಾಮದಲ್ಲಿರುವ ಆಸ್ಪತ್ರೆಯ ಡಾಕ್ಟರ್ ಅವರು ಆಸ್ಪತ್ರೆಯ ಕೆಲಸಕ್ಕೆಂದು ನೇಮಕ ಮಾಡಿರುವ ಕ್ಲಾಸ್ ಫೋರ್ ಸರ್ವೆಂಟ್‌ನ್ನು ತಮ್ಮ ಮನೆಯ ಕೆಲಸಕ್ಕೆ ಉಪಯೋಗಿಸಿ ಕೊಳ್ಳುತ್ತಿದ್ದಾರೆ, ಮನೆಯ ಕೆಲಸ ಮಾಡುವುದಿಲ್ಲವೆಂದು ಪ್ರತಿಭಟನೆ ಮಾಡಿದರೆ ಇಲ್ಲದ ಕಿರುಕುಳ ಕೊಡುತ್ತಾರೆ. ಮನೆಯ ಕೆಲಸ ಮಾಡದಿದ್ದರೆ ರಾಜೀನಾಮೆ ಕೊಟ್ಟು ಹೋಗು ಎಂದು ಹೇಳುತ್ತಾರೆ, ಇವರ ಕಿರುಕುಳ ತಡೆಯಲಾರದೆ ಎಷ್ಟೋ ಜನರು ಕೆಲಸ ಬಿಟ್ಟುಬಿಟ್ಟಿದ್ದಾರೆ. ಅವರು ಕೊಡುವ ಕಿರುಕುಳದ ಕಾರಣ ಯಾರೂ ಸಹ ಅಲ್ಲಿಗೆ ಹೋಗುತ್ತಿಲ್ಲ. ಇದರ ಕಡೆ ಮಾನ್ಯ ಮಂತ್ರಿಗಳು ಸ್ವಲ್ಪ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಾಂಪೌಂಡರುಗಳಿಗೆ ತಕೋಳ ವೇತನ ಶ್ರೇಣಿಯನ್ನು ಇನ್ನೂ ಕೊಟ್ಟಿಲ್ಲ, ಆ ಇದರಿಂದ ಅವರಿಗೆ ಅಸಮಾಧಾನವಾಗಿದೆ. ಅವರಿಗೂ ಸಹ ತಕೋಳ ವೇತನ ಶ್ರೇಣಿಯನ್ನು ಕೊಟ್ಟು ಅವರ ಅಸಮಾಧಾನವನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ.

ಇನ್ನು ಇಂಡಿಯನ್ ಮೆಡಿಸನ್ ಬಗ್ಗೆ ಹೇಳಬೇಕೆಂದರೆ, ಸ್ಟೈಫಂಡರೀ ಸ್ಕೀಮ್ ಮೇರೆಗೆ [illegible] ಜನ ಡಾಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡರು. ಈಗ ಅವರ ಸೇವೆಯನ್ನು ಡಿಸ್‌ಕಂಟಿನ್ಯೂ ಮಾಡಿದ್ದಾರೆ. ಅವರು ರಾಜ್ಯದ ಯಾವುದೇ ಭಾಗಕ್ಕೆ ಬೇಕಾದರೂ ಹೋಗಿ ಕೆಲಸ ಮಾಡಲು ಸಿದ್ಧರಾಗಿದ್ದಾರೆ. ಆದರೂ ಅವರಿಗೆ ಕೆಲಸ ಕೊಟ್ಟಿಲ್ಲ, ಅಲೋಪತಿಕ್ ಡಾಕ್ಟರ್‌ಗಳಿಗೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತದೋ, ಅದೇ ಸೌಲಭ್ಯಗಳನ್ನು ಇಂಡಿಯನ್ ಮೆಡಿಸನ್ ಡಾಕ್ಟರ್‌ಗಳಿಗೂ ಒದಗಿಸಿಕೊಡಬೇಕು ಮತ್ತು ಅವರ ಒಂದು ಕುಂದುಕೊರತೆಗಳನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಈಗ ಕೆಲಸದಿಂದ ತೆಗೆದಿರುವವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ). — ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದ ಆರೋಗ್ಯ ಸಚಿವರಾದ ಶ್ರೀಮಾನ್ ಸಿದ್ಧವೀರಪ್ಪನವರು ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಶ್ರೀಮಾನ್ ಸಿದ್ಧವೀರಪ್ಪನವರಿಗೆ ಈ ಸದನದ ಮೂಲಕ ೩ ಕಾಸನ್ನೂ ಕೊಡುವುದಕ್ಕೆ ನಾವು ಸಿದ್ಧವಾಗಿಲ್ಲ. ಏಕೆಂದರೆ ಅವರು ಈ ಹಿಂದೆ ಹೇಳಿದಂತಹ ಯಾವ ಕೆಲಸವನ್ನೂ, ಮಾಡಿಕೊಟ್ಟಿಲ್ಲ ಇಲ್ಲಿ ಆರೋಗ್ಯ ಇಲಾಖೆಯ ಜೊತೆಗೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸಹ ಸೇರಿಕೊಂಡಿದೆ. ಇದರಿಂದ ಯಾರು ಯಾವ ಕೆಲಸ ಮಾಡಬೇಕು ಎಂದು ಅರ್ಥವಾಗದೆ ಕನ್‌ಫ್ಯೂಜನ್‌ನಲ್ಲಿದೆ. ಆದಕಾರಣ ಈ ಇಲಾಖೆಗಳನ್ನು ಪ್ರತ್ಯೇಕವಾದಂಥ ಮತ್ತು ಸ್ವತಂತ್ರವಾದಂಥ ಇಲಾಖೆಗಳನ್ನಾಗಿ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಅಧಿಕಾರದಲ್ಲಿರುವ ಆಡಳಿತ ಕಾಂಗ್ರೆಸ್‌ನವರು ಸಮಾಜವಾದದ ಬಗ್ಗೆ ಮಾತನಾಡುತ್ತಾರೆ, ಆದರೆ ಇಂದಿಗೂ ಸಹ ಆಸ್ಪತ್ರೆಗಳಲ್ಲಿ ಜನರಲ್ ವಾರ್ಡ್ ಮತ್ತು ಸ್ಪೆಷಲ್ ವಾರ್ಡ್ ಎಂದು ಎರಡು ತರಹ ವಾರ್ಡ್‌ಗಳಿವೆ, ಇದು ಸಮಾಜವಾದಕ್ಕೆ ಲಾಗೂ ಆಗುತ್ತದೆಯೋ ಎಂಬುದನ್ನು ತಿಳಿಸಬೇಕು. ಈ ಒಂದು ತಾರತಮ್ಯವನ್ನು ನಿವಾರಣೆ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ ? ಯಾವ ಸ್ಪೆಷಲ್ ವಾರ್ಡ್

ಬೇಕಾಗಿಲ್ಲ, ಜನರಲ್ ವಾರ್ಡ್ ಒಂದಿದ್ದರೆ ಸಾಕು, ಸಮಯ ಬಂದಾಗ ನಾನಾಗಲೀ ತಾವಾಗಲೀ ಜನರಲ್ ವಾರ್ಡ್‌ಗೇ ಹೋಗಿ ಸೇರಿಕೊಳ್ಳೋಣ, ಆಗ ಅಲ್ಲಿಯ ಕಷ್ಟಸುಖಗಳು ಏನು ಎಂಬುದು ಅರ್ಥವಾಗುತ್ತದೆ. ಮುಖ್ಯವಾಗಿ ಈ ಸ್ಪೆಷಲ್ ವಾರ್ಡ್ ಮತ್ತು ಖಾಸಗೀ ಆಸ್ಪತ್ರೆಗಳನ್ನು ರದ್ದು ಮಾಡಬೇಕು. ಆ ಮೂಲಕ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಮಾಜವಾದದ ದೃಷ್ಟಿಯಿಂದ ಖಾಸಗೀ ಆಸ್ಪತ್ರೆಗಳನ್ನೆಲ್ಲಾ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ

ಇನ್ನು ಮಾನ್ಯ ಆರೋಗ್ಯ ಸಚಿವರು ಹೇಳತಕ್ಕಂಥ ಮಾತುಗಳಿಗೆ ಅನೇಕ ಜನರು ಮರುಳಾಗುತ್ತಾರೆ ಆ ರೀತಿ ಮರುಳಾಗುವವರ ಪೈಕಿ ನಾನೂ ಒಬ್ಬ. ಅವರು ಪ್ರತಿ ಆಸ್ಪತ್ರೆಗೂ ಹತ್ತು ಸಾವಿರ ರೂಪಾಯಿಗಳ ಔಷಧವನ್ನು ಕಳುಹಿಸಿಕೊಡಲಾಗುವುದೆಂದು ಹೇಳುತ್ತಾರೆ ಅವರು ನನ್ನ ಜೊತೆಯಲ್ಲಿ ಯಾವ ಕಾಲದಲ್ಲಿ ಯಾದರೂ ನೋಡಲಿ ಬ್ಯಾಂಡೇಜ್ ಟಿಂಚರೆ ಮುಂತಾದ ಯಾವುದೇ ಔಷಧಗಳೂ ಸಹ ಅಲ್ಲಿರುವುದಿಲ್ಲ ಬೇಧಿ ಉಪ್ಪನ್ನು ಮಾತ್ರ ಮೂಟೆಗಟ್ಟಲೆ ಕಳಿಸಿಕೊಡುತ್ತಾರೆ ನಿಜವಾಗಿಯೂ ಹತ್ತು ಸಾವಿರ ರೂಪಾಯಿಗಳ ಔಷಧವನ್ನು ಪತ್ರಿ ಆಸ್ಪತ್ರೆಗೂ ಕಳುಹಿಸಿಕೊಡುತ್ತಾರೆಯೇ ಎಂಬುದನ್ನು ಈ ವಯಸ್ಸಿನಲ್ಲಿ ಅವರು ಸತ್ಯವಾಗಿ ಹೇಳಬೇಕು.,

ಇನ್ನೊಂದು ಮುಖ್ಯವಾದ ಅಂಶವೆಂದರೆ, ನಾನು ಈ ಸದನಕ್ಕೆ ಬಂದಾಗಿನಿಂದ ಕೇಳುತ್ತಿದ್ದೇನೆ, ಏನೆಂದರೆ ನಮ್ಮ ತೀರ್ಥಹಳ್ಳಿಗೆ ಒಂದು ಎಕ್ಸ್‌ರೇ ಯಂತ್ರ ಬೇಕು ಎಂದು ಆ ಬಗ್ಗೆ ಅವರಲ್ಲಿ ಪ್ರಾರ್ಥನೆ ಮಾಡಿದ್ದಾಯಿತು, ಕೀರ್ತನೆ ಮಾಡಿದ್ದಾಯಿತು, ಅದರೂ ಆ ಯಂತ್ರ ಬರಲಿಲ್ಲ, ಮಾನ್ಯ ಸಿದ್ದವೀರಪ್ಪನವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟು ಅಧಿಕಾರ ಗದ್ದುಗೆಯಿಂದ ಕೆಳಗಿಳಿಯಬೇಕೆಂದು ಹೇಳುತ್ತೇನೆ ಏಕೆಂದರೆ ಅವರು ಬಹಿರಂಗ ಸಭೆಯಲ್ಲಿ ಸತ್ಯಕ್ಕೆ ದೂರವಾದಂಥ ಮಾತನ್ನು ಆಡಿದ್ದಾರೆ ಮತ್ತು ಭರವಸೆಯನ್ನು ಕೊಟ್ಟಿದ್ದಾರೆ, ಅಷ್ಟೂ ಸಾಲದು ಎಂದು ನಮ್ಮ ಊರಿನವರನ್ನು ತಮ್ಮ ಊರಿಗೆ ಕರಿಸಿಕೊಂಡು

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವುದೆಲ್ಲಾ ಸುಳ್ಳು ಆದರೆ ತೀರ್ಥಹಳ್ಳಿ ತಾಲ್ಲೂಕ್‌ನಲ್ಲಿರುವ ಜನರಿಗೆ ಯಾರ ಮೇಲಾದರು ಅಭಿಮಾನವಿದ್ದರೆ ಅದು ಮಾನ್ಯ ಲಿಂಗಪ್ಪನವರ ಮೇಲೆ ಎಂದು ಹೇಳಬಹುದು ಅಲ್ಲಿಯ ಜನರಿಗೆ ಏನು ಹೇಳಿದ್ದೇನೆಂದರೆ, ಈ ವಿಚಾರದಲ್ಲಿ ಮಾನ್ಯ ಲಿಂಗಪ್ಪನವರ ಮೈಮೇಲೆ ಏತಕ್ಕೆ ಬೀಳುತ್ತೀರಿ, ಅದು ಸ್ಯಾಂಕ್ಷನ್ ಆಗಿದೆ ಎಂದು ಅದರ ರೇಟ್ ೭ ಸಾವಿರ ರೂಪಾಯಿಗಳಷ್ಟು ಜಾಸ್ತಿಯಾಗಿರುವುದರಿಂದ ಅದು ಬರುವುದು ನಿಧಾನವಾಗಿದೆ. ಅದರ ರೇಟ್ ಜಾಸ್ತಿಯಾದರೂ ಚಿಂತೆಯಿಲ್ಲ, ಅದನ್ನು ಕೊಟ್ಟುಬಿಡಿ ಎಂದು ಆರ್ಥಿಕ ಇಲಾಖೆಯವರಿಗೆ ಹೇಳಿದ್ದೇನೆ. ನಿಮ್ಮ ಊರಿಗೆ ಎಕ್ಸ್‌ರೇ ಯಂತ್ರ ಬರುತ್ತದೆ, ಮತ್ತು ನಾನು ಮಂತ್ರಿಯಾಗಿರುವಾಗಲೇ ಅದು ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.-ಅಂದರೆ ಇನ್ನೂ ಎರಡು ವರ್ಷ ಕಾಯಬೇಕು ಎಂದು ಕಾಣುತ್ತದೆ. ಒಂದೇ ರೀತಿ ಬರುತ್ತದೆ ಎಂದು ಮೂರು ವರ್ಷಗಳಿಂದಲೂ ಹೇಳುತ್ತಲೇ ಇದ್ದೀರಿ.

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಊರಿಗೆ ಕಳುಹಿಸಬೇಕೆಂದು ಏರ್ಪಾಡು ಮಾಡಿದ್ದೆವು. ಆದರೆ, ಆ ಊರಿನ ಜನ ಘರಾವೋ ಮಾಡಿ ನಿಲ್ಲಿಸಿದರು.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಊರಿನಲ್ಲಿ ಒಬ್ಬರು ಇದ್ದಾರಲ್ಲಾ ಅವರ ಪ್ರಕಾರ ಮಾಡಿಸಿದರು, ಕೊನೇಪಕ್ಷ ಎಲ್ಲಿಯಾದರೂ ಸೆಕೆಂಡ್ ಹ್ಯಾಂಡ್ ಇದ್ದರೂ ಚಿಂತೆ ಇಲ್ಲ, ೩-೬ ತಿಂಗಳ ಮಟ್ಟಿಗೆ ಕಳುಹಿಸಿಕೊಡಿ. ಹೊಸದಾಗಿ ಬಂದಮೇಲೆ ನಂತರ ಅದನ್ನು ಕಳುಹಿಸಿಕೊಡಿ. ತಾವು ಸೆಕೆಂಡ್ ಹ್ಯಾಂಡ್ ಅದೂ ಸೆಕೆಂಡ್ ಹ್ಯಾಂಡ್... ... ...

ಶ್ರೀ ಎಚ್. ಸಿದ್ದವೀರಪ್ಪ,—ನಾನು ಸೆಕೆಂಡ್ ಹ್ಯಾಂಡ್ ಅಲ್ಲ. ಫಸ್ಟ್ ಹ್ಯಾಂಡ್‌ನಲ್ಲಿ ಫಸ್ಟ್.

ಶ್ರೀ ಕೋಣಂದೂರು ಲಿಂಗಪ್ಪ.—ಈ ಇಲಾಖೆಗೆ ಕಾಯಕಲ್ಪವಾಗಿದೆ, ತಮಗೂ ಕಾಯಕಲ್ಪವಾಗಿದೆ ತಾವು ದೀರ್ಘಕಾಲ ಆರೋಗ್ಯವಾಗಿರಿ ಜನರಿಗೂ ಆರೋಗ್ಯವನ್ನು ಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ, (ರಾಮನಗರ),—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಕಾಲ ಕಡಮೆ ಇದ್ದರೂ ಪ್ರಸ್ತಾಪ ಮಾಡುವುದು ಉಚಿತ ವೆಂದು ತಿಳಿದು ಹೇಳುತ್ತೇನೆ. ಎಣ್ಣೆ, ಮಣ್ಣು ಇದರ ಲೇಪಕ್ಕೆ ಪ್ರಿಯವಾಗಿದ್ದಂಥ ಹಿರಿಯ ಸಚಿವ ಸಿದ್ಧವೀರಪ್ಪನವರು ದಕ್ಷತೆಗೆ ಹೆಸರು ಆಗಿದ್ದಂಥ ವ್ಯಕ್ತಿಗೆ ಅಲೋಪತಿ ಬಗ್ಗೆ

ಅಭಿಮಾನ ತಮ್ಮ ಅಂತರಾತ್ಮದಲ್ಲಿ ಹುಟ್ಟಲಿಕ್ಕೆ ಪರಮಾತ್ಮ ತಮಗೆ ಕಾಯಿಲೆ ಕೊಟ್ಟು. ಆದರಲ್ಲಿ ಅಭಿಮಾನಿಗಳನ್ನಾಗಿ ಮಾಡಿದಾನೆ. ಮೊಟ್ಟಮೊದಲಿಗೆ ಪರಮಾತ್ಮನನ್ನು ವಂದಿಸಿ ಅಧ್ಯಕ್ಷರ ಅಪ್ಪಣೆ ಕೇಳಿ, ಎರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಹೇಗೆ ತಮ್ಮ ಹೃದಯಪರಿವರ್ತನೆಯಾಯಿತೋ, ಹಾಗೆಯೇ ತಮ್ಮ ಇಲಾಖೆಯೂ ಕೂಡ ಪರಿವರ್ತನೆಯಾಗುವುದು ಅವಶ್ಯಕ. ತಮ್ಮದು ಬೃಹದಾಕಾರವಾದ ಇಲಾಖೆ. ಈ ಇಲಾಖೆಯನ್ನು ಯಾರಾದರೂ ನಂಬಿಕಸ್ತರು ಭಗವಂತನಲ್ಲಿ ಪ್ರೀತಿ ಇಟ್ಟಂಗೆ, ತಮ್ಮ ಇಲಾಖೆಯ ವ್ಯಕ್ತಿಗಳ ಫೋಟೋವನ್ನು ದೇವರ ಮನೆಯಲ್ಲಿ ಇಟ್ಟು ಪೂಜೆ ಮಾಡಬೇಕಾದುದು ಅವಶ್ಯಕ. ಅಂತಹ ವ್ಯಕ್ತಿಗಳ ಬಗ್ಗೆ ಸರಕಾರ ಮತ್ತು ಸಮಾಜದ ವ್ಯಕ್ತಿಗಳು ಸಹ ಗೌರಿಸುವುದು ಅಧ್ಯ ಕರ್ತವ್ಯ. ತಮ್ಮ ಇಲಾಖಾಧಿಕಾರಿಗಳು ಗೌರವಕ್ಕೆ ಪಾತ್ರರಾಗಬೇಕಾದುದು ಅವರ ಅಧ್ಯಕರ್ತವ್ಯ. ಬಂದೆರಡು ಲೋಪಕೋಟ್ಕರ ಈ ಇಲಾಖೆಯನ್ನು ತೆಗಳುವುದು ದೊಡ್ಡದಲ್ಲ. ಇದು ಒಂದು ದೊಡ್ಡ ಸಮುದ್ರ ಇದ್ದಹಾಗೆ ಇದೆ. ತಮ್ಮ ಇಲಾಖೆ ಮಂತ್ರಿಯಿಂದ, ಡೈರೆಕ್ಟರ್‌ರಿಂದ ೫ ಜನ ಜಾಯಿಂಟ್ ಡೈರೆಕ್ಟರ್‌ರಿಂದ, ನಾಲ್ಕು ಜನ ರೀಜನಲ್ ಡೈರೆಕ್ಟರಿಂದ ಮತ್ತು ಸಿಬ್ಬಂದಿಯಿಂದ ಹೆಚ್ಚು ದಕ್ಷ ಆಡಳಿತಗಾರರು ಇರತಕ್ಕ ಈ ಇಲಾಖೆ ಶೋಭಾಯಮಾನವಾಗಿ ನಡೆಯಬೇಕಾದುದು ಅವಶ್ಯಕ. ಆದರೆ ತಾವು ಇಲ್ಲಿ ಅನೇಕಸಾರಿ ಹೇಳಿದ್ದೀರಿ, ನಾವು ಅನೇಕ ಸಾರಿ ಗೋಳಿಟ್ಟಿದ್ದೇವೆ ವೈದ್ಯರು ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಿಲ್ಲ. ಗ್ರಾಮಾಂತರ ಪ್ರದೇಶದ ವೈದ್ಯಕೀಯ ಸೌಲಭ್ಯ ಬಹಳ ಕೀಳು ದರ್ಜೆಯಲ್ಲಿದೆ. ಕಾರಣವಾದರೂ ಏನು ಎಂದು ಸರಕಾರ ಮತ್ತು ನಾವು ಸೂಕ್ಷ್ಮವಾಗಿ ವಿಮರ್ಶೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳನ್ನು ವೈದ್ಯರಿಗೆ ಆಕರ್ಷಕವಾಗಿರತಕ್ಕ ಸನ್ನಿವೇಶಗಳಿಗೆ ನಾವು ಮಾಪಾಡು ಮಾಡದೇ ಹೋದರೆ, ಪ್ರಾಯಶಃ ಯಾರು ಹೋಗುವುದಿಲ್ಲ ಎಂದು ಅವರಿಗೆ ಶಿಕ್ಷೆ ಮಾಡುವುದು ಉಚಿತವಲ್ಲ, ಆದುದರಿಂದ, ನಾನು ಪ್ರಾರ್ಥನೆ ಮಾಡುತ್ತೇನೆ, ಎಲ್ಲಾ ಗ್ರಾಮಾಂತರ ಆಸ್ಪತ್ರೆಗಳಲ್ಲಿ ಮೊದಲನೆಯದಾಗಿ ಕುಡಿಯುವನೀರಿನ ಸೌಲಭ್ಯ ಆಗಬೇಕು. ತೀವ್ರವಾಗಿ ರಿಗ್ಸ್‌ಗಳನ್ನು ಹಾಕಬೇಕು. ಡಾಕ್ಟರ್ ಮತ್ತು ಅಲ್ಲಿ ಇರತಕ್ಕ ಸಿಬ್ಬಂದಿ ವರ್ಗಕ್ಕೆ ಆಸ್ಪತ್ರೆಯ ಆವರಣದಲ್ಲೇ ಗ್ರಾಮಾಂತರ ಪ್ರದೇಶದಲ್ಲಿ ವಸತಿ ಸೌಕರ್ಯ ಆಗಬೇಕು. ತಾವು ಯಾವ ಖರ್ಚನ್ನಾದರೂ ಖೋತಾ ಮಾಡಿ, ಇದನ್ನು ಜರೂರಾಗಿ ಮಾಡಬೇಕೆಂದು ಹೇಳುತ್ತೇನೆ. ಎಕ್ಸ್‌ರೇ ಪ್ಲಾಂಟ್ ವಿಷಯದಲ್ಲಿ ಒಂದು ಬೊಬ್ಬೆ ಈ ರಾಜ್ಯದಲ್ಲಿ ಎದ್ದಿದೆ. ನಾನು ಸರಕಾರಕ್ಕೆ ಸಲಹೆ ಮಾಡುವುದು ಇಷ್ಟೆ. ಹೇಗಾದರೂ ಪ್ರಾಂತ್ಯ ಪಟ್ಟು ಒಬ್ಬ ಸ್ಪೆಷಲ್ ಆಫೀಸರನ್ನು ಸಿಬ್ಬಂದಿ ವರ್ಗದ ಜೊತೆಗೆ ಅಳವಡಿಸಿ, ತೀವ್ರವಾಗಿ ಒಂದು ಪ್ಲಾಂಟ್ ಕೆಟ್ಟು ಹೋದರೆ ಅದನ್ನು ಕೂಡಲೇ ರಿಪೇರಿ ಮಾಡಿ ಮತ್ತು ಪ್ಲಾಂಟ್ ಅಗತ್ಯ ಇರುವ ಕಡೆ ಒದಗಿಸತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಈ ಸರಕಾರದ ಬೊಕ್ಕಸದ ಹಣವನ್ನು ನಂಬಿದರೆ ಈ ಔಷಧಿ ವ್ಯವಸ್ಥೆ ಈ ರಾಜ್ಯದಲ್ಲಿ ಆಗುವುದಿಲ್ಲ. ನಮ್ಮಲ್ಲಿ ಅನೂಚಾನವಾಗಿ ದಾನಿಗಳು ಇದ್ದಾರೆ, ದಾನಿಗಳು ಕೊಟ್ಟಂಥ ಹೆಸರುಗಳನ್ನು ನೋಡುತ್ತಿದ್ದೇವೆ, ಆದುದರಿಂದ, ಈ ಒಂದು ವ್ಯವಸ್ಥೆ ಈ ಸಂಕಟ ಕಾಲದಲ್ಲಿ ಪ್ರಾಮುಖ್ಯವಾಗಿ ಈ ಖಾತೆಗೆ ಆಗಬೇಕಾದುದು ಅಗತ್ಯ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಹಿರಿಯರು, ವಯೋವೃದ್ಧರು ಸ್ವಲ್ಪ ಮಾತನಾಡಿದರೂ ಬೆಲೆ ಇರತಕ್ಕ ವ್ಯಕ್ತಿ ಕೈಯಲ್ಲೇ ಈ ಖಾತೆ ಇರುವುದರಿಂದ ಆಲಾಯಿದ ಆಲೋಚನೆ ಮಾಡಿ ಸಾರ್ವಜನಿಕರಿಂದ ಡೊನೇಷನ್ ಎತ್ತಿ ಗ್ರಾಮಾಂತರ ಪ್ರದೇಶದ ವೈದ್ಯಕೀಯ ಸೌಕರ್ಯವನ್ನು ಉತ್ತಮಪಡಿಸುವುದಕ್ಕೆ ಸ್ಥೂಲವಾಗಿ ಸಂಕ್ಷೇಪವಾಗಿ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ. ಇಲ್ಲದೇ ಹೋದರೆ, ತಮ್ಮ ಮೇಲೆ ಅಪಾರವಾದ ಕಳಂಕ ಈ ರಾಜ್ಯದಲ್ಲಿ ಉಳಿಯುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಈ ವತ್ತಿನ ದಿವಸ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ ಬೃಹದಾಕರವಾಗಿದೆ. ಆದುದರಿಂದ, ಹಾಲಿ ಇರತಕ್ಕ ಡೈರೆಕ್ಟರ್ ಜೊತೆಗೆ ಹೆಣ್ಣುಮಕ್ಕಳ ಡೈರೆಕ್ಟರ್ ಒಬ್ಬರನ್ನು ಮಾಡಲಿಕ್ಕೆ ವ್ಯವಸ್ಥೆ ಮಕ್ಕಳ ಮಾಡಿ, ಈ ಹೆಣ್ಣು ಸೇವಾ ಅವಶ್ಯಕತೆಗಳನ್ನು ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇತ್ತೀಚೆಗೆ ವೈದ್ಯಾಧಿಕಾರಿಗಳ ವರ್ಗಾವರ್ಗಿಯನ್ನು ತಾವೇ ವಹಿಸಿಕೊಂಡಿದ್ದೀರಿ ಎಂದು ಒಂದು ದೂರಿದೆ. ಇದರಿಂದ ಅನೇಕಜನ ಮಾತನಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಬಹಳ ಗೌರವದಿಂದ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡುತ್ತೇನೆ, ಈ ಇಳೀ ವಯಸ್ಸಿನಲ್ಲಿ ಆಡಳಿತ ದಕ್ಷರು ಎಂದು ಹೆಸರಾದಂಥ ತಮಗೆ ಕಳಂಕ ಬರುವಂಥದಾಗಿದೆ. ಆದುದರಿಂದ ಈ ಕಳಂಕವನ್ನು ಪರಿಹರಿಸಿಕೊಳ್ಳುವ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳಿ ಈ ದಿವಸ ಹೆಚ್ಚು ಕಾಲ ಇಲ್ಲದಿದ್ದರೂ ಅಧ್ಯಕ್ಷರು ಕೇವಲ ಕೆಲವೇ ನಿಮಿಷಗಳ ಅವಕಾಶ ಮಾಡಿಕೊಟ್ಟಿದ್ದಾರೆ. ಅವರನ್ನು ವಂದಿಸಿ ಪ್ರಾಯಶಃ ನನಗೆ ಸಲಹೆಗಳಿಗೆ ಮನ್ನಣೆ ಕೊಟ್ಟು ಒಂದು ಸುವ್ಯವಸ್ಥಿತ ರೀತಿಯಲ್ಲಿ ತಮ್ಮ ಹೃದಯ ಅಲೋಪತಿ ವಿಷಯದಲ್ಲಿ ಹೇಗೆ ಮಾರ್ಪಾಡು ಆಯಿತೋ ಹಾಗೆ ಈ ಸಲಹೆ ವಿಷಯದಲ್ಲೂ ಮಾರ್ಪಾಡು ಆಗಬೇಕು, ಕಲ್ಲಾಗಿ ಉಳಿಯಬಾರದು, ಕರಗಬೇಕೆಂದು ಹೇಳಿ ನನ್ನ ಮಾತನು ಮುಗಿಸುತ್ತೇನೆ.

† SRI H. SIDDAVEERAPPA.—Hon. Deputy Speaker, I have heard with very great attention to the various proposals made by the Hon.

Members who spoke on both the sides. So far as this Health Department is concerned, I find from the first speech that was delivered and the encomiums paid from all the sides of the House and the brickbats I have received from some sides that the department has not earned the good name or goodwill. May be the department or the minister in charge of it is responsible for it. Sir, in the newspaper of 30th January, Deccan Herald there is an article called "Government hospitals in a bad state." Probably the hon. members have read it. That is an U.N.I. survey. Surveying about the hospitals in all the major cities in the country, about Bangalore what they say is.

"Overcrowding. The authorities say there is considerable overcrowding in Government hospitals. Though hospitals are provided with adequate funds they occasionally run out of essential drugs because of General shortage. Hospitals are not equipped with stand-by generators."

This is with regard to the general state of hospitals in the country.

5-30 P. M.

Now so far as our State is concerned what I have stated here in my report of 1974-75 was subject to the criticism by the hon. Member who inivted the debate. He said everything is not well and there are so many defects and loopholes also. He forgot that in this country the number of people going to hospitals has increased not double-fold but ten-fold and the number of diseases are also curious, there are unknown diseases and diseases which are unheard of have cropped up and unfortunately they start from the same district from which the hon. Member Sri Kagodu Thimmappa comes. While I was in hospital as I was not well I received a letter from him and I wrote to him from the hospital a letter expressing my deep sorrow about what is happening and I immediately contacted the top experts in the country who are from Delhi and from other place. I sent Dr. Mani who is an expert. Government is anxious that the health of the people is paramount. I tried my very best. I wrote to Mr. Thimmappa and all other and Mr. Kagodu Thimmappa was good enough in writing to me thanking the Government for what they have done. Why I am saying this is for the reason that our problems are not one-fold but they are manifold. All kinds of unknown diseases have cropped up on account of food adulteration and water adulteration. Both these adulterations are added to the bad health of our people Unfortunately in this country what has happened is you hold the Health Department responsible for all these things. But there are two things, preventive and curative. The Health Department comes only on the curative side. The preventive side is confined in our country to what is called the local bodies which are

manned by some Sanitary Inspectors. They do not know what it is. Most of our diseases, I dare say, start from the hotels and hotel meals and from the bad stuff that we get there. All these things could be looked after in a synthetic manner provided only one ministry or department is responsible for both the preventive and curative measures. But that is not the case now. Supposing to-day some people get affected by food poisning then the Health Department comes into the picture. The health is a synthetic whole and not one that could be looked after differently. In this case w at has happended is, my friends being to say that the money that is going to be given to this Health Department will be a huge waste and there are thirty-eight to forty thousand staff includings professors and others. This year Government inspite of its difficulties has been able to provide more than Rs. 35 crores for this department. We want to see that the health of the people improves. How the health of the people could be improved? It could be only when there is co-operation between people and the Doctors. The Doctors, as you say, are bad, may be many may be like that. But I can tell you with my experience or with the experience of others that some Doctors are really good. They deserve to be adorned and worshipped not all of them. It is sa d that Doctor is fond of money. It is so because it is these private Madical Colleges that have been responsible for creating this money-craze among Doctors. How can that happen otherwise ? A man who goes and joins College paying forty to fifty thousands of rupees expecting that he should get it back, how can he get it unless he tries to extract it from the people although he may not have the mind to do so. Among our Junior Doctors I have seen some of them have got the urge to serve the country and it is said how is it that many Doctors go out? They feel the atmosphere in this country or in this State is so suffocated that they cannot work with a free mlnd or without mental difficulties, That is why many of them prefer to go out. Jamaica and other countries have recently advertised and nearly 600 to 700 people applied for posts expecting that they would go and atleast lead a very free life, not having all these kinds of so many inhibitions to which they are subjected to. Therefore it is the duty of everyone of us in this country to see that the medical profession is raised to its highest pedastal which it had occupied at the time of late Dr. Venkataramiah and others, when those Doctors were really worshipped. Now what has happened in the first place the preivous Government committed a mistake, though I do not have the right to criticise, they ought not to have created more medical colleges, Our State would have been sufficeint with only four medical colleges. When these more medical colleges came, only as a mercenery or this money earning then only all this trouble started. I am speaking with my experience. Until then these difficulties were not there, Moreover even in admissions there is no admission as on merit. Now-a-days we have to provide for various sections like Scheduled Caste, Scheduled Tribes, Backward classes and various other sections.

All these things are there. Therefore, what we call merit and merit alone can never have a place in the admission to the Medical Colleges. I have examined it with my experience. I tried my best to request these private Medical Colleges to help the Government and see that they improve the morale. But I am very sorry to say that they never heeded to me. In fact, I was one of those who had the greatest sympathy for them. Now I have come to the conclusion that so long as the private Medical Colleges are there, medical education will never be a success and it is bound to fail. Therefore, I requested my colleagues in the Ca inet for the constitution of a Committee to go into this, and now they have constituted what is called a sub-Committee. We are now g ing through it; either we must nationalise them and take them or see what best can be done. These private Medical Colleges ave created more harm than good in this country. They might have created a few graduates more. How they admit, how admission takes place and how things take place, my friend Sri P. M. Bangi expressed it much better than myself. We did put some of our non-officials in these committees, but they were not heard of. That is why the Commissioner for Health said; 'I am not attending any one of your committees, because you never care for us; you never agree to follow our decisions.' Therefore, from the last two meetings, the nominees of the Government are not attending these committees. This is how things are going on in private Medical Colleges.

Coming to Government Colleges, I do not think any one of my friends have any complaint. Of course, there may be some difficulties here and there, and they have been managed quite properly. One of my friends said that our per capita expenditure was Rs. 6/- per head. It is not correct. This year it comes to Rs. 10/- per head, because our budget is Rs. 3692.410 lakhs and the population is 31 million. If we work at it, it comes to about Rs. 10/- per head. What is more, about the employment opportunities I may say that after this Government has came into existence, I think we have appointed in all not less than 2000 people in this Department–I am saying it by memory starting from professors, assistant professors and various others. Regarding these appointments I should say that the Government has no hand, absolutely no hand so far as those that are to be appointed by the Public Service Commission are concerned at their level. Regarding the promotional quota there is a Committee with Chief Secretary to the Government as Chairman with the Health Secretary and various other Senior Secretaries to Government. They alone make the selection and I have not disagreed even with one; I have simply agreed with their selection. I have accepted what they have done and I have allowed them to make selection according to their own merits.

Even with regard to the purchases, about which my esteemed friend Sri Kagodu Thimmappa has some feeling, I can tell him that there are two committees for purchases, in which I have no hand.

Both the committees meet and decide. In these Committees there are senior officers, the Health Secretary Commissioner for Industries and various other people. It is they that make the selection and I can assure the House that I have not disagreed even with one of their selection. Whatever selections they have made I have simply okayed it. It any hon. member wants to see the file, I am prepared to place it on the Table of the House. So far, I have not sullied my opinion. There is no need for me. I am a man with very few things. I live only with two jawar breads. I have got a son who is not depending on me. If anybody wants to see what I am, let them go and see in my village. My relatives are what they were 30 years ago. Hon. members should not make oblique raference about my character. While I was in Hanumanthiyya's Ministry, we made it a point to see that if anybody raised any objection against any of the Ministers if you look into the previous records Sri Nagi Reddy said and if it is proved he must be hanged before the public in front of the Krishnarajendra Market. Today, unfortunately what has happened? Any man may be said to be anything. Therefore let my friend Sri Kagodu Thimmappa have any opinion about me. But in this case, I would request him most earnestly to disabuse his mind, and if anybody says that I am wrong I am prepared to take any punishment. He said somebody was there in the hospital. There are some good friends of mine, who stood by me when I was in my worst days about 25-30 years ago, when I was sent out unceremoniously by the Ministry they stood by me. I can never forget them. They can maintain anybody. They are not needy people. Friendship is more important than a Ministership.

This year, as the hon members are aware the budget allotment has been increased thanks to the Hon'ble Minister for Finance. Of course, once I had to quarrel with him. He was good enough to say, "All right, let the Health Minister have something more". I agree with the hon. members that the Family Planning Programme has failed I know, I am aware and I have found out that the programme is not as it was last year. I have cautioned that officer, and I am thinking as to what to do in that connection. Unless we pay top priority to the Family Planning Programme, all the Five Year Plans will go to dogs. Nothing is going to succeed in this country unless control the families.

Some hon. member said about the Block Level Extension Educators. We have appointed some, we have passed orders But the Government of India have said". do not appoint and do not issue any orders because we do not want them now". I can tell the hon. member that when we get a clearance from them that they can be appointed, these will be the people that wil be first appointed even though they are over-aged. I am prepared to tell my hon. friend that It will be done.

Here in our State we have got 1,656 hospltals. I can tell the House that my mind is rural-oriented. I am not for improving things in cities. I want to see whatever little we can give that must go to the rural areas. Rural areas have been totally neglected. 80 per cent of the population, I must admit here, have not gone and asked for anything. There are some big hospitals like Cancer Hospital Mental Hospital, etc., where we expect very many big results. Mental Hospital will be an international Centre. Therefore, we have decided to see that at least some rudimentary medical aid is given in the rural areas. What we have done is, we have given one small hospital for a 5000 population. After all in village for 'KEMMU AND NAGADI' they need not go to Thirthahalli or Sagar. But in other places, we have got General Hospitals in very many places. My friend said about the X-Ray Plants. Formerly the X-Ray plants were only about a dozen, now we have got about 176 plants, out of them 6 have gone out of order. I know Thirthahalli is the only place unfortunately where we have not been able to give X-ray to that Hospital. About 100 rural hospitals we have given them in places where they have not got IPC so India Population Project is concerned, I am very happy to say that it is working well. It is ably managed by two officers viz., Muniswamy Gowda and Dr. Achuta and also by another gentleman Gaffore. They have managed it very

well and it is coming up very well. I am receiving encomiums from the Government of India saying that yours is coming very well. If it succeeds well, they are going to take it up in the next five years.

There is one other scheme which the Government of India have now thought of Myltipurpose Health Workers Scheme. There are 7-8 type of people. One man to be trained so that he may look for small things like fever etc, and vaccination so that they may be used to a larger number of years. This multipurpose scheme will come into force in 1977. They have said that they are going to give to our State also.

Departmental Recruitment Committee. I had appointed some hundred doctors. Somebody said might have appointed only my community people. I said gdon't want it, let it go to the PSC. We sent them to PSC and unfortunately it so happened that about 30 per cent of them did not get at all. I do not know what has happened Somebody came and said and told me about this. I said I will not onterfere beeause if I interfere I may get the same blame.

SRI M.S. KRISHNAN.—There are serious allegations about the manner of recruitment by the PSC.

SRI H. SIDDAVEEMAPPA.—How am I responsible? What has happened is this. In our group somebody said, it is better to look

into the list of doctors appointed by me. Probably he might have thought that I might have appointed more Lingayats. When the list was looked into, there were not more 40–50 Lingayats.

Therefore Sir, I believe, to the best of my abolities, I have been trying to mange this Department. A time was when I managed about more than 7–8 portfolion. Some of my friends know it, I never had this difficulty because I am the Health Minister, I get this ill-health but not otherwise. I just went to Bijapur to see how those people live. I went from Taluk to Taluk, I drank water in 40–50. places, I ate all their rotties. When I came back I got the virus. My doctor says that I may require two months more to come back to my normal health. I am grateful to Dr. Dass who brought me back to life. One Ayurveda man had come who was about to send me to Vaikunta. I say this because there are very good doctors in our State. We need not go outside. Now what I am requesting the Honourable House is, by all means when they go wrong blame them Sometimes it so happens, among the doctors, there are good doctors, there are bad doctors, just as everywhere there is a good man and a bad man, we cannot say that all are bad and it is the duty of every one of you to point out to me how those doctors work. I have found in some places, even in Bowring Hospital, things are not good. I immediately got that Committee cancelled. Now what I am saying is, you must become partners in adminisrration because health is so important. I have nominated the members on the Committee. I request you to better go and examine, and if anything goeswrong, tell me to set it right. I want you to help me and if anything wrong goes there, we shall try to improve it. This year the Finance Minister is good enough to give me more money. Let us utillise all that money for better performance.

I thank you for having heard me,

ಶ್ರೀ ಕೆ. ಹೆಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕು ಬೋರ್ಡಿನವರೇ ನಡೆಸುತ್ತಿರತಕ್ಕಂಥ ಆಯುರ್ವೇದ ಆಸ್ಪತ್ರೆಗಳನ್ನು ಸರ್ಕಾರದವರೇ ತೆಗೆದುಕೊಳ್ಳುತ್ತಾರೆಂದು ಹೇಳಿದ್ದೀರಿ ಅದು ಏನಾಯಿತು ?

ಶ್ರೀ ಎಚ್ ಸಿದ್ದವೀರಪ್ಪ —ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು ಆದರೆ ದುಡ್ಡಿನ ಅಡಚಣೆ ಬಂದು ಬಿಟ್ಟಿತು ಆದುದರಿಂದ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ದುಡ್ಡು ಬಂದಿತು ಎಂದು ಹೇಳಿದಿರಲ್ಲಾ ?

ಶ್ರೀ ಎಚ್. ಸಿದ್ದವೀರಪ್ಪ —ಈಗ ದುಡ್ಡು ಬಂದಿರುವುದೇನೋ ನಿಜ, ಆದರೆ ಅದು ಔಷಧಿಗಳಿಗೇ ಎಕ್ವಿಪ್‌ಮೆಂಟ್‌ಗೆ, ರಿಪೇರ್ಸ್‌ಗೆ, ಈಗ ಬೌರಿಂಗ್ ಆಸ್ಪತ್ರೆ ೨೦ ವರ್ಷದಿಂದ ಸುಣ್ಣ ಬಣ್ಣ ಕಾಣದೆ, ಇರತಕ್ಕಂಥ ಪರಿಸ್ಥಿತಿಯಲ್ಲಿತ್ತು. ಈಗ ಅದಕ್ಕೂ ಸ್ವಲ್ಪ ಹಣ ಖರ್ಚಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅಸಿಸ್ಟೆಂಟ್ ಸರ್ಜನ್ಸ್‌ಗೆ ಪೋಸ್ಟ್ ಗ್ರಾಜುಯೇಷನ್‌ಗೆ ಕಳುಹಿಸಿದಾಗ ಅವರಲ್ಲಿ ಕೆಲವರಿಗೆ ಅರ್ಧ ಸಂಬಳ ಕೊಡುತ್ತಿದ್ದೀರಿ ಮತ್ತೆ ಕೆಲವರಿಗೆ ಕಾಲು ಭಾಗ ಸಂಬಳವನ್ನು ಕೊಡುತ್ತಿದ್ದೀರಿ, ಆದರೆ ಈ ಸಾರಿ ಒಂದೇ ಮಾಡಿದ್ದೀರಿ ಆದುದರಿಂದ ತಾವು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಯೋಚನೆ ಮಾಡತಕ್ಕಂಥ ವಿಷಯ. ಈಗ ಪೋಸ್ಟ್ ಗ್ರಾಜುಯೇಟ್ಸ್ ನಮ್ಮ ಸ್ಟೇಟ್‌ನಲ್ಲಿ ಬೇಕಾದಷ್ಟು ಜನ ಇದ್ದಾರೆ. ಈಗ ಏನಾಗುತ್ತದೆಂದರೆ ೨೦೦ ಜನ ಅಸಿಸ್ಟೆಂಟ್ ಸರ್ಜನ್ಸನ್ನು ಪೋಸ್ಟ್ ಗ್ರಾಜ್ಯುಯೇಟ್ ಸ್ಟಡೀಸ್‌ಗೆ ಕಳುಹಿಸಿಕೊಟ್ಟರೆ ೨೦೦ ಆಸ್ಪತ್ರೆಗಳಲ್ಲಿ ಕೆಲಸ ಖಾಲಿ ಬೀಳುತ್ತದೆ. ಅಲ್ಲಿ ಎರಡು ವರ್ಷದವರೆಗೆ ಡಾಕ್ಟರ್ ಇರುವುದಿಲ್ಲ. ಆದುದರಿಂದ ಅದನ್ನು ಯೋಚನೆ ಮಾಡಬೇಕೆಂದು ಹೇಳಿದೆ. ಕೊಡಬಾರದೆಂದು ಏನೂ ಇಲ್ಲ. From next year, I personally believe, post graduation is absolutely essential in the case of those that are working in the Medical Education Department, but not in other cases. Post graduationಗೆ ಹಾಕಬೇಕೆಂದರೆ ನನಗೆ ಬರುವ ಕಷ್ಟವೇನೆಂದರೆ, I cannot appoint a local man in that particular place.

6–00 P.M.

I personally believe a post-graduate is absolutely essential. Since you have mentioned it, I will examine it and see what I can do in the matter. But I cannot appoint local men there in that particular place.

ಶ್ರೀ ಎಸ್. ಹಮೀದ್‌ಷಾ.—ಸ್ವಾಮಿ, ಯುನಾನಿ ಬಗ್ಗೆ ತಮ್ಮದು ಒಂದು ಸ್ಟ್ಯಾಂಡಿಂಗ್ ಪ್ರಾಮಿಸ್ ಇದೆ.

SRI H. SIDDAVEERAPPA.—Unani College will be opend this year.

ಶ್ರೀ ಎಸ್. ಹಮೀದ್‌ಷಾ.—ಸರ್ಕಾರಿ ಆಸ್ಪತ್ರೆಯಲ್ಲಿ ಖಾಸಗಿ ಉದ್ಯೋಗವನ್ನು ಮಾಡುವುದನ್ನು ನಿಲ್ಲಿಸಬೇಕೆಂದು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದರಿಂದ ಬಹಳ ಜನರಿಗೆ ತೊಂದರೆಯಾಗಿರುವುದರಿಂದ ಇದನ್ನು ನಿಲ್ಲಿಸುತ್ತೀರಾ?

SRI H. SIDDAVEERAPPA.—I agree with you. There a lot of complaints that these people are misusing that facility. We may probly withdraw that order. Inspite of our instructions, they were doing. Time may come when we will have to give them non-practice allowance. We will examine and see what can be done in the matter. ಮಾನ್ಯ ಅಧ್ಯಕ್ಷರೆ, ನಾವು ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್‌ನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಈಗಾಗಲೇ ಕೆಲವರು ದೊಡ್ಡ ದೊಡ್ಡ ಬೋರ್ಡುಗಳನ್ನೂ ಕೂಡ ಹಾಕಿಕೊಂಡಿದ್ದಾರೆಂದು ಕಂಪ್ಲೈಂಟ್‌ಗಳು ಬರುತ್ತಿವೆ. ಹುಬ್ಬಳ್ಳಿಯಲ್ಲೂ ಕೂಡ ಕೆಲವರು ಮಾಡುತ್ತಾರೆಂದು ಗೊತ್ತಾಯಿತು. ಇದು ಏನೆಂಬುದನ್ನು ವಿಚಾರ ಮಾಡುತ್ತೇವೆ.

SRI B. B. SAYANAK.—In Belgaum Hospital, during the months of October, November and December last the bread was not supplied and now the bread is being supplied from Bangalore to Belgaum which is costlier. May I request the Hon. Minister to ask the Civil Surgeon to call for tender and get the bread for Belgaum.

SRI H. SIDDAVEERAPPA.—I will get it examined. I will ask the Director to get it examined.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.—ಸ್ವಾಮಿ ಅಧ್ಯಕ್ಷರೆ, ವಿಶ್ವವಿದ್ಯಾನಿಲಯದ ಅಡ್ವೈಸರಿ ಕಮಿಟಿಯ ರಿಪೋರ್ಟ್ ಬಂದಿದೆ. ಹೆಲ್ತ್ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ?

ಶ್ರೀ ಹೆಚ್. ಸಿದ್ದವೀರಪ್ಪ.—ಹೆಲ್ತ್ ವಿಶ್ವವಿದ್ಯಾನಿಲಯವನ್ನು ಮಾರ್ಚ್ ಆದಮೇಲೆ ಮಾಡುತ್ತೇವೆ. ಅದಕ್ಕೆ ದುಡ್ಡು ಜಾಸ್ತಿಯಾಗುತ್ತದೆಂದು ಕೆಲವರು ಹೇಳುತ್ತಾರೆ. ನಮಗೆ ಫೈನಾನ್ಸ್ ಕಮಿಟ್‌ಮೆಂಟ್ ಏನೂ ಇಲ್ಲ. I have received a letter from the U. G. C. saying that they are going to give aid to our State. The Uttar Pradesh and another State are also going to have it. The Chairman of U.G.C. has stated that he is going to give aid in the financial year.

SMT. WINNIFRED F. FERNADIS.—When the Hon. Minister had come to Coondapnur, the public represented to him that the Government Hospital at Coondapur should be upgraded and also I have represented to him several times that the X-Ray Plant which has gone out of order for the last one year shou'd be repaired or a new plant should be installed. An Engineer who had come over there had opined that a new Plant should be installed. In this Place a T.B. Clinic is ready. Unless there is an X-Ray plant, the T. B. Clinic cannot be operated. Will you kindly consider our request?

SRI H. SIDDAVEERAPPA.—I will recollect when I visit Coondapur.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.—ಸರ್ಕಾರದ ವತಿಯಿಂದ ಹೋಮಿಯೋಪತಿ ಕಾಲೇಜನ್ನು ತೆರೆಯುತ್ತೀರಾ ?

SRI H. SIDDAVEERAPPA.—We have have met Director of Punjab. The Director of Indian System of Medicine is a Karnataka man. He will look into it.

SRI M. S. KRISHAN.—It appears the seniortity list of Doctors in the teaching Hospitals has not been finalised while different ru'es have been framed for the Department of Indian Medicine. Will you kindly consider this?

SRI H. SIDDAVEERAPPA.—What applies to the Medical Department will be applied to that also. Unfortunately what has happened is these people of the Promotion Committee do not meet when I want. I heve been telling them to meet soon and finalise it.

ಶ್ರೀ ಅನಿವಾಳ ನಂಜಪ್ಪ.—ಮಾನ್ಯ ಅಧ್ಯಕ್ಷರೆ, ಪುರಸಭೆಯ ಪರಿಯುದಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗಳಿಗೆ ಏನಾದರೂ ಆರ್ಥಿಕ ಸಹಾಯ ಬೇಕಾದರೆ ಪುರಸಭೆಯವರು ಕೊಡಬೇಕೆಂದು ಯುನಾನಿಮಸ್ ಆಗಿ ತೀರ್ಮಾನ ಮಾಡಿಕೊಂಡಿದ್ದರೂ ಸಂಬಂಧಪಟ್ಟ ಮಂತ್ರಿ ಶಾಖೆಯವರು ಆರೋಗ್ಯ ಮತ್ತು ವಿದ್ಯಾಭ್ಯಾಸಕ್ಕೆ ಪುರಸಭೆಯವರು ಹಣವನ್ನು ಕೊಡಕೂಡದೆಂದು ೧೯೭೩ನೇ ಇಸವಿಯಲ್ಲಿ ಸರ್ಕ್ಯುಲರ್ ಹೊರಡಿಸಿದ್ದಾರಲ್ಲಾ ಸ್ವಾಮಿ, ಇದು ಏತಕ್ಕೆ ?

ಶ್ರೀ ಹೆಚ್. ಸಿದ್ದವೀರಪ್ಪ.—೫೦ ಸಾವಿರ ರೂಪಾಯಿಗಳನ್ನು ಕೊಡುತ್ತಾರೆಂದು ನೀವು ಪತ್ರ ಬರೆದಿದ್ದೀರಿ. ಪೌರಾಡಳಿತ ಮಂತ್ರಿಗಳು ಒಪ್ಪಿಕೊಂಡರೆ ಅದನ್ನು ತೆಗೆದುಕೊಂಡು ನಾನು ಕೆಲಸ ಮಾಡುತ್ತೇನೆ

SRI K. PRABHAKAR.—In order to materialise all the recommendations and proposals in regard to development of Ayurveda system will the Government be pleased to appoint separately one technically qualified Director exclusively at the Directorate level ?

SRI H. SIDDAVEERAPPA.—I am sorry I have already done it.

ಶ್ರೀ ಎಂ. ವಿ. ರುದ್ರಪ್ಪ.—ಹೊಸದುರ್ಗ ತಾಲ್ಲೂಕಿಗೆ ಒಂದು ಜನರಲ್ ಆಸ್ಪತ್ರೆ ಬೇಕೆಂದು ಕೇಳಿ ೩ ವರ್ಷ ಆಗುತ್ತಾ ಬಂತು. ಇದುವರೆಗೂ ಇನ್ನೂ ಏನೂ ಆಗಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.- ಐ. ಪಿ. ಸಿ ಪ್ರಾಜೆಕ್ಟ್ ಪ್ರಕಾರ ನಿಮ್ಮ ಹೊಸದುರ್ಗ ತಾಲ್ಲೂಕಿಗೆ ಒಂದು ದೊಡ್ಡ ಆಸ್ಪತ್ರೆಯೇ ಬರುತ್ತದೆ.

MADAM SPEAKER.—I put the Demands to the vote of the House. The qnestion is :

"That the respective sums not exceeding the amounts mentioned in the list of Demands be granted to Government to defray the charges which will come in course of payment during the financial year for the period ending with 31st day of March 1956 in respect of Demand Nos 25 and 26."

*The motion was adopted and the sums are granted.*
*The motion for Demands for Grants adopted by the House, are reproduced below :—*

DEMAND NO 25.—MEDICAL SERVICES AND FAMILY PLANNING

Madam/Sir, on the recommendation of the Governor, I beg to move:

"That a sum not exceeding Rs. 30,25,85,000 be granted to the Government to defray the charges which will come in course of payment during the financial year ending 31st day of March 1976 in respect of Demand No. 25 Medical Services and Family Planning."

DEMAND NO. 26.—PUBLIC HEALTH AND SANITATION

Madam/Sir, on the recommendation of the Governor, I beg to move :

"That a sum not exceeding Rs. 5,61,90,000 be granted to the Government to defray the charges which will come in course of payment during the financial year ending 31st day of March 1976 in respect of Demand No. 26 Public Health and Sanitation."

MADAM SPEAKER.—Now, the House stands adjourned to meet omorrow at 1 P.M.

(The House adjourned at Ten Minutes past Six of the Clock to meet again at One of the Clock on Wednesday the 5th March 1975).

L. C.